ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ


'ಸಂವಿಧಾನದ ಕಾಲಾಳು'
ತೀಸ್ತಾ ಸೆತಲ್ವಾಡ್
ನೆನಪುಗಳು




ಸಂಪುಟ 13 | ಸಂಚಿಕೆ 17 | ಏಪ್ರಿಲ್ 22-28, 2019 | ಪುಟ 16 | ರೂ.10/-

Web : www.janashakthi.co.in, e-mail : js_weekly@yahoo.com

ಬಿಜೆಪಿ 'ಸಂಕಲ್ಪ ಪತ್ರ' : ಜನತೆಯ ಬಾಧೆಗಳ ಬಗ್ಗೆ ಅಘಾತಕಾರಿ ಮೌನ




SBI
भारतीय स्टेट बैंक STATE BANK OF INDIA
(Constituted under the State Bank of India Act, 1955)
Corporate Centre, State Bank Bhavan, Madame Cama Road, Nariman Point, Mumbai - 400021
इलेक्टोरल बॉण्ड / ELECTORAL BOND
(IN THE FORM OF PROMISSORY NOTE)
जारी करने की तिथि / DATE OF ISSUE : 10 APR 2018
जारी करने की तिथि से 15 दिनों तक वैध / VALID UPTO 15 DAYS FROM THE DATE OF ISSUE
लिखत की राशि / VALUE OF THE INSTRUMENT : ₹ 1,000/- (Rupees One Thousand only)



ಚುನಾವಣಾ ಬಾಂಡ್' ಎಂಬ ಕುಟಿಲ ಯೋಜನೆ

ಕಾಂಗ್ರೆಸ್ 'ನ್ಯಾಯ" ಯೋಜನೆ : ಪ್ರಜಾಪ್ರಭುತ್ವ ಸಾಕಾರಗೊಳಿಸುವ ದಾರಿಯಲ್ಲ

ನರೇಂದ್ರ ಮೋದಿ: ಅದಾನಿ, ಅಂಬಾನಿ ಕಾಯುವ ಚೌಕಿದಾರ್





ಚುನಾವಣಾ ಆಯೋಗದ ವಿಶ್ವಾಸಾರ್ಹತೆಯ ಸವಾಲು

ಶಬರಿಮಲೆ: ಪ್ರಧಾನಿಗಳ ಕಲುಷಿತಕಾರೀ, ಧ್ರುವೀಕರಣದ ಟಿಪ್ಪಣಿಯ ಮೇಲೆ ತಕ್ಷಣವೇ ಸೂಕ್ತ ಕ್ರಮ ಕೈಗೊಳ್ಳಿ – ಚುನಾವಣಾ ಆಯೋಗಕ್ಕೆ ಸಿಪಿಐ(ಎಂ) ಆಗ್ರಹ

"ಮೋದಿ ಆಚಾರ ಸಂಹಿತೆಯನ್ನು ಉಲ್ಲಂಘಿಸುತ್ತಿದ್ದಾರೆ ಎಂಬುದಕ್ಕಷ್ಟೇ ಅಲ್ಲ, ಚುನಾವಣಾ ಆಯೋಗದ ಆದೇಶಕ್ಕೂ ಸವಾಲು ಒಡ್ಡುತ್ತಿದ್ದಾರೆ ಎಂಬುದರ ಸ್ಪಷ್ಟ ಉದಾಹರಣೆ"

ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ನೀಲೋತ್ಪಲ ಬಸು ಅವರು ಎಪ್ರಿಲ್ 16 ರಂದು ಮುಖ್ಯ ಚುನಾವಣಾ ಅಯುಕ್ತರಿಗೆ ಮತ್ತೊಂದು ಪತ್ರ ಬರೆಯಬೇಕಾಗಿ ಬಂದಿದೆ. ಇದು ಚುನಾವಣಾ ರ‍್ಯಾಲಿಗಳಲ್ಲಿ ಶಬರಿಮಲೆ ಕುರಿತಂತೆ ಸ್ವತಃ ಪ್ರಧಾನ ಮಂತ್ರಿಗಳ ಕೋಮುಧ್ರುವೀಕರಣ ತರುವ ಉದ್ದೇಶದ ಮಾತುಗಳನ್ನು ಕುರಿತಾದ್ದು.

ದೇಶದ ಸರ್ವೋಚ್ಚ ನ್ಯಾಯಾಲಯ ಚುನಾವಣಾ ಆಯೋಗಕ್ಕೆ ಧ್ರುವೀಕರಣದ ಪ್ರಯತ್ನಗಳ ವಿರುದ್ಧ ತಾನಾಗಿಯೇ ಕ್ರಮ ಕೈಗೊಳ್ಳಲು ಸಾಕಷ್ಟು ಅಧಿಕಾರಗಳು ಇವೆ, ಅವನ್ನು ಚಲಾಯಿಸಬೇಕು ಎಂದು ಇತ್ತೀಚೆಗೆ ನೆನಪಿಸಿದೆ. ಮತ್ತು ಚುನಾವಣಾ ಆಯೋಗ ಕೂಡ ಕೆಲವು ರಾಜಕೀಯ ಮುಖಂಡರ ಮೇಲೆ ಆದೇಶಗಳನ್ನು ಹೊರಡಿಸಿದೆ ಎಂಬುದು ಗಮನಾರ್ಹ. ಈಗ ಮಾದರಿ ಆಚಾರ ಸಂಹಿತೆಯ ಮತ್ತೊಂದು ನಗ್ನ ಉಲ್ಲಂಘನೆಯ ಪ್ರಕರಣ ನಡೆದಿದ್ದು, ಇದರಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಪಾತ್ರದ ವಿರುದ್ಧವೂ ತಕ್ಷಣವೇ ಕ್ರಮ ಕೈಗೊಳ್ಳಬೇಕೆಂದು ನೀಲೋತ್ಪಲ ಬಸು ತಮ್ಮ ಪತ್ರದಲ್ಲಿ ಬಲವಾಗಿ ಆಗ್ರಹಿಸಿದ್ದಾರೆ. ಚುನಾವಣಾ ಪ್ರಚಾರದಲ್ಲಿ ಸಮಾಜವನ್ನು ಧ್ರುವೀಕರಿಸುವ ವಿಷಯಗಳನ್ನು ಎಳೆದು ತಂದು ವಾತಾವರಣವನ್ನು ಕಲುಷಿತಗೊಳಿಸಲಾಗುತ್ತಿದೆ. ಎಪ್ರಿಲ್ 13 ರಂದು ನರೇಂದ್ರ ಮೋದಿಯವರು ತಮಿಳುನಾಡಿನ ರಾಮನಾಥಪುರಂನ ಥೇಣಿಯಲ್ಲಿ ಮತ್ತು ಕರ್ನಾಟಕದ ಬೆಂಗಳೂರಿನಲ್ಲಿ ಚುನಾವಣಾ ರ‍್ಯಾಲಿಗಳಲ್ಲಿ ಹೇಳಿರುವ ಮಾತುಗಳು ಈ ಪ್ರವೃತ್ತಿಯನ್ನು ಎತ್ತಿ ತೋರಿವೆ.

ಥೇಣಿಯ ಚುನಾವಣಾ ಸಭೆಯಲ್ಲಿ ಮಾತಾಡುತ್ತ ಅವರು, ಕಮ್ಯುನಿಸ್ಟರು ಮತ್ತು ಮುಸ್ಲಿಂ ಲೀಗ್ ಶಬರಿಮಲೆಯಲ್ಲಿ ಅಪಾಯಕಾರಿ ಆಟವಾಡುತ್ತಿದ್ದಾರೆ ಮತ್ತು "ನಂಬಿಕೆಯ ಬುಡಕ್ಕೇ ಏಟು ಹಾಕಲು ಸಿದ್ಧರಾಗುತ್ತಿದ್ದಾರೆ" ಎಂದು ಒತ್ತಿ ಹೇಳಿದರು. ಮತ್ತು "ಬಿಜೆಪಿ ಇರುವ ವರೆಗೆ ಯಾರೂ ನಮ್ಮ ನಂಬಿಕೆಯನ್ನು ಧ್ವಂಸ ಮಾಡಲು ಸಾಧ್ಯವಿಲ್ಲ" ಎಂದೂ ಒತ್ತಿ ಹೇಳಿದರು.

ಇದು ಹೇಗೆ ನರೇಂದ್ರ ಮೋದಿಯವರು ಮಾದರಿ ಆಚಾರ ಸಂಹಿತೆಯನ್ನು ಉಲ್ಲಂಘಿಸುತ್ತಿದ್ದಾರೆ ಎಂಬುದಕ್ಕಷ್ಟೇ ಅಲ್ಲ, ಪರೋಕ್ಷವಾಗಿ ಚುನಾವಣಾ ಆಯೋಗದ ಆದೇಶಕ್ಕೂ ಹೇಗೆ ಸವಾಲು ಒಡ್ಡುತ್ತಿದ್ದಾರೆ ಎಂಬುದರ ಒಂದು ಸ್ಪಷ್ಟ ಉದಾಹರಣೆ ಎಂದು ನೀಲೋತ್ಪಲ ಬಸು ತಮ್ಮ ಪತ್ರದಲ್ಲಿ ಹೇಳಿದ್ದಾರೆ. ಶಬರಿಮಲೆ ದೇವಸ್ಥಾನ ಮತ್ತು ಅಯ್ಯಪ್ಪ ದೇವರ ವಿಷಯವನ್ನು ಚುನಾವಣಾ ಪ್ರಚಾರದಲ್ಲಿ ಬಳಸಬಾರದು ಎಂದು ಚುನಾವಣಾ ಆಯೋಗ ಈ ಮೊದಲೇ ರಾಜಕೀಯ ಪಕ್ಷಗಳಿಗೆ ಆದೇಶ ಹೊರಡಿಸಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಈ ಸಂದರ್ಭದಲ್ಲಿ ಸಿಪಿಐ(ಎಂ) ಮುಖಂಡರು ತಮ್ಮ ಪತ್ರದಲ್ಲಿ ಶಬರಿಮಲೆ ಪ್ರಶ್ನೆಯನ್ನು ನೆನಪಿಸಿದ್ದಾರೆ. **ಎಲ್.ಡಿ.ಎಫ್. ಸರಕಾರ ತಾನು ನಂಬಿಕೆಯ ವಿರುದ್ಧ ನಿಂತಿಲ್ಲ ಎಂದು ಮತ್ತೆ–ಮತ್ತೆ ಒತ್ತಿ ಹೇಳುತ್ತ, ಸುಪ್ರಿಂ ಕೋರ್ಟಿನ ಆದೇಶದ ಜ್ಯಾರಿಗಷ್ಟೇ ತನ್ನನ್ನು ಸೀಮಿತಗೊಳಿಸಿಕೊಂಡು ಬಂದಿದೆ. ಇಲ್ಲಿ ನಂಬಿಕೆಯ ಪ್ರಶ್ನೆಯನ್ನು ತರುವುದರ ಮೂಲಕ ಮತ್ತು ಕೇರಳದ ಎಲ್.ಡಿ.ಎಫ್. ಸರಕಾರವನ್ನು ದೂಷಿಸುವ ಮೂಲಕ ಪ್ರಧಾನ ಮಂತ್ರಿಗಳು "ನಂಬಿಕೆ"ಯ ಜನವಿಭಾಗಕ್ಕೆ ಮನವಿ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ, "ಇದು ಮಾದರಿ ಆಚಾರ ಸಂಹಿತೆಗೆ ಮತ್ತು ತಮ್ಮ ನಿರ್ದಿಷ್ಟ ಆದೇಶಕ್ಕೆ ಕೂಡ ವಿರುದ್ಧವಾಗಿದೆ"** ಎಂಬುದನ್ನು ಸಿಪಿಐ(ಎಂ) ಈ ಪತ್ರದಲ್ಲಿ ಮುಖ್ಯ ಚುನಾವಣಾ ಆಯುಕ್ತರ ಗಮನಕ್ಕೆ ತಂದಿದೆ. ಅಲ್ಲದೆ, ಮಾಧ್ಯಮಗಳು ಮತ್ತು ಇಂಟರ್‌ನೆಟ್‌ನ ಈ ದಿನಗಳಲ್ಲಿ ಈ ಮಿತಿಗೆ ಭೌಗೋಳಿಕ ಗಡಿಗಳು ಇಲ್ಲ ಎಂದೂ ಸಿಪಿಐ(ಎಂ) ಹೇಳಿದೆ.

"ಭಾರತದ ಚುನಾವಣಾ ಆಯೋಗವೇ ಒಂದು ಸ್ವತಂತ್ರ ಸಂವಿಧಾನಿಕ ಪ್ರಾಧಿಕಾರವಾಗಿರುವುದರಿಂದ ಮತ್ತು ಸುಪ್ರಿಂ ಕೋರ್ಟ್ ಆದೇಶ ಸಂವಿಧಾನಿಕ ವ್ಯವಸ್ಥೆಯ ಭಾವನೆಯನ್ನು ಹೊಂದಿರುವುದರಿಂದ, ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಜ್ಯಾರಿಗೊಳಿಸಿದ್ದಕ್ಕೆ ಎಲ್.ಡಿ.ಎಫ್. ಸರಕಾರವನ್ನು ಮತ್ತು ಕಮ್ಯುನಿಸ್ಟರನ್ನು ದೂಷಿಸುವುದು ವಾತಾವರಣವನ್ನು ಕಲುಷಿತಗೊಳಿಸುವುದಷ್ಟೇ ಅಲ್ಲ, ಚುನಾವಣಾ ಪ್ರಚಾರದ ಮಿತಿಗಳನ್ನು ನಿರೂಪಿಸುವ ಸಂವಿಧಾನಿಕ ವ್ಯವಸ್ಥೆಯನ್ನೂ ಬುಡಮೇಲು ಮಾಡಿದಂತಾಗುತ್ತದೆ " ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ದೇಶದ ಸರ್ವೋಚ್ಚ ನ್ಯಾಯಾಲಯ ಚುನಾವಣಾ ಆಯೋಗಕ್ಕೆ ಧ್ರುವೀಕರಣದ ಪ್ರಯತ್ನಗಳ ವಿರುದ್ಧ ತಾನಾಗಿಯೇ ಕ್ರಮ ಕೈಗೊಳ್ಳಲು ಸಾಕಷ್ಟು ಅಧಿಕಾರಗಳು ಇವೆ, ಅವನ್ನು ಚಲಾಯಿಸಬೇಕು ಎಂದು ಇತ್ತೀಚೆಗೆ ನೆನಪಿಸಿರುವುದನ್ನು, ಮತ್ತು ಚುನಾವಣಾ ಆಯೋಗ ಕೂಡ ಕೆಲವು ರಾಜಕೀಯ ಮುಖಂಡರ ಮೇಲೆ ಆದೇಶಗಳನ್ನು ಹೊರಡಿಸಿರುವುದನ್ನು ಗಮನಿಸುತ್ತ, "ನಾವು, ಆದ್ದರಿಂದ, ಪ್ರಧಾನ ಮಂತ್ರಿಗಳ ಪ್ರಯತ್ನಗಳು ಮತ್ತು ನಗ್ನ ಉಲ್ಲಂಘನೆಯಲ್ಲಿ ಅವರ ಪಾತ್ರದ ವಿರುದ್ಧ ತಕ್ಷಣವೇ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತಮ್ಮನ್ನು ಬಲವಾಗಿ ಆಗ್ರಹಿಸುತ್ತೇವೆ" ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಸದಸ್ಯ ನೀಲೋತ್ಪಲ ಬಸು ತಮ್ಮ ಪತ್ರದಲ್ಲಿ ಹೇಳಿದ್ದಾರೆ. ಈ ಉಲ್ಲಂಘನೆಯನ್ನು ಕರಾರುವಾಕ್ಕಾಗಿ ವರದಿ ಮಾಡಿರುವ ಮಾಧ್ಯಮ ವರದಿಯ ಭಾಗವನ್ನು ಈ ಪತ್ರಕ್ಕೆ ಲಗತ್ತಿಸಲಾಗಿದೆ.

ಮುಕ್ತ ಮತದಾನವನ್ನು ನಡೆಸುವ ಚುನಾವಣಾ ಆಯೋಗದ ಆಶ್ವಾಸನೆ ಹುಸಿಯಾಗುತ್ತಿದೆ–ಸಿಪಿಐ(ಎಂ)

"ಕ್ರಿಯಾಹೀನತೆಯ ಮೂಲಕ ಆಳುವ ಪಕ್ಷದ ಗೂಂಡಾಗಳಿಗೆ ಅನುಕೂಲ ಕಲ್ಪಿಸುವಲ್ಲಿ ಸಕ್ರಿಯವಾಗಿರುವಂತೆ ಕಾಣುತ್ತದೆ"

ಎಪ್ರಿಲ್ 15 ರಂದು ಸಿಪಿಐ(ಎಂ)ನ ನಿಯೋಗವೊಂದು ದಿಲ್ಲಿಯಲ್ಲಿ ಮುಖ್ಯ ಚುನಾವಣಾ ಆಯುಕ್ತರನ್ನು ಭೇಟಿ ಮಾಡಿ ತ್ರಿಪುರಾದಲ್ಲಿ ಮತ್ತು ಪಶ್ಚಿಮ ಬಂಗಾಲದಲ್ಲಿ ಮುಕ್ತ ಮತ್ತು ನ್ಯಾಯಯುತವಾಗಿ ಚುನಾವಣೆ ನಡೆಸುವ ತನ್ನ ಚುನಾವಣಾ ಕರ್ತವ್ಯವನ್ನು ನಿಭಾಯಿಸುವುದಾಗಿ ನೀಡಿದ ಆಶ್ವಾಸನೆಯನ್ನು ಎಪ್ರಿಲ್ 11ರಂದು ನಡೆದ ಮೊದಲ ಹಂತದ ಮತದಾನದ ವೇಳೆಯಲ್ಲಿ ಈಡೇರಿಸಿಲ್ಲ ಎಂಬುದನ್ನು ಅವರ ಗಮನಕ್ಕೆ ತಂದಿದೆ. ಎಪ್ರಿಲ್ 11ರಂದು ಪಶ್ಚಿಮ ತ್ರಿಪುರಾ ಲೋಕಸಭಾ ಕ್ಷೇತ್ರದ ಮತದಾನದಲ್ಲಿ ಬಹಳಷ್ಟು ಅಕ್ರಮಗಳು ನಡೆದಿದ್ದು, 464 ಮತಗಟ್ಟೆಗಳಲ್ಲಿ ಮರು ಮತದಾನ ಏರ್ಪಡಿಸಬೇಕು ಮತ್ತು ಪೂರ್ವ ತ್ರಿಪುರಾ ಕ್ಷೇತ್ರದಲ್ಲಿ ಇದು ಮರುಕಳಿಸದಂತೆ ಕ್ರಮ ವಹಿಸಬೇಕು ಎಂದು ಆಗ್ರಹಿಸಿದೆ.

ಪಕ್ಷದ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರ ನೇತೃತ್ವದ ನಿಯೋಗದಲ್ಲಿ ಪೊಲಿಟ್‌ಬ್ಯುರೊ ಸದಸ್ಯರಾದ ನೀಲೋತ್ಪಲ ಬಸು ಮತ್ತು ಪಶ್ಚಿಮ ತ್ರಿಪುರಾ ಕ್ಷೇತ್ರದ ಎಡರಂಗದ ಅಭ್ಯರ್ಥಿ ಶಂಕರ ಪ್ರಸಾದ್ ದತ್ತ ಇದ್ದರು.

ಈ ಬಗ್ಗೆ ಹಾಗೂ ಪಶ್ಚಿಮ ಬಂಗಾಲದಲ್ಲಿಯೂ ನಡೆಯುತ್ತಿರುವ ಚುನಾವಣಾ ಆಚಾರ ಸಂಹಿತೆಯ ಉಲ್ಲಂಘನೆಗಳು ಮತ್ತು ಇತರ ಅಕ್ರಮಗಳತ್ತವೂ ನಿಯೋಗ ಮುಖ್ಯ ಚುನಾವಣಾ ಆಯುಕ್ತರ ಗಮನ ಸೆಳೆಯಿತು, ಈ ಕುರಿತಂತೆ ಎರಡು ಮನವಿ ಪತ್ರಗಳನ್ನು ಅವರಿಗೆ ಸಲ್ಲಿಸಲಾಗಿದೆ. ಮುಕ್ತ ಹಾಗೂ ನ್ಯಾಯಯುತ ಚುನಾವಣೆಗಳನ್ನು ನಡೆಸುವುದು ಸಂವಿಧಾನದ ಕಲಮು 324ರ ಪ್ರಕಾರ ಚುನಾವಣಾ ಆಯೋಗದ ಕರ್ತವ್ಯ, ಇದನ್ನು ನಿಭಾಯಿಸುವಲ್ಲಿ ತ್ರಿಪುರಾ ಮತ್ತು ಪಶ್ಚಿಮ ಬಂಗಾಲದಲ್ಲಿ ಇರುವ ಅಡಚಣೆಗಳ ಬಗ್ಗೆ ಈ ಮೊದಲೇ ಪೂರ್ಣ ಆಯೋಗದೊಂದಿಗೆ ಚರ್ಚಿಸಲಾಗಿತ್ತು ಕೂಡ. ಆಯೋಗ ಈ ಕುರಿತು ನಿರ್ದಿಷ್ಟ ಕ್ರಮಗಳ ಬಗ್ಗೆ ಆಶ್ವಾಸನೆಯನ್ನು ಕೂಡ ಕೊಟ್ಟಿತ್ತು.

ಆದರೆ ಎಪ್ರಿಲ್ 11ರ ಘಟನೆಗಳನ್ನು ನೋಡಿದ ಮೇಲೆ, ಚುನಾವಣಾ ಆಯೋಗ ತನ್ನ ಕ್ರಿಯಾಹೀನತೆಯ ಮೂಲಕ ಆಳುವ ಪಕ್ಷ ಮತ್ತು ಅದರ ಗೂಂಡಾಗಳ ಕುಕೃತ್ಯಗಳಿಗೆ ಅನುಕೂಲ ಕಲ್ಪಿಸಿಕೊಡುವಲ್ಲಿ ಸಕ್ರಿಯವಾಗಿದೆ ಎಂದೇ ಭಾವಿಸಬೇಕಾಗಿದೆ ಎಂದು ಸಿಪಿಐ(ಎಂ) ಖೇದ ವ್ಯಕ್ತಪಡಿಸಿದೆ.

"ತ್ರಿಪುರಾದ ಜನತೆ ಭಾರತದ ಚುನಾವಣಾ ಆಯೋಗದ ಸ್ವತಂತ್ರ ಪಾತ್ರಕ್ಕೆ ಅಪಕೀರ್ತಿ ಬರಬಾರದು ಎಂದು ಕಳಕಳಿಯಿಂದ ನಿರೀಕ್ಷಿಸುತ್ತಿದೆ"

ತ್ರಿಪುರಾದಲ್ಲಿ ಮತದಾನ ಸಾಮಾನ್ಯ ರೀತಿಯಲ್ಲಿ ನಡೆಯಲು ಅಡ್ಡಿಯಾಗಬಹುದಾದ ಅಕ್ರಮಗಳ ಸ್ವರೂಪದ ಬಗ್ಗೆ ಮೊದಲೇ ವಿವರವಾದ ಸೂಚನೆಗಳನ್ನು ಆಯೋಗಕ್ಕೆ ಸಲ್ಲಿಸಲಾಗಿತ್ತು. ಆದರೆ ಈ ಎಲ್ಲ ಮುನ್ನೆಚ್ಚರಿಕೆಗಳು ವ್ಯರ್ಥವಾಗಿವೆ ಎಂದು ಸಿಪಿಐ(ಎಂ) ತನ್ನ ಮನವಿ ಪತ್ರದಲ್ಲಿ ಆಳವಾದ ಆತಂಕ ಹಾಗೂ ನಿರಾಸೆಯನ್ನು ವ್ಯಕ್ತಪಡಿಸಿದೆ. ಮಾರ್ಚ್ 6ರಂದು ಪೂರ್ಣ ಚುನಾವಣಾ ಆಯೋಗದೊಂದಿಗೆ ನಡೆದ ಸಭೆಯಲ್ಲಿ ಮತಗಟ್ಟೆಗಳು ಮತ್ತು ಪ್ರತಿಪಕ್ಷಗಳ ಪೋಲಿಂಗ್ ಏಜೆಂಟರುಗಳ ಭದ್ರತೆಗೆ ಕೇಂದ್ರೀಯ ಪಡೆಗಳನ್ನು ನಿಯೋಜಿಸಬೇಕು, ಸಾಮಾನ್ಯ ಮತದಾರರಲ್ಲಿ ವಿಶ್ವಾಸ ಮೂಡಿಸಲು ಅವುಗಳ ರೂಟ್‌ಮಾರ್ಚ್ ಏರ್ಪಡಿಸಬೇಕು ಎಂಬ ಒಪ್ಪಂದಕ್ಕೆ ಬರಲಾಗಿತ್ತು. ಆದರೆ ಎಪ್ರಿಲ್ 11ರಂದು ಪಶ್ಚಿಮ ತ್ರಿಪುರಾ ಕ್ಷೇತ್ರದಲ್ಲಿ ಅದು ಎಲ್ಲಿಯೂ ಕಾಣ ಬರಲಿಲ್ಲ. ಇಬ್ಬರು ಸಿಪಿಐ(ಎಂ) ಅಭ್ಯರ್ಥಿಗಳ ಭದ್ರತೆಯ ವ್ಯವಸ್ಥೆಯೂ ಇರಲಿಲ್ಲ.

ಪಶ್ಚಿಮ ತ್ರಿಪುರ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿಯ ಮುಖ್ಯ ಪೋಲಿಂಗ್ ಏಜೆಂಟ್ ನೇಮಿಸಿದ ಪೋಲಿಂಗ್ ಏಜೆಂಟರುಗಳು ಕಾನೂನು ಪ್ರಕಾರ ಮಾಡಬೇಕಾಗಿದ್ದ ಕರ್ತವ್ಯಗಳನ್ನು ನಿರ್ವಹಿಸಲು ಬಿಟ್ಟಿಲ್ಲ. ಹಲವಾರು ಮತಗಟ್ಟೆಗಳಲ್ಲಿ ಸಿಸಿಟಿವಿ ಸೌಲಭ್ಯವೇ ಇರಲಿಲ್ಲ. ಲೈವ್ ವೀಡಿಯೋ ದಾಖಲಾಗದಂತೆ ಮಾಡಲಾಗಿತ್ತು, ಈ ಮೂಲಕ ದೊಡ್ಡ ಪ್ರಮಾಣದಲ್ಲಿ ಗೂಂಡಾಗಿರಿ ಮತ್ತು ಕುಕೃತ್ಯಗಳ ಸಾಕ್ಷ್ಯ ಸಿಗದಂತೆ ಮಾಡಲಾಗಿದೆ.

464 ಮತಗಟ್ಟೆಗಳಲ್ಲಿ ಮತದಾನದಲ್ಲಿ ಪೂರ್ಣ ಪ್ರಮಾಣದಲ್ಲಿ ಮೋಸ ನಡೆದಿದೆ. ಆದ್ದರಿಂದ ಈ ಮತಗಟ್ಟೆಗಳಲ್ಲಿ ಮರುಮತದಾನ ನಡೆಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ. ಸಿಪಿಐ(ಎಂ) ಅಭ್ಯರ್ಥಿ ಶಂಕರಪ್ರಸಾದ್ ದತ್ತ ಈಗಾಗಲೇ ಈ ಕ್ಷೇತ್ರಗಳ ವೀಡಿಯೋ ರೆಕಾರ್ಡಿಂಗ್‌ಗಳನ್ನು ಕೊಡಬೇಕು ಎಂದು ಆಗ್ರಹಿಸಿದ್ದಾರೆ, ಇವು ಇಲ್ಲಿ ಎಂತಹ ಮತ್ತು ಎಷ್ಟರ ಮಟ್ಟಿಗೆ ಕುಕೃತ್ಯಗಳು ನಡೆದಿವೆ ಎಂಬುದನ್ನು ತೋರಿಸುತ್ತವೆ ಎಂದು ಅವರು ಹೇಳಿದ್ದಾರೆ. ಮರು ಮತದಾನ ನಡೆಯಬೇಕಾದ ನಿರ್ದಿಷ್ಟ ಮತಗಟ್ಟೆಗಳ ಸಂಖ್ಯೆ, ವಿಧಾನಸಭಾ ಕ್ಷೇತ್ರದ ವಿಭಾಗ ಮುಂತಾದ ವಿವರಗಳನ್ನು ಈಗಾಗಲೇ ಚುನಾವಣಾ ಆಯೋಗಕ್ಕೆ ಸಲ್ಲಿಸಲಾಗಿದೆ. ಸಿಪಿಐ(ಎಂ) ಮನವಿ ಪತ್ರದೊಂದಿಗೆ ಪಶ್ಚಿಮ ತ್ರಿಪುರಾ ಲೋಕಸಭಾ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿಗಳ, ಸಿಪಿಐ(ಎಂ)ನ ಪೋಲಿಂಗ್ ಏಜೆಂಟರುಗಳ ದೂರುಗಳನ್ನು, ಜತೆಗೆ ಈ ಹಿಂದೆ ಸಿಪಿಐ(ಎಂ) ಈ ಕ್ಷೇತ್ರಗಳಲ್ಲಿ ವಹಿಸಬೇಕಾದ ಮುನ್ನೆಚ್ಚರಿಕೆ ಬಗ್ಗೆ ಆಯೋಗಕ್ಕೆ ಸಲ್ಲಿಸಿದ ಪತ್ರಗಳ ಪ್ರತಿಯನ್ನೂ ಲಗತ್ತಿಸಲಾಗಿದೆ.

ತ್ರಿಪುರಾ ಪೂರ್ವ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಜಿತೇಂದ್ರ ಚೌಧುರಿ ಕೂಡ ಗಾಗಲೇ ಹಲವಾರು ಸಂಗತಿಗಳನ್ನು ಆಯೋಗದ ಗಮನಕ್ಕೆ ತಂದಿದ್ದು, ಎಪ್ರಿಲ್ 11ರಂದು ತ್ರಿಪುರಾ ಪಶ್ಚಿಮ ಕ್ಷೇತ್ರದಲ್ಲಿ ನಡೆದಿರುವ ಘಟನೆಗಳ ಹಿನ್ನೆಲೆಯಲ್ಲಿ ಅವುಗಳನ್ನು ಕೂಡ ಸಿಪಿಐ(ಎಂ)ನ ಮನವಿ ಪತ್ರದೊಂದಿಗೆ ಮುಖ್ಯ ಚುನಾವಣಾ ಆಯುಕ್ತರಿಗೆ ಸಲ್ಲಿಸಲಾಗಿದೆ. ಜಿತೇಂದ್ರ ಚೌಧುರಿ ಕೇಂದ್ರೀಯ ಪೊಲೀಸ್ ವೀಕ್ಷಕರಿಗೆ ಮತ್ತು ರಿಟರ್ನಿಂಗ್ ಆಫೀಸರಿಗೆ ಈ ಸನ್ನಿವೇಶದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಎಚ್ಚರಿಕೆಯನ್ನೂ ನೀಡಿದ್ದಾರೆ. ಅವುಗಳು ಹೀಗಿವೆ:

1. ಎಲ್ಲ ಸೂಕ್ಷ್ಮ ಮತಗಟ್ಟೆ ಪ್ರದೇಶಗಳಲ್ಲಿ ಮತದಾರರಲ್ಲಿ ವಿಶ್ವಾಸ ಮೂಡಿಸಲು ಎಪ್ರಿಲ್ 17ರ ಸಂಜೆಯ ವರೆಗೆ ಬೃಹತ್ ಪ್ರಮಾಣದಲ್ಲಿ ಗಸ್ತು ತಿರುಗುವ ವ್ಯವಸ್ಥೆ ಮಾಡಬೇಕು.
2. ಚುನಾವಣಾ–ಪೂರ್ವ ಹಿಂಸಾಚಾರದಲ್ಲಿ ಎಫ್.ಐ.ಆರ್. ಗಳಲ್ಲಿ ಹೆಸರಿಸಿದ ವ್ಯಕ್ತಿಗಳನ್ನೆಲ್ಲ ಬಂಧಿಸಬೇಕು, ಚುನಾವಣಾ ಪ್ರಕ್ರಿಯೆ **ಪುಟ 7 ಕ್ಕೆ**

ತ್ರಿಪುರಾದಲ್ಲಿ ಕಾನೂನು ವ್ಯವಸ್ಥೆ ಸರಿಯಿಲ್ಲ ಎಂದು ಚುನಾವಣಾ ಆಯೋಗ ಗುರುತಿಸಿದರೂ ಎಡಪಕ್ಷಗಳ ಬೆಂಬಲಿಗರ ಮೇಲೆ ಬಿಜೆಪಿಯ ಬೆದರಿಕೆಗಳು ಮುಂದುವರೆಯುತ್ತಿವೆ

ಸಿಪಿಐ(ಎಂ) ಪೊಲಿಟ್‌ಬ್ಯರೊ ಸದಸ್ಯ ನೀಲೋತ್ಪಲ ಬಸು ಮುಖ್ಯ ಚುನಾವಣಾ ಆಯುಕ್ತರಿಗೆ ಎಪ್ರಿಲ್ 17 ರಂದು ಬರೆದಿರುವ ಇನ್ನೊಂದು ಪತ್ರದಲ್ಲಿ ತ್ರಿಪುರಾದಲ್ಲಿ ಆಳುವ ಬಿಜೆಪಿಯೊಂದಿಗೆ ಸಂಬಂಧವಿರುವ ಗೂಂಡಾಗಳ ಹೊಲಸು ಚಟುವಟಿಕೆಗಳು ಮುಂದುವರೆಯುತ್ತಿರುವ ಬಗ್ಗೆ ತಿಳಿಸುತ್ತ ಪಶ್ಚಿಮ ತ್ರಿಪುರಾ ಲೋಕಸಭಾ ಕ್ಷೇತ್ರದ 464 ಮತಗಟ್ಟೆಗಳಲ್ಲಿ ಮರು ಮತದಾನ ನಡೆಸಬೇಕು ಎಂಬ ಪಕ್ಷದ ಆಗ್ರಹವನ್ನು ಪುನರುಚ್ಚರಿಸಿದ್ದಾರೆ.

ಈ ನಡುವೆ ಪೂರ್ವ ತ್ರಿಪರಾ ಕ್ಷೇತ್ರದಲ್ಲಿ ಎಪ್ರಿಲ್ 18ರಂದು ನಡೆಯಬೇಕಾಗಿದ್ದ ಮತದಾನವನ್ನು ಆಯೋಗ ಅಲ್ಲಿ ಕಾನೂನು–ವ್ಯವಸ್ಥೆ ಸರಿಯಿಲ್ಲ ಎಂದು ಹೇಳುತ್ತ ಎಪ್ರಿಲ್ 23ಕ್ಕೆ ಮುಂದೂಡಿದೆ, ಅಲ್ಲಿಗೆ ಹೆಚ್ಚಿನ ಕೇಂದ್ರೀಯ ಪಡೆಗಳನ್ನು ಕಳಿಸಬೇಕು ಎಂದೂ ಹೇಳಿರುವುದಾಗಿ ವರದಿಯಾಗಿದೆ. ಮುಖ್ಯ ಚುನಾವಣಾ ಆಯುಕ್ತರು ತ್ರಿಪುರಾದಲ್ಲಿ ಕಾನೂನು–ವ್ಯವಸ್ಥೆ ಗಂಭೀರವಾಗಿದೆ ಎಂದು ಈ ಮೂಲಕ ಗುರುತಿಸಿರುವುದಕ್ಕೆ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತ ಇದರಿಂದಾಗಿ ಅಲ್ಲಿ ಮುಕ್ತ ಮತ್ತು ನ್ಯಾಯಯುತ ಮತದಾನ ನಡೆಯಲು ಸಾಧ್ಯವಾಗಬಹುದು ಎಂದು ನಿರೀಕ್ಷೆಯನ್ನು ಬಸು ತಮ್ಮ ಪತ್ರದಲ್ಲಿ ವ್ಯಕ್ತಪಡಿಸಿದ್ದಾರೆ.

ಈ ನಡುವೆ ತ್ರಿಪುರಾದಲ್ಲಿ ಆಳುವ ಬಿಜೆಪಿಯೊಂದಿಗೆ ಸಂಬಂಧವಿರುವ ಗೂಂಡಾಗಳ ಅಸಹ್ಯ ಚಟುವಟಿಕೆಗಳು ಮುಂದುವರೆಯುತ್ತಿವೆ. ಈ ಕುರಿತು ಸಿಪಿಐ(ಎಂ)ನ ತ್ರಿಪುರಾ ರಾಜ್ಯಸಮಿತಿ ಎರಡು ಪತ್ರಗಳನ್ನು ಮುಖ್ಯ ಚುನಾವಣಾ ಆಯುಕ್ತರಿಗೆ ಕಳಿಸಿದೆ. ಇಂಡಿಯನ್ ಎಕ್ಸ್‌ಪ್ರೆಸ್ ನಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳನ್ನು ಬೆಂಬಲಿಸುವ ನಾಗರಿಕರ ಮೇಲೆ ಹಾಕುತ್ತಿರುವ ಬೆದರಿಕೆಗಳ ಒಂದು ವರದಿ ಮೈನಡುಗಿಸುವ ಬಿಂಬಗಳೊಂದಿಗೆ ಪ್ರಕಟವಾಗಿದೆ. ಇವು ಮೂರನ್ನೂ ಬಸು ರವರು ತಮ್ಮ ಪತ್ರದೊಂದಿಗೆ ಮುಖ್ಯ ಚನಾವಣಾ ಆಯುಕ್ತರಿಗೆ ಕಳಿಸಿದ್ದಾರೆ.

"ಈಗ ತ್ರಿಪುರಾ ಪಶ್ಚಿಮ ಲೋಕಸಭಾ ಕ್ಷೇತ್ರದಲ್ಲಿ ಮರು ಮತದಾನ ನಡೆಸಬೇಕು ಎಂದು ಯಾವ ಕಾರಣಕ್ಕಾಗಿ ಸಿಪಿಐ(ಎಂ) ಆಗ್ರಹಿಸಿತ್ತೋ ಅದನ್ನು ತಾವು ಗುರುತಿಸಿರುವುದರಿಂದಾಗಿ, 464 ಮತಗಟ್ಟೆಗಳಲ್ಲಿ ಮರುಮತದಾನ ನಡೆಸಬೇಕೆಂಬ ನಮ್ಮ ಆಗ್ರಹವನ್ನೂ ಸ್ವೀಕರಿಸಬೇಕು ಎಂದು ಕೋರುತ್ತೇವೆ. ಈ ಮೂಲಕ ತಮ್ಮ ನಿರ್ದಾರ ತರ್ಕಬದ್ಧ ಅಂತ್ಯವನ್ನು ತಲುಪುವಂತಾಗುತ್ತದೆ" ಎಂದು ನೀಲೋತ್ಪಲ ಬಸು ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಸಂಪಾದಕೀಯ

ಚುನಾವಣಾ ಆಯೋಗದ ವಿಶ್ವಾಸಾರ್ಹತೆಯ ಸವಾಲು

ಇದೇ ಮೊದಲ ಬಾರಿ ಲೋಕಸಭೆ ಚುನಾವಣಾ ಪ್ರಕ್ರಿಯೆಯಲ್ಲಿ ದೇಶದ ಚುನಾವಣಾ ಆಯೋಗ ತೀವ್ರ ಸಾರ್ವಜನಿಕ ವಿಮರ್ಶೆಗೆ ಒಳಗಾಗಿದೆ. ಮಾರ್ಚ್ 10 ರಿಂದ ಮೇ 23 ರವರೆಗೆ ಜಾರಿಯಲ್ಲಿರುವ 'ಮಾದರಿ ನೀತಿ ಸಂಹಿತೆ'ಯ ಬಹಿರಂಗ ಉಲ್ಲಂಘನೆಯಾದಾಗ ಚುನಾವಣಾ ಆಆಯೋಗ ಕಣ್ಣು ಮುಚ್ಚಿ ಕುಳಿತುಕೊಳ್ಳುವ ಮೂಲಕ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರಕ್ಕೆ ರಕ್ಷಣೆ ನೀಡಿದೆ ಎಂಬ ಆರೋಪ ಬಲವಾಗಿ ಕೇಳಿಬಂದಿದೆ. ಉದಾಹರಣೆಗೆ ಭಾರತದ ಟೆಲಿವಿಶನ್‌ನಲ್ಲಿ ಪ್ರಧಾನಿಯವರ ಪ್ರಥಮ anti satellite ಶಸ್ತ್ರಾಸ್ತ್ರ ಪ್ರಯೋಗದ ಘೋಷಣೆ, ಆಳುವ ಪಕ್ಷದ ಪರವಾಗಿ ರಾಜಸ್ತಾನದ ರಾಜ್ಯಪಾಲರ ಹೇಳಿಕೆ, ಆಳುವ ಪಕ್ಷದ ನಾಯಕರು ಚುನಾವಣಾ ಪ್ರಚಾರದಲ್ಲಿ ಭಾರತದ ಸೈನ್ಯವನ್ನು ಕುರಿತು ಪ್ರಸ್ತಾಪಿಸುವುದು, ಮತ್ತು ಅನೇಕ ರೀತಿಯ ಕೋಮು ದ್ವೇಷವನ್ನು ಕೆರಳಿಸುವ ಹೇಳಿಕೆಗಳನ್ನು ನೀಡುವುದು ಮುಂತಾದ ಪ್ರಕರಣಗಳಲ್ಲಿ ಮಾದರಿ ನೀತಿ ಸಂಹಿತೆಯ ನಗ್ನ ಉಲ್ಲಂಘನೆಯಾದಾಗ ಚುನಾವಣಾ ಆಯೋಗ ದೃಢವಾದ ಕ್ರಮಗಳನ್ನು ಕೈಗೊಳ್ಳಲು ಹಿಂದೇಟು ಹಾಕಿದ್ದು ಹಲವು ಪ್ರಶ್ನೆಗಳನ್ನು ಎತ್ತಿ ಹಾಕಿದೆ.

ಚುನಾವಣಾ ಅಕ್ರಮಗಳಿಗೆ ತಡೆಹಾಕಿ ಮುಕ್ತವಾಗಿ ಮತ್ತು ನ್ಯಾಯಸಮ್ಮತವಾಗಿ ಚುನಾವಣೆ ನಡೆಸಲು ಅನುಸರಿಸಲಾಗುತ್ತಿರುವ ಕಾನೂನು ಕ್ರಮಗಳನ್ನು 'ಮಾದರಿ ನೀತಿ ಸಂಹಿತೆ' (MCC) ಎಂದು ಕರೆಯಲಾಗುತ್ತಿದೆ. ಚುನಾವಣೆಗೆ ದಿನಾಂಕ ಘೋಷಣೆ ಆದಾಗಿನಿಂದ ಮತದಾನ ಮುಗಿಯುವ ವರೆಗೆ ಇದು ಜಾರಿಯಲ್ಲಿ ಇರುತ್ತದೆ. ಸರ್ಕಾರ, ರಾಜಕೀಯ ಪಕ್ಷಗಳು, ಚುನಾವಣಾ ಅಭ್ಯರ್ಥಿಗಳು ಇದನ್ನು ಕಟ್ಟು ನಿಟ್ಟಾಗಿ ಪಾಲಿಸಬೇಕಾಗುತ್ತದೆ. ನೀತಿ ಸಂಹಿತೆ ಉಲ್ಲಂಘಿಸಿದವರ ವಿರುದ್ಧ ಕಾನೂನು ಕ್ರಮ ಜರುಗಿಸುವ ಅಧಿಕಾರ ಚುನಾವಣಾ ಆಯೋಗಕ್ಕೆ ಇರುತ್ತದೆ.

ಮಾದರಿ ನೀತಿ ಸಂಹಿತೆ ಮೊದಲ ಆರಂಭವಾದದ್ದು 1960ರಲ್ಲಿ, ಕೇರಳದ ವಿಧಾನ ಸಭಾ ಚುನಾವಣೆಯ ಸಂದರ್ಭದಲ್ಲಿ. ಕೇರಳದ ರಾಜ್ಯ ಆಡಳಿತವು ಸಿದ್ಧಪಡಿಸಿದ 'ನೀತಿ ಸಂಹಿತೆ'ಯನ್ನು ಬುಹುತೇಕ ಎಲ್ಲ ರಾಜಕೀಯ ಪಕ್ಷಗಳು ಒಪ್ಪಿಕೊಂಡವು. ಅನಂತರ 1962 ರ ಲೋಕಸಭಾ ಚುನಾವಣೆಯಲ್ಲಿ ಅದನ್ನು ಅಂಗೀಕರಿಸಲಾಯಿತು. ಆಂದಿನಿಂದ ಅದು ಜಾರಿಯಲ್ಲಿದೆ.

'ಮಾದರಿ ನೀತಿ ಸಂಹಿತೆ'ಯ ಪ್ರಕಾರ ಸರ್ಕಾರ ಹೊಸ ಯೋಜನೆ, ಕಾರ್ಯಕ್ರಮ ಘೋಷಣೆ ಮಾಡುವಂತಿಲ್ಲ ಅಥವ ಅನುಷ್ಠಾನ ಮಾಡುವಂತಿಲ್ಲ. ಚಾಲ್ತಿ ಯೋಜನೆಗಳಿಗೆ ನೀತಿ ಸಂಹಿತೆ ಅನ್ವಯಿಸುವುದಿಲ್ಲ. ಸಚಿವರು, ಶಾಸಕರು ಸರ್ಕಾರಿ ವಾಹನ, ವಸತಿಗೃಹ ಬಳಸುವಂತಿಲ್ಲ. ಬರ, ಪ್ರವಾಹದಂತಹ ಸಂದರ್ಭಗಳಲ್ಲಿ ಮಧ್ಯಪ್ರವೇಶ ಮಾಡಲು ನೀತಿ ಸಂಹಿತೆ ಅಡ್ಡಿ ಬರುವುದಿಲ್ಲ. ಭಾಷಣಗಳಲ್ಲಿ ಪರಸ್ಪರ ಟೀಕೆ, ಟಿಪ್ಪಣಿ ಮಾಡಬಹುದು. ಆದರೆ ವ್ಯಕ್ತಿಗತವಾದ ತೇಜೋವಧೆ, ಜಾತಿನಿಂದನೆ, ಮತೀಯ ಭಾವನೆಗಳನ್ನು ಕೆರಳಿಸುವ ಮಾತುಗಳನ್ನು ಆಡುವುದು ನೀತಿ ಸಂಹಿತೆ ಉಲ್ಲಂಘನೆಯಾಗುತ್ತದೆ.

ಈ ಸಲ ಲೋಕಸಭಾ ಚುನಾವಣಾ ಪ್ರಚಾರ ಆರಂಭವಾದ ಮೇಲೆ ದ್ವೇಷ ಉಗುಳುವ ಭಾಷಣಗಳು ಮಿತಿಮೀರಿ ಹೆಚ್ಚಾಗಿವೆ. ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಸಮಾಜವಾದಿ ಪಕ್ಷದ ಅಜಮ್ ಖಾನ್ ಮುಂತಾದವರು ದ್ವೇಷ ಹರಡುವುದನ್ನೇ ತಮ್ಮ ಭಾಷಣಗಳ ಗುರಿ ಮಾಡಿಕೊಂಡಂತೆ ಕಾಣುತ್ತಿತ್ತು ಪ್ರಧಾನಿ ಮೋದಿ ಅವರು ಸಹ ನೀತಿ ಸಂಹಿತೆ ಉಲ್ಲಂಘಿಸುವಂತಹ ಮಾತುಗಳನ್ನು ಆಡಿದ್ದಾರೆ. ಆದರೆ ಚುನಾವಣಾ ಆಯೋಗ ಮಾತ್ರ ನಿರ್ಲಿಪ್ತ ಧೋರಣೆಯನ್ನು ತಳೆದಂತೆ ಭಾಸವಾಗುತ್ತಿತ್ತು. ಏಪ್ರಿಲ್ 15ರಂದು ಪ್ರಕರಣ ಸುಪ್ರೀಂಕೋರ್ಟ್ ಮುಂದೆ ಬಂದಾಗ ಚುನಾವಣಾ ಆಯೋಗದ ಪರ ವಕೀಲರು ಆಯೋಗಕ್ಕೆ ಕ್ರಮ ಕೈಗೊಳ್ಳುವ ಅಧಿಕಾರವಿಲ್ಲ ಎಂಬಂತೆ ವಾದಿಸಿದರು ಆಯೋಗಕ್ಕೆ ಏನು ಅಧಿಕಾರವಿದೆ ಏನಿಲ್ಲ ಎಂಬುದನ್ನು ಪರಿಶೀಲಿಸುತ್ತೇವೆ.ಎಂದು ಸುಪ್ರೀಂ ಕೋರ್ಟ್ ಕಟುವಾಗಿ ಪ್ರಕ್ರಿಯಿಸಿದ ಯೋಗಿ ಆದಿತ್ಯನಾಥ, ಅಜಾಮ್ ಖಾನ್, ಮಾಯಾವತಿ ಮತ್ತು ಮನೇಕ ಗಾಂಧಿ ಅವರ ಚುನಾವಣಾ ಪ್ರಚಾರಕ್ಕೆ ಆಯೋಗ ನಿರ್ಬಂಧ ಹೇರಿತು ಆಗ ಸುಪ್ರೀಂ ಕೋರ್ಟ್ ಪ್ರತಿಕ್ರಿಯಿಸುತ್ತಾ ಈಗ ಆಯೋಗಕ್ಕೆ ಶಕ್ತಿ ಬಂದಂತೆ ಕಾಣುತ್ತದೆ ಎಂದಿತ್ತು. ಇಷ್ಟಕ್ಕೂ ಸುಪ್ರೀಂ ಕೋರ್ಟ್ ಮಧ್ಯಪ್ರವೇಶ ಮಾಡಬೇಕಾಯಿತು ಎಂಬುವುದು ಮುಖ್ಯವಾಗುತ್ತದೆ ಆದರೆ ಆದಿತ್ಯನಾಥ ನೀತಿ ಸಹಿತೆ ಉಲ್ಲಂಘನೆ ಮುಂದುವರಿಸಿದ್ದಾರೆ.

ಲೋಕಸಭಾ ಚುನಾವಣೆಯ ಮೊದಲ ಎರಡು ಹಂತಗಳ ಮತದಾನ ಮುಗಿದು ಮೂರನೇ ಹಂತದ ಮತದಾನ ಇದೇ ಏಪ್ರಿಲ್ 23 ರಂದು ನಡೆಯಲಿದೆ. ಮೊದಲ ಸುತ್ತಿನ ಮತದಾನದ ಸಂದರ್ಭದಲ್ಲಿ ಹಲವು ಕಡೆ ಹಿಂಸಾಚಾರ ನಡೆದಿದೆ. ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿ ಟಿಡಿಪಿಯ ಒಬ್ಬ ಹಾಗೂ ವೈಎಸ್‌ಆರ್ ಕಾಂಗ್ರೆಸ್ಸಿನ ಒಬ್ಬ ಕಾರ್ಯಕರ್ತರು ಘರ್ಷಣೆಯಲ್ಲಿ ಮೃತಪಟ್ಟಿದ್ದಾರೆ. ಮಹಾರಾಷ್ಟ್ರ ಗಡಚಿರೋಲಿ ಜಿಲ್ಲೆಯಲ್ಲಿ ಬಾಂಬ ಸ್ಫೋಟ ಸಂಭವಿಸಿದೆ. ಜಮ್ಮು–ಕಾಶ್ಮೀರದಲ್ಲಿ ರಾಜಕೀಯ ಭದ್ರತಾ ಯೋಧರಿಗೂ ಚಕಮಕಿ ನಡೆದಿದೆ ಶಾಂತಿಯುತವಾಗಿ ಮತದಾನ ನಡೆಯುವಂತೆ ನೋಡಿಕೊಳ್ಳುವುದು ಚುನಾವಣಾ ಆಯೋಗದ ಮುಖ್ಯ ಜವಾಬ್ದಾರಿಯಾಗಿದೆ ಎರಡನೇ ಹಂತದ ಚುನಾವಣಾ ಮತದಾನದಲ್ಲಿ ಕರ್ನಾಟಕವೂ ಸೇರಿದಂತೆ ಹಲವು ಕಡೆ ಹಿಂಸಾಚಾರದ ಪ್ರಕರಣಗಳು ವರದಿಯಾಗಿವೆ.

ಈ ಸಲ ಅತಿ ಹೆಚ್ಚು ಚುನಾವಣಾ ಅತಿರೇಕಗಳ ನಡೆದದ್ದು ತ್ರಿಪುರ ರಾಜ್ಯದಲ್ಲಿ. ನೂರಾರು ಮತಗಟ್ಟೆಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಸಿಸಿಟಿವಿ ಕ್ಯಾಮೆರಾಗಳನ್ನು ಧ್ವಂಸಗೊಳಿಸಲಾಯಿತು. ಮತದಾರರನ್ನು ಬೆದರಿಸಿ ಮತಗಟ್ಟೆಗಳಿಗೆ ಬರುವುದನ್ನು ತಡೆಯಲಾಗಿತ್ತು ವ್ಯಾಪಕವಾದ ರಿಗ್ಗಿಂಗ್ ನಡೆಯಿತು. ಸಿಪಿಎಂ ಮತ್ತು ಎಡಪಕ್ಷಗಳ ನಿಯೋಗವು ಚುನಾವಣಾ ಆಯೋಗದ ಅಧಿಕಾರಗಳನ್ನು ಬೇಟಿಯಾಗಿ ದೂರು ಸಲ್ಲಿಸಿತ್ತು. ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ನೇತೃತ್ವದಲ್ಲಿ ತೆರಳಿದ ನಿಯೋಗ 1679 ಮತಗಟ್ಟೆ ಗಳ ಪೈಕಿ 464 ಮತಗಟ್ಟೆಗಳಲ್ಲಿ ಮರು ಮತದಾನ ನಡೆಸಬೇಕೆಂದು ಆಗ್ರಹಿಸಿದರು. ಈ ಸಂಧರ್ಭದಲ್ಲಿ ಮಾತನಾಡಿದ ಸೀತಾರಾಮ್ ತ್ರಿಪುರದಲ್ಲಿ ಹಲವು ರೀತಿಯ ಕೈಚಳಕ ಪ್ರಯೋಗಗಳ ಮೂಲಕ ಚುನಾವಣಾ ಅಕ್ರಮಗಳನ್ನು ನಡೆಸಲಾಗಿದೆ. ಯಾರೂ ಮತಗಟ್ಟೆಗೆ ಬರದಂತೆ ನೋಡಿಕೊಳ್ಳುವುದು. ಯಾರಾದರೂ ಬಂದರೆ ಅವರು ವಿರೋಧ ಪಕ್ಷಗಳ ಬೆಂಬಲಿಗರೆಂದು ತಿಳಿದುಬಂದರೆ ಅವರ ಮೇಲೆ ಹಲ್ಲೆ ಮಾಡಿ ಅವರನ್ನು ಓಡಿಸಲಾಗುತ್ತದೆ. ಕೊನೆಯಲ್ಲಿ ಮತದಾನದ ಸಮಯ ಮುಕ್ತಾಯವಾಗುವ ಎರಡು ಗಂಟೆಗಳ ಮೊದಲೇ ಮತ ಗಡ್ಡೆಯನ್ನು ಮುಚ್ಚಲಾಗುತ್ತದೆ ಒಳಗಡೆ ಏನು ನಡೆಯುತ್ತದೆ ಎಂಬುವುದು ಎಲ್ಲರಿಗೂ ತಿಳಿದಿರುವ ವಿಷಯ. ಇದೇ ರೀತಿ ಮುಂದುವರೆದರೆ ಚುನಾವಣಾ ಆಯೋಗದ ಮೇಲೆ ದೇಶದ ಜನತೆಯ ವಿಶ್ವಾಸ ಕಳೆದುಕೊಳ್ಳಲಿದೆ ಎಂದು ಸೀತಾರಾಮ್ ಹೇಳಿದರು.

ಚುನಾವಣೆಯ ಇನ್ನೂ ನಾಲ್ಕು ಹಂತಗಳು ಬಾಕಿ ಇವೆ. ವಿಧಾನಸಭಾ ಚುನಾವಣೆಗಳು ಹಾಗೂ ಉಪ ಚುನಾವಣೆಗಳು ನಡೆಯಲಿವೆ. ಚುನಾವಣಾ ಆಯೋಗದ ಮೇಲೆ ಗುರುತರವಾದ ಜವಾಬ್ದಾರಿ ಇದೆ. ಅದು ಆಳುವ ಸರ್ಕಾರದ ಹಸ್ತಕ್ಷೇಪಕ್ಕೆ ಅವಕಾಶ ನೀಡದೆ ತನ್ನ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳಬೇಕು.

ತ್ರಿಪುರಾ ಪಶ್ಚಿಮ ಲೋಕಸಭಾಕ್ಷೇತ್ರದ 464 ಮತಗಟ್ಟೆಗಳಲ್ಲಿ ಮರು ಮತದಾನವನ್ನು ನಡೆಸಲೇಬೇಕು, ಎಲ್ಲ ಮತದಾರರು ತಮ್ಮ ಹಕ್ಕನ್ನು ಚಲಾಯಿಸಲು ಸಾಧ್ಯವಾಗಬೇಕು –ಸೀತಾರಾಮ್ ಯೆಚುರಿ

ತ್ರಿಪುರಾ ಪಶ್ಚಿಮ ಲೋಕಸಭಾ ಕ್ಷೇತ್ರದಲ್ಲಿ ವ್ಯಾಪಕ ಪ್ರಮಾಣದಲ್ಲಿ ಅಕ್ರಮಗಳು ಮತ್ತು ಮತಗಟ್ಟೆ ಅಪಹರಣಗಳು ನಡೆದಿವೆ, ಗೂಂಡಾಗಳು ಈ ಮೂಲಕ ಮುಕ್ತ ಮತ್ತು ನ್ಯಾಯಯುತ ಮತದಾನ ನಡೆಯಲು ಬಿಟ್ಟಿಲ್ಲ ಎಂಬುದು ಈಗ ಭಾರತದ ಚುನಾವಣಾ ಆಯೋಗದ ತನಿಖೆಯಿಂದಲೇ ಸಿದ್ಧಗೊಂಡಿದೆ. ಇದರಿಂದಾಗಿ, ಆಯೋಗ "ಪ್ರಜಾಪ್ರಭುತ್ವದಲ್ಲಿ ನಮ್ಮ ನಂಬಿಕೆ ಮತ್ತೆ ದೃಢಗೊಳ್ಳುವಂತೆ ಮಾಡುತ್ತದೆ" ಎಂಬ ನಿರೀಕ್ಷೆಯನ್ನು ವ್ಯಕ್ತಪಡಿಸುತ್ತ, 464 ಮತಗಟ್ಟೆಗಳಲ್ಲಿ ಮರು ಮತದಾನವನ್ನು ನಡೆಸಲೇಬೇಕು, ಏಕೆಂದರೆ ಎಲ್ಲ ಮತದಾರರು ತಮ್ಮ ಹಕ್ಕನ್ನು ಸ್ವತಂತ್ರವಾಗಿ ಚಲಾಯಿಸಲು, ಸಂವಿಧಾನದ ಆದೇಶಿಸಿರುವ ರೀತಿಯಲ್ಲೇ ಸಾಧ್ಯವಾಗಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಹೇಳಿದ್ದಾರೆ.

ತ್ರಿಪುರಾ ಪೂರ್ವ ಲೋಕಸಭಾ ಕ್ಷೇತ್ರದಲ್ಲಿ ನಡೆಯಬೇಕಾಗಿದ್ದ ಮತದಾನವನ್ನು **ಪುಟ 4 ಕ್ಕೆ**



ಕಟ್ಟಡ ಕಾರ್ಮಿಕರ ಬದುಕನ್ನು ಸಂಕಷ್ಟಕ್ಕೆ ದೂಡಿದ ಮೋದಿ ಸರಕಾರ

ನೋಟು ಅಮಾನ್ಯೀಕರಣ ಹಾಗೂ ಜಿಎಸ್‌ಟಿ ನೀತಿಗಳನ್ನು ಜಾರಿ ಮಾಡಿ ಕೋಟ್ಯಾಂತರ ಕಟ್ಟಡ ಕಾರ್ಮಿಕರನ್ನು ನಿರುದ್ಯೋಗಿಗಳನ್ನಾಗಿಸಿದ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರ ಮತ್ತೆ ಅಧಿಕಾರಕ್ಕೇರದಂತೆ ತಡೆಯಬೇಕು ಹಾಗೂ ಬಿಜೆಪಿ ಪಕ್ಷದ ಅಭ್ಯರ್ಥಿಗಳ ವಿರುದ್ಧ ಮತ ಚಲಾಯಿಸಬೇಕೆಂದು ಸಿಐಟಿಯು ಸಂಯೋಜಿತಗೊಂಡಿರುವ ದಕ್ಷಿಣ ಕನ್ನಡ ಜಿಲ್ಲಾ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ (CWFI) ಕಟ್ಟಡ ನಿರ್ಮಾಣ ವಲಯದ ಕಾರ್ಮಿಕರು ಹಾಗೂ ಅವರ ಕುಟುಂಬದ ಸದಸ್ಯರಿಗೆ ಕರೆ ನೀಡಿದೆ.

2014 ರಲ್ಲಿ ಅನೇಕ ಭರವಸೆಗಳನ್ನು ನೀಡಿ, ಮತದಾರರನ್ನು ಬಲೆಗೆ ಹಾಕಿ ಅತಿ ಹೆಚ್ಚಿನ ಸ್ಥಾನಗಳನ್ನು ಬಿಜೆಪಿ ಹಾಗೂ ಎನ್‌ಡಿಎ ಮಿತ್ರ ಪಕ್ಷಗಳು ಪಡೆದಿದ್ದವು. ಆದರೆ ತಾನು ನೀಡಿದ ಭರವಸೆಗಳಿಗೆ ವಿರುದ್ಧವಾಗಿ ಹೆಜ್ಜೆ ಹಾಕಿದ ನರೇಂದ್ರ ಮೋದಿ ಸರಕಾರವು ದೇಶದ ಕಾರ್ಮಿಕ ವರ್ಗ ಸ್ವಾತಂತ್ರ್ಯ ಪೂರ್ವದಿಂದ ಹೋರಾಡಿ ತ್ಯಾಗ ಬಲಿದಾನದಿಂದ ಗಳಿಸಿದ್ದ 44 ಕಾರ್ಮಿಕರ ಕಾನೂನುಗಳನ್ನು ಮಾಲಿಕರ ಪರವಾಗಿ ತಿದ್ದುಪಡಿ ಮಾಡಲು ಮುಂದಾಗಿರುವುದು ಖಂಡನೀಯವಾಗಿದೆ.

ಕಟ್ಟಡ ಕಾರ್ಮಿಕರ ಬದುಕಿಗೆ ಸಂಚಕಾರ ತರಲು ನರೇಂದ್ರ ಮೋದಿ ಸರಕಾರ ರದ್ದು ಮಾಡಲು ಹೊರಟಿರುವ ಪ್ರಮುಖ ಕಾನೂನುಗಳಲ್ಲಿ, ದೇಶದ ಕೋಟ್ಯಾಂತರ ಕಟ್ಟಡ ನಿರ್ಮಾಣ ಕಾರ್ಮಿಕರು ನೊಂದಣಿಯಾಗಿರುವ ಹಾಗೂ ಸೌಲಭ್ಯ ಪಡೆಯುತ್ತಿರುವ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಕಾನೂನು 1996 ಹಾಗೂ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸೆಸ್ ಕಾನೂನು 1996 ಗಳು ಸೇರಿವೆ. ಉದ್ದೇಶಿತ ವೃತ್ತಿ ಆಧಾರಿತ ಸುರಕ್ಷೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿ ಕುರಿತ ಸಂಹಿತೆ ಒಳಗೆ ನಮ್ಮ ಕಟ್ಟಡ ಕಾರ್ಮಿಕ ಕಾನೂನುಗಳು ಸೇರಿ ರದ್ದಾಗಲಿವೆ ಎಂಬ ಆತಂಕದ ಸಂಗತಿ ಎದುರಾಗಿತ್ತು. ಆದರೆ ದೇಶಾದ್ಯಂತ ಕಟ್ಟಡ ನಿರ್ಮಾಣ ವಲಯದ ಕಾರ್ಮಿಕರು ಪಕ್ಷಭೇಧ ಮರೆದು ಸರಕಾರದ ಈ ಕ್ರಮವನ್ನು ಪ್ರತಿಭಟಿಸಿದರು. ಅಂತಿಮವಾಗಿ ಲೋಕಸಭೆಯ ವಿಸರ್ಜನೆಯೊಂದಿಗೆ ಉದ್ದೇಶಿತ ಮಸೂದೆ ಅಂಗೀಕಾರವಾಗಲಿಲ್ಲ. ಆದರೆ ಭವಿಷ್ಯದಲ್ಲಿ ಮೋದಿಯವರೇ ಅಧಿಕಾರಕ್ಕೆ ಬಂದರೆ ಈಗ ರೂಪಿಸಿರುವ ಕರುಡು ಮಸೂದೆ ಜಾರಿಗೊಳಿಸುವ ಅಪಾಯವಿದೆ.

ಮೋದಿ ಸರಕಾರ ರೂಪಿಸಿದ್ದ ಮಸೂದೆ ಮುಂದೆ ಕಾಯ್ದೆಯಾಗಿ ಜಾರಿಯಾದರೆ ಆಗುವ ಪರಿಣಾಮಗಳು ಹೀಗಿವೆ

1996 ರಲ್ಲಿ ಜಾರಿಯಾದ ಕಟ್ಟಡ ಕಾರ್ಮಿಕರ ಕಾನೂನು ಹಾಗೂ ಸೆಸ್ ಕಾನೂನುಗಳೆರಡು ರದ್ದಾಗುತ್ತವೆ. ಈಗಾಗಲೇ ನೊಂದಣೆಯಾಗಿರುವ ಗುರುತಿನ ಚೀಟಿಗಳು ರದ್ದಾಗುತ್ತದೆ. ಹೊಸದಾಗಿ ಕೇಂದ್ರದಲ್ಲಿ 'ಪ್ರಧಾನ ಮಂತ್ರಿ ಹಾಗೂ ರಾಜ್ಯದಲ್ಲಿ ಮುಖ್ಯಮಂತ್ರಿ ಅಧ್ಯಕ್ಷತೆ ಹಾಗೂ 'ಕಾರ್ಮಿಕ ಸಚಿವರು ಉಪಾಧ್ಯಕ್ಷರಾಗಿರುವ 'ಸಲಹಾ ಮಂಡಳಿ'ಗಳು ರಚನೆಯಾಗುತ್ತವೆ ಮತ್ತು ಅವುಗಳು ಹಿಂದಿನಂತೆ ತೀರ್ಮಾನ ಕೈಗೊಳ್ಳುವ ಮಂಡಳಿಗಳಾಗಿರುವುದಿಲ್ಲ ಬದಲಾಗಿ ಸಲಹಾ ಮಂಡಳಿಗಳಾಗಿರುತ್ತವೆ.

ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರಿಬ್ಬರೂ ಹೊಸ ರಾಜ್ಯ ಕಲ್ಯಾಣ ಮಂಡಳಿಯಲ್ಲಿ ಕಾರ್ಮಿಕರು ಹೆಸರು ನೊಂದಾಯಿಸಿ ಕೊಳ್ಳಬೇಕು. ಆದರೆ ಈ ನೊಂದಣಿ ಕಡ್ಡಾಯವಲ್ಲ. ಅಸಂಘಟಿತ ವಲಯದ ಕಾರ್ಮಿಕರು 14ನೇ ವಯಸ್ಸಿನಿಂದ ನೊಂದಣಿ ಮಾಡಬಹುದು. ಇದರಿಂದ ಬಾಲ ಕಾರ್ಮಿಕ ಪದ್ದತಿಗೆ ಉತ್ತೇಜನ ದೊರಕುತ್ತದೆ. ರಚನೆಯಾಗುವ ಮಂಡಳಿಗಳಲ್ಲಿ. ಮಾಲೀಕರು, ಸ್ವಯಂ ಸೇವಾ ಸಂಘಗಳು ಮತ್ತು ವಕೀಲರು ನೊಂದಣಿಗೆ ಸಹಾಯ ಮಾಡಬಹುದು. ಕಾರ್ಮಿಕ ಸಂಘಟನೆಗಳ ಪಾತ್ರವಿರುವುದಿಲ್ಲ. ರಾಜ್ಯ ಕಲ್ಯಾಣ ಮಂಡಳಿ ಬರೀ ಸಲಹಾ ಮಂಡಳಿಯಾಗಿರುತ್ತದೆ. ಮಾಲೀಕರು ನೊಂದಣಿ ಮಾಡಬೇಕಾದುದಿಲ್ಲ. ಕಾರ್ಮಿಕರ ಕೆಲಸ ಮತ್ತು ವೇತನ ನಿಯಂತ್ರಣ ಇರುವುದಿಲ್ಲ. ದೇಶದ ಕೋಟ್ಯಾಂತರ ಕಟ್ಟಡ ನಿರ್ಮಾಣ ಕಾರ್ಮಿಕರು ಹಲವು ವರ್ಷಗಳ ಕಾಲ ಹೋರಾಟ ನಡೆಸಿ ಗಳಿಸಿದ ಕಾನೂನುಗಳನ್ನು ಮತ್ತು ಅದರಡಿ ದೊರಕುತ್ತಿದ್ದ ಸೌಲಭ್ಯಗಳನ್ನು ಇಲ್ಲದಂತೆ ಮಾಡುವ ಹುನ್ನಾರದ ವಿರುದ್ಧ ಕಟ್ಟಡ ಕಾರ್ಮಿಕ ಕಾನೂನು–1996 ಉಳಿಸಿ–ಕಟ್ಟಡ ಕಾರ್ಮಿಕಮಂಡಳಿ ಹಾಗೂ ಕಾರ್ಮಿಕರ ಬದುಕನ್ನು ರಕ್ಷಿಸಿ ಎನ್ನುವ ವಿಶಾಲ ಆಂದೋಲನವನ್ನು ಹಾಗೂ ರಾಜ್ಯದ ಲೋಕಸಭಾ ಸದಸ್ಯರ ಮನೆಗಳ ಎದುರು ಹಾಗೂ ಕೇಂದ್ರ ಸಚಿವರ ಮನೆ ಮುಂದೆ ಕಟ್ಟಡ ನಿರ್ಮಾಣ ವಲಯದಲ್ಲಿರುವ ಕಾರ್ಮಿಕ ಸಂಘಟನೆಗಳು ಒಂದಾಗಿ ಪ್ರತಿಭಟನೆ ನಡೆಸಿವೆ.

ಈ ಹೋರಾಟದ ಮುಂದುವರೆದ ಭಾಗವಾಗಿಯೇ ಏಪ್ರಿಲ್ 18 ರಂದು ನಡೆಯಲಿರುವ ಮಂಗಳೂರು ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯ ವಿರುದ್ಧ ಮತ ಚಲಾಯಿಸಿ ಪ್ರಬಲ ಜಾತ್ಯಾತೀತ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಲು ಕಟ್ಟಡ ನಿರ್ಮಾಣ ವಲಯದ ಕಾರ್ಮಿಕರು ಹಾಗೂ ಕುಟುಂಬದ ಸದಸ್ಯರು ಶ್ರಮಿಸಬೇಕೆಂದು ದಕ್ಷಿಣ ಕನ್ನಡ ಜಿಲ್ಲಾ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಯೋಗೀಶ್ ಜಪ್ಪಿನ ಮೊಗರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯೋಗೀಶ್ ಜಪ್ಪಿನಮೊಗರು

ಹೇಳುತ್ತಾರವರು!

ದೇಶ ಪ್ರಕಾಶಿಸುತ್ತಿದೆಯೆಂದು
ಹೇಳುತ್ತಾರವರು–
ದೇವದಾಸಿಯ ಬಾಳಲ್ಲಿ ಕತ್ತಲಿದ್ದರೂ!
ಬೇಸಾಯವೇ ದೇಶದ ಬೆನ್ನೆಲುಬೆಂದು
ಹೇಳುತ್ತಾರವರು–
ರೈತರ ಹೆಣ ಬೀಳುತ್ತಿದ್ದರೂ!
ಹೇಳುತ್ತಾರವರು–
ಕುಡಿಯಲು ನೀರಿಲ್ಲದಿದ್ದರೂ!
ದೇಶ ಕೋಶವೆಲ್ಲ ಯೋಗಮಯವೆಂದು
ಹೇಳುತ್ತಾರವರು–
ಬಾಬಾ ಗುರ್ಮಿಟನೇ ಜೈಲು ಪಾಲಾದರೂ!
ವಂಚಕರನ್ನೆಲ್ಲಾ ಮಟ್ಟಾ ಹಾಕಲಾಗಿದೆಯೆಂದು
ಹೇಳುತ್ತಾರವರು–
ಮೋದಿ ಮಲ್ಯಾ ಪರಾರಿಯಾಗುತ್ತಿದ್ದರೂ!
ಕಪ್ಪು ಹಣ ನಿರ್ನಾಮವಾಯ್ತೆಂದು
ಹೇಳುತ್ತಾರವರು–
ಗಣಿಕಳ್ಳರ ಹಣ ಋಣತ್ಕರಿಸುತ್ತಿದ್ದರೂ!
ದೇಶ ಸ್ವಚ್ಛವಾಗಿದೆಯೆಂದು
ಹೇಳುತ್ತಾರವರು–
ಕೊಳೆಗೇರಿಯ ಮೋರೆ ರಾಚುತ್ತಿದ್ದರೂ!
ಶಾಲಾ ಕಾಲೇಜುಗಳೆಲ್ಲ ಚೆನ್ನಾಗಿವೆಯೆಂದು
ಹೇಳುತ್ತಾರವರು–
ವೇಮುಲನ ದೇಹ ನೇತಾಡುತ್ತಿದ್ದರೂ!
ಸಾಹಿತಿಗಳೆಲ್ಲ ನೆಮ್ಮದಿಯಾಗಿದ್ದಾರೆಂದು
ಹೇಳುತ್ತಾರವರು–
ಕಲಬುರ್ಗಿಯವರ ಆತ್ಮ ತೊಳಲಾಡುತ್ತಿದ್ದರೂ!

–ಹುರುಕಡ್ಲಿ ಶಿವಕುಮಾರ

ತ್ರಿಪುರಾ ಪಶ್ಚಿಮ ಲೋಕಸಭಾ ಕ್ಷೇತ್ರದ 464 ಮತಗಟ್ಟೆಗಳಲ್ಲಿ ಮರು ಮತದಾನವನ್ನು ನಡೆಸಲೇಬೇಕು ... ಪುಟ 3 ರಿಂದ

ಈಗ ಎಪ್ರಿಲ್ 23ಕ್ಕೆ ಮುಂದೂಡಲಾಗಿದ್ದು, ಅಲ್ಲಿ ಪ್ರತಿಯೊಬ್ಬ ಮತದಾರರ ಸುರಕ್ಷಿತತೆಗೆ ಸರಿಯಾದ ಖಾತರಿ ಇರುತ್ತದೆ ಎಂದೂ ಯೆಚುರಿ ಆಶಿಸಿದ್ದಾರೆ. ಮುಕ್ತ ಮತ್ತು ನ್ಯಾಯಯುತ ಚುನಾವಣೆ ನಡೆಯಬೇಕಾದರೆ ನಿರ್ಭೀತ ಮತದಾರರು ಅಗತ್ಯ. ಪ್ರಸ್ತುತ ಅಧಿಕಾರದಲ್ಲಿ ಇರುವ ಸರಕಾರ ಮನಬಂದಂತೆ ವರ್ತಿಸಲು ಬಿಡಲಾಗದು. ಒಂದು ಸ್ವತಂತ್ರ, ಮುಕ್ತ ಮತ್ತು ನ್ಯಾಯಯುತ ಮತದಾನವನ್ನು ನಡೆಸುವ ಮತ್ತು ಚುನಾವಣಾ ಪ್ರಕ್ರಿಯೆಯಲ್ಲಿ ವಿಶ್ವಾಸ ಮೂಡಿಸಬೇಕಾದ ಸಂವಿಧಾನಿಕ ಆದೇಶವನ್ನು ಯಾವುದೇ ಸರಕಾರ ತುಚ್ಛೀಕರಿಸಲು ಚುನಾವಣಾ ಆಯೋಗ ಬಿಡುವುದಿಲ್ಲ ಎಂದೂ ಯೆಚುರಿಯವರು ಆಶಯ ವ್ಯಕ್ತಪಡಿಸಿದ್ದಾರೆ.

"ನಮಗೆ ಈಗಾಗಲೇ ಗೊತ್ತಾಗಿರುವುದನ್ನು ಸ್ವತಂತ್ರವಾಗಿ ಪರೀಕ್ಷಿಸುವ ಅಧಿಕಾರಿಗಳು ಇದ್ದಾರೆ ಎಂಬುದಕ್ಕೆ ನಾವು ಕೃತಜ್ಞರು, ಮತ್ತುಇದು ನಮ್ಮಲ್ಲಿ ಮತ್ತೆ ವಿಶ್ವಾಸವನ್ನು ಮೂಡಿಸಿದೆ. ಏಕೆಂದರೆ, ಸಾವಿರಾರು ಮಂದಿಯನ್ನು ಮತಗಟ್ಟೆಗಳಿಂದ ಹಿಂದೆ ಕಳಿಸಲಾಗಿದೆ, ಒಳಪ್ರವೇಶಿಸಿದವರಿಗೂ ತಮ್ಮ ಹಕ್ಕನ್ನು ಚಲಾಯಿಸಲು ಸಾಧ್ಯವಾಗಲಿಲ್ಲ" ಎಂದು ಹೇಳಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು, ಎಲ್ಲ ಮತದಾರರು ತಮ್ಮ ಪ್ರತಿನಿಧಿಯನ್ನು ದೈಹಿಕ ಅಪಾಯದ ಅಥವ ಜೀವ ಕಳೆಕೊಳ್ಳುವ ಸಾಧ್ಯತೆಯ ಭಯವಿಲ್ಲದೆ ಆಯ್ಕೆ ಮಾಡಲು ಸಾಧ್ಯವಾಗುವಂತಹ ಪರಿಸ್ಥಿತಿ ಏರ್ಪಡುವಂತೆ ಮಾಡುವುದು ಚುನಾವಣಾ ಆಯೋಗಕ್ಕೆ ಸಾಧ್ಯವಾಗುತ್ತದೆ ಎಂಬ ನಿರೀಕ್ಷೆಯನ್ನು ವ್ಯಕ್ತಪಡಿಸಿದ್ದಾರೆ.







ಹೊಸಪೇಟೆ: ಅತ್ಯಾಚಾರ ಆರೋಪಿ ಬಂಧನಕ್ಕೆ ಆಗ್ರಹ

ಬಾಲಕಿ ಮೇಲೆ ಅತ್ಯಾಚಾರ ನಡೆಸಿ ತಲೆಮರೆಸಿಕೊಂಡಿರುವ ಆರೋಪಿ ದೇವರಗುಡಿ ಚಂದ್ರಶೇಖರ್ ಎಂಬಾತನನ್ನು ಬಂಧಿಸುವಂತೆ ಆಗ್ರಹಿಸಿ ದಲಿತ ಹಕ್ಕುಗಳ ಸಮಿತಿ ನೇತೃತ್ವದಲ್ಲಿ ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಶುಕ್ರವಾರ ಇಲ್ಲಿನ ಗ್ರಾಮೀಣ ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಿದರು.

'14 ವರ್ಷದ ಬಾಲಕಿ ಮೇಲೆ ನಿರಂತರ ಮೂರು ತಿಂಗಳು ಅತ್ಯಾಚಾರ ನಡೆಸಿದ್ದರಿಂದ ಆಕೆ ಗರ್ಭವತಿಯಾಗಿದ್ದಾಳೆ. ಇಡೀ ನಾಗರಿಕ ಸಮಾಜ ತಲೆ ತಗ್ಗಿಸುವಂತಹ ಘಟನೆ ಇದು. ಚಂದ್ರ ಶೇಖರ್‌ನನ್ನು ಕೂಡಲೇ ಬಂಧಿಸದಿದ್ದಲ್ಲಿ ಸಾಕ್ಷ್ಯ ನಾಶಪಡಿಸುವ ಸಾಧ್ಯತೆ ಇದೆ' ಎಂದು ಡಿವೈಎಸ್ಪಿಗೆ ಸಲ್ಲಿಸಿರುವ ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

'ಪೊಲೀಸ್ ಇಲಾಖೆಯು ಬಾಲಕಿ ಹಾಗೂ ಅವರ ಕುಟುಂಬ ಸದಸ್ಯರಿಗೆ ರಕ್ಷಣೆ ಕೊಡಬೇಕು. ಎಫ್.ಐ.ಆರ್. ದಾಖಲಿಸಿಕೊಂಡು ಹಲವು ದಿನಗಳು ಕಳೆದಿವೆ. ಹಾಗಾಗಿ, ಕೂಡಲೇ ಆರೋಪಿಯನ್ನು ಬಂಧಿಸಬೇಕು. ಇಲ್ಲವಾದಲ್ಲಿ ಉಗ್ರ ಹೋರಾಟ ನಡೆಸಲಾಗುವುದು' ಎಂದು ಎಚ್ಚರಿಕೆ ನೀಡಿದ್ದಾರೆ.

ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಯು. ಬಸವರಾಜ, ದಲಿತ ಹಕ್ಕುಗಳ ಸಮಿತಿ ರಾಜ್ಯ ಸಂಚಾಲಕ ಗೋಪಾಲಕೃಷ್ಣ ಹರಳಹಳ್ಳಿ, ಜಿಲ್ಲಾ ಸಂಚಾಲಕ ಮರಡಿ ಜಂಬಯ್ಯ ನಾಯಕ, ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ಪ್ರಧಾನ ಕಾರ್ಯದರ್ಶಿ ಬಿ. ಮಾಳಮ್ಮ, ಸಿಪಿಎಂ ಕಾರ್ಯದರ್ಶಿ ಆರ್. ಭಾಸ್ಕರ್ ರೆಡ್ಡಿ, ಅಂಗನವಾಡಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷೆ ಕೆ. ನಾಗರತ್ನಮ್ಮ, ಮುಖಂಡರಾದ ಎಂ. ಗೋಪಾಲ, ಕೆ. ಯಲ್ಲಾಲಿಂಗ, ಕೆ.ಎಂ. ಸಂತೋಷ್ ಕುಮಾರ್, ಕಲ್ಯಾಣಯ್ಯ, ವಿ. ಸ್ವಾಮಿ, ಜೆ. ಶಿವಕುಮಾರ ಪ್ರತಿಭಟನೆಯಲ್ಲಿ ಮೊದಲಾದವರು ಪಾಲ್ಗೊಂಡಿದ್ದರು.

ದಲಿತ ಹಕ್ಕುಗಳ ಸಮಿತಿಯಿಂದ ಜಿಲ್ಲಾ ಜಾಗೃತಿ ಸಮಾವೇಶ

'ಪ್ರಜಾಪ್ರಭುತ್ವ ವ್ಯವಸ್ಥೆ, ದೇಶದ ಸಂವಿಧಾನದ ಮೇಲೆ ನಂಬಿಕೆಯಿಲ್ಲದ ಕೋಮುವಾದಿ ಬಿಜೆಪಿ ವಿರುದ್ಧ ಲೋಕಸಭೆ ಚುನಾವಣೆಯಲ್ಲಿ ಮತ ಚಲಾಯಿಸಿ, ಸಂವಿಧಾನ ವಿರೋಧಿಗಳನ್ನು ಸೋಲಿಸಬೇಕು' ಎಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಯು.ಬಸವರಾಜ ಹೇಳಿದರು.

ದಲಿತ ಹಕ್ಕುಗಳ ಬಳ್ಳಾರಿ ಜಿಲ್ಲಾ ಸಮಿತಿಯಿಂದ ಶುಕ್ರವಾರ ಹೊಸಪೇಟೆಯ ಗೌತಮ ಬುದ್ಧ ಸಭಾಂಗಣದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ 127ನೇ ಜಯಂತಿ ನಿಮಿತ್ತ ಹಮ್ಮಿಕೊಂಡಿದ್ದ 'ಭಾರತದ ಸಂವಿಧಾನ, ಪ್ರಜಾಪ್ರಭುತ್ವ ಮತ್ತು ಸಾರ್ವಭೌಮತ್ವ ರಕ್ಷಣೆ' ಕುರಿತ ವಿಚಾರ ಸಂಕಿರಣ ಹಾಗೂ ದಲಿತ ಹಕ್ಕುಗಳ ಸಮಿತಿಯಿಂದ ಏರ್ಪಡಿಸಲಾಗಿದ್ದ ಜಿಲ್ಲಾ ಜಾಗೃತಿ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

'ಬಿಜೆಪಿ ಮುಖಂಡರು ಹೋದಲ್ಲಿ, ಬಂದಲ್ಲಿ ಸಂವಿಧಾನ ಬದಲಿಸುವ ಮಾತುಗಳನ್ನು ಆಡುತ್ತಾರೆ. ಮೀಸಲಾತಿ ರದ್ದು ಮಾಡಲು ಹಾತೊರೆಯುತ್ತಿದ್ದಾರೆ. ಮನುಸ್ಮೃತಿ ಸಿದ್ಧಾಂತ ಹೇರಲು ಪ್ರಯತ್ನಿಸುತ್ತಿದ್ದಾರೆ. ಪ್ರಜಾಪ್ರಭುತ್ವ ಹಾಗೂ ಸಂವಿಧಾನ ಬದಲಿಸಿದರೆ ಶೋಷಿತರು, ದಲಿತರು, ಅಲ್ಪಸಂಖ್ಯಾತರು ಗುಲಾಮರಾಗಿ ಬಾಳಬೇಕಾಗುತ್ತದೆ. ಹಾಗಾಗಿ ಪ್ರತಿಯೊಬ್ಬರು ಎಚ್ಚರಿಕೆಯಿಂದ ಮತ ಚಲಾಯಿಸಬೇಕು' ಎಂದು ಸಲಹೆ ಮಾಡಿದರು.

'2014ರ ಚುನಾವಣೆ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅನೇಕ ಭರವಸೆಗಳನ್ನು ಕೊಟ್ಟಿದ್ದರು. ಆದರೆ, ಒಂದೇ ಒಂದು ಭರವಸೆ ಈಡೇರಿಸಿಲ್ಲ. ನಿರುದ್ಯೋಗ ಸಮಸ್ಯೆ ನಿವಾರಣೆಯಾಗಿಲ್ಲ. ರೈತರ ಉತ್ಪನ್ನಗಳಿಗೆ ಬೆಂಬಲ ಬೆಲೆ ಸಿಗುತ್ತಿಲ್ಲ. ದಲಿತರು, ಮಹಿಳೆಯರ ಮೇಲೆ ನಿರಂತರವಾಗಿ ದಾಳಿ ನಡೆಯುತ್ತಿವೆ. ಅಲ್ಪಸಂಖ್ಯಾತರು ಭಯದ ವಾತಾವರಣದಲ್ಲಿ ಬದುಕುತ್ತಿದ್ದಾರೆ. ಬಹುಮುಖಿ ಸಂಸ್ಕೃತಿಯ ದೇಶದಲ್ಲಿ ಏಕಸಂಸ್ಕೃತಿ ಹೇರುವ ಹುನ್ನಾರ ನಡೆಸುತ್ತಿರುವ ಬಿಜೆಪಿ ಪುನಃ ಅಧಿಕಾರಕ್ಕೆ ಬಂದರೆ ಈ ದೇಶವನ್ನು ಸಂಪೂರ್ಣ ಹಾಳು ಮಾಡುತ್ತಾರೆ' ಎಂದು ಎಚ್ಚರಿಸಿದರು.

ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ಮಾಳಮ್ಮ, 'ಬಿಜೆಪಿ ಅಧಿಕಾರಕ್ಕೆ ಬಂದ ನಂತರ ದೇಶ ವಿಘಟನೆಯಾಗುತ್ತಿದೆ. ಜಾತಿ, ಧರ್ಮಗಳ ಹೆಸರಿನಲ್ಲಿ ಸಮಾಜವನ್ನು ಒಡೆದು ಆಳಲಾಗುತ್ತಿದೆ. ಒಂದೇ ಸಿದ್ಧಾಂತವನ್ನು ಹೇರುವ ಪ್ರಯತ್ನ ಮಾಡಲಾಗುತ್ತಿದೆ. ಜಾತಿವಾದಿ ಶಕ್ತಿಗಳ ಕುತಂತ್ರ ಅರಿತು ಜಾತ್ಯತೀತ ಶಕ್ತಿಗಳನ್ನು ಜನ ಚುನಾವಣೆಯಲ್ಲಿ ಬೆಂಬಲಿಸಬೇಕು' ಎಂದು ಮನವಿ ಮಾಡಿದರು.

ದಲಿತ ಹಕ್ಕುಗಳ ಸಮಿತಿ ಜಿಲ್ಲಾ ಘಟಕದ ಅಧ್ಯಕ್ಷ ಮರಡಿ ಜಂಬಯ್ಯ ನಾಯಕ, ಸಿ.ಐ.ಟಿ.ಯು ಜಿಲ್ಲಾ ಘಟಕದ ಅಧ್ಯಕ್ಷ ಆರ್.ಭಾಸ್ಕರ್ ರೆಡ್ಡಿ, ಮುಖಂಡರಾದ ಎ.ಸ್ವಾಮಿ, ಕೆ.ಎಸ್.ಸಂತೋಷ, ಪಿ.ಎಸ್.ಈರಣ್ಣ, ಎಸ್.ಸತ್ಯಮೂರ್ತಿ, ಯಲ್ಲಾಲಿಂಗ, ಶಿವುಕುಮಾರ, ಎಸ್.ಯಲ್ಲಮ್ಮ, ಎಸ್.ಶಾಂತಪ್ಪ ಇದ್ದರು.



ದ್ವೇಷ ರಾಜಕಾರಣದ ವಿರುದ್ಧ ನಮ್ಮ ಮತ. ಬಹುತ್ವ ಭಾರತ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ನಮ್ಮ ಮತ

ಜನತೆಗೆ ಚಿಂತಕರ ಮನವಿ

ನಮ್ಮ ಸಂವಿಧಾನವು ಭಾರತದ ಪ್ರತಿ ಪ್ರಜೆಯೂ ಘನತೆಯಿಂದ ಬದುಕುವ ಹಕ್ಕನ್ನು ಕೊಟ್ಟಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ, ಆಯ್ಕೆಯ ಹಕ್ಕಿನ, ಭಿನ್ನಾಭಿಪ್ರಾಯಗಳನ್ನು ಅಭಿವ್ಯಕ್ತಿಸುವ ಹೀಗೆ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ ಸಮಾನತೆಯೊಂದಿಗೆ ಬಾಳುವ ಎಲ್ಲ ಹಕ್ಕು ನಮ್ಮದಾಗಿದೆ. ಆದರೆ ಕಳೆದ ಐದು ವರ್ಷಗಳಿಂದ ಈ ಎಲ್ಲ ಹಕ್ಕುಗಳ ಮೇಲೆ ದುರ್ದಾಳಿ ನಡೆಯುತ್ತಿದೆ. ವರ್ಗ, ಜಾತಿ, ಧರ್ಮ, ಲಿಂಗ ಮತ್ತು ಸಮುದಾಯದ ಆಧಾರದ ಮೇಲೆ ದೌರ್ಜನ್ಯಗಳು, ಧಾಳಿ ದಬ್ಬಾಳಿಕೆಗಳು ನಡೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಅತ್ಯಂತ ಕ್ರೌರ್ಯದ ಕೊಲೆಗಳು ನಡೆದಿದ್ದು ಆಹಾರ ರಾಜಕಾರಣದ ಹೆಸರಿನಲ್ಲಿ. ದ್ವೇಷ ರಾಜಕಾರಣವನ್ನು ದೇಶ ಒಡೆಯಲೆಂದೇ ಬಳಸಿಕೊಳ್ಳಲಾಗುತ್ತಿದೆ. ದೇಶದಾದ್ಯಂತ ಮತೀಯ ನೆಲೆಯಲ್ಲಿ ಭಯೋತ್ಪಾದನೆ ಹುಟ್ಟು ಹಾಕಿ ಜಾತ್ಯಾತೀತ ನಿಲುವು ವ್ಯಕ್ತಿಸುವ ಸಾಹಿತಿಗಳು, ಕಲಾವಿದರು, ಚಿಂತಕರು ಮುಂತಾದ ಬುದ್ದಿಜೀವಿಗಳಿಗೆ ದೇಶ ತೊರೆಯುವಂತೆ ಧಮಕಿ ಹಾಕಲಾಗುತ್ತಿದೆ. ದೇಶದ ಒಳಗೆ ಪ್ರಭುತ್ವವನ್ನು ಪ್ರಶ್ನಿಸುವವರಿಗೆ ಸುಳ್ಳು ಕೇಸುಗಳಲ್ಲಿ ಸಿಲುಕಿಸಿ ಬಂಧಿಸುವುದು ಮತ್ತು ಕಿರುಕುಳ ಕೊಡುವುದು ನಡೆಯುತ್ತಿದೆ. ಇದು ಅತ್ಯಂತ ಅಪಾಯಕಾರಿಯಾದದ್ದು. ಸಾಮಾಜಿಕ ಕಾರ್ಯಕರ್ತರು ಇದಕ್ಕೆ ಬಲಿಯಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಅಲ್ಲದೆ ಮತೀಯ ನೆಲೆಯಲ್ಲಿ ಬೆಳೆಸಲಾದ ಪ್ರಚೋದನಾತ್ಮಕ ಧಾರ್ಮಿಕ ಭಾವನೆಗೆ ಯುವಜನತೆಯನ್ನು ಬಲಿ ಮಾಡಿ ಅವರ ಕೈಯಿಂದಲೇ ಚಿಂತಕರ ಹತ್ಯೆ ಮಾಡಿಸಲಾಗುತಿದೆ. ಕರ್ನಾಟಕದಲ್ಲಿ ಈಗಾಗಲೇ ಡಾ.ಎಂ.ಎಂ.ಕಲಬುರ್ಗಿಯವರನ್ನು ಹಾಗೂ ಗೌರಿ ಲಂಕೇಶರನ್ನು ಮತೀಯ ದುಷ್ಟ ಶಕ್ತಿಗಳು ಬಲಿ ಪಡೆದಿವೆ. ಇದು ಸೌಹಾರ್ದ ಕರ್ನಾಟಕಕ್ಕೆ ಒಡ್ಡಿದ ಅಪಾಯವೇ ಆಗಿದೆ. ಮತ್ತು ಭವಿಷ್ಯದಲ್ಲಿ ಇಂತಹ ಅಸಹಿಷ್ಣು ವಾತಾವರಣವು ಹೆಚ್ಚು ಕರಾಳತೆಯನ್ನು ತರುವ ಆತಂಕವು ಖಂಡಿತ ಕಾಡುತಿದೆ.

ಇದೇ ಹೊತ್ತಿನಲ್ಲಿ ಮಹಿಳಾ, ದಲಿತ, ಆದಿವಾಸಿ, ಬುಡಕಟ್ಟು, ಅಲ್ಪಸಂಖ್ಯಾತ ಸಮುದಾಯಗಳನ್ನು ಗುರಿ ಮಾಡಿ ದೌರ್ಜನ್ಯ ಎಸಗುತ್ತಿರುವುದು ಒಂದೆಡೆಯಾದರೆ ದೌರ್ಜನ್ಯ ಕೊಲೆ ಎಸಗಿದವರ ಮೇಲೆ ಕಠಿಣ ಕ್ರಮಗಳನ್ನು ಕೈಗೊಂಡು ನಿರ್ಭಯದ ಭರವಸೆ ಕೊಡಬೇಕಾದ ಕೇಂದ್ರ ಸರಕಾರವು ಆರೋಪಿಗಳ ಪರವಾಗಿಯೇ ಅಭಿಪ್ರಾಯ ರೂಪಿಸುತಿರುವುದು ಯಾರನ್ನಾದರೂ ಚಿಂತಿತರನ್ನಾಗಿ ಮಾಡುವುದು.

ಅಲ್ಲದೆ ಇನ್ನೂ ಆತಂಕ ಪಡುವ ಬೆಳವಣಿಗೆಗಳು ಕಳೆದ ಐದು ವರ್ಷದಲ್ಲಿ ಕಂಡಿದ್ದೇವೆ. ಅವು ಭಾರತದ ಆರ್ಥಿಕ ಸ್ವಾವಲಂಬನೆಗೆ ಬಹುದೊಡ್ಡ ಪೆಟ್ಟು ಕೊಡುವಂತಹದ್ದಾಗಿವೆ. ಸರಕಾರದ ಅಧೀನದಲ್ಲಿರುವ ಹೆಚ್ ಎ ಎಲ್, ಓ ಎನ್ ಜಿಸಿ ಸಂಸ್ಥೆಗಳು ಕೇಂದ್ರ ಸರಕಾರದ ನೀತಿಗಳು ಮತ್ತು ಅನಾವಶ್ಯಕ ಮಧ್ಯಪ್ರವೇಶದಿಂದ ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿವೆ. ಕೇಂದ್ರ ಸರಕಾರದ ಸ್ವಾಯತ್ತ ಸಂಸ್ಥೆಗಳು ಹಾಗು ಆರ್ ಬಿ ಐ, ಸಿಬಿಐ, ಇ.ಡಿ(ಜಾರಿ ನಿರ್ದೇಶನಾಲಯ)ದ ಕಾರ್ಯನಿರ್ವಹಣೆಗಳ ಮೇಲೂ ಕೇಂದ್ರ ಸರಕಾರವು ಅನಾವಶ್ಯಕ ಹಸ್ತಕ್ಷೇಪ ನಡೆಸುತ್ತಿದೆ. ಕಾರ್ಪೋರೇಟ್ ಕಂಪನಿಗಳೊಂದಿಗೆ ಸಹಕರಿಸುವ ಕೈಜೋಡಿಸುವ ಧೋರಣೆಯು ಕೇಂದ್ರ ಸರಕಾರದ್ದಿರುವುದರಿಂದ ಬ್ಯಾಂಕುಗಳ ಲೂಟಿ, ಮತ್ತು ಲೂಟಿಗೈದವರ ಪಲಾಯನ, ಬ್ಯಾಂಕುಗಳ ವಿಲೀನೀಕರಣ ಇತ್ಯಾದಿ ಬೆಳವಣಿಗೆಗಳು ಅಲ್ಲದೆ ನಿರುದ್ಯೋಗ ಬಡತನದ ಹೆಚ್ಚಳ ಇದೆಲ್ಲವೂ ಭಾರತದ ಆರ್ಥಿಕ ಬೆಳವಣಿಗೆಗೆ ಬಹುದೊಡ್ಡ ಅಡ್ಡಿಯಾಗಿವೆ. ಅಲ್ಲದೆ ಬಿಜೆಪಿಯು ಸ್ತ್ರೀ ದ್ವೇಷ, ಮತಾಂಧತೆ, ಕೋಮುವಾದ ಬಿತ್ತುವಿಕೆ, ಅವೈಜ್ಞಾನಿಕ ಚಟುವಟಿಕೆಗೆ ಪ್ರೇರಣೆ ಮತ್ತು 'ಇಸ್ಲಾಮೋಫೋಬಿಯಾ'ವನ್ನು ಪದೇ ಪದೇ ಪ್ರದರ್ಶಿಸುತ್ತಿದೆ. ಬಿಜೆಪಿಯ ಮತ್ತು ಕೇಂದ್ರ ಸರಕಾರದ ಈ ಧೋರಣೆಯು ಭಾರತದ ಸೌಹಾರ್ದ ಪರಂಪರೆಯನ್ನು, ಆರ್ಥಿಕ ಸ್ವಾವಲಂಬನೆಯನ್ನು, ಸಾಂವಿಧಾನಿಕ ಹಕ್ಕುಗಳನ್ನು ನಾಶ ಮಾಡುವುದೇ ಆಗಿದೆ.

ಕರ್ನಾಟಕವು ಬಹುಸಾಂಸ್ಕೃತಿಕ ಪರಂಪರೆಯೊಂದಿಗೆ ಅಭಿವೃದ್ಧಿಗೊಂಡು ಅರಳಿದ ನಾಡಾಗಿದೆ. ಎಲ್ಲ ರೀತಿಯ ಅಭಿವ್ಯಕ್ತಿ ಸ್ವಾತಂತ್ರ್ಯವು ಈ ನೆಲದ ಮಣ್ಣಿನಲ್ಲಿ ಹಾಸು ಹೊಕ್ಕಾಗಿದೆ. ಆದರೆ ಬಿಜೆಪಿಯ ಫ್ಯಾಸಿಸ್ಟ್ ನಡೆಯಿಂದಾಗಿ ಭಾರತವು ಆತಂಕಕ್ಕೆ ಒಳಗಾಗಿದೆ ಕೇಂದ್ರ ಸರಕಾರದ ಫ್ಯಾಸಿಸ್ಟ್ ಲಕ್ಷಣಗಳು ಗೋಚರಿಸಿದ ಆರಂಭದ ದಿನಗಳಲ್ಲಿಯೇ ಸಾಹಿತಿ, ಕಲಾವಿದರು, ಚಿಂತಕರು, ವಿಜ್ಞಾನಿಗಳು, ಸಂಶೋಧಕರೆಲ್ಲ ಅಸಹಿಷ್ಣುತೆಯ ವಿರುದ್ಧ ಪ್ರಶಸ್ತಿ ವಾಪಾಸಾತಿ ಚಳುವಳಿಯ ಮೂಲಕ ಬಲವಾದ ಪ್ರತಿಭಟನೆ ದಾಖಲಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಸಾಹಿತಿಗಳು, ಕಲಾವಿದರು, ಸಂಶೋಧಕರು, ಚಿಂತಕರು ಮುಂತಾದವರು ಬದಲಾವಣೆಗಾಗಿ ಒದಗಿದ ಚುನಾವಣೆಯೆಂಬ ಅವಕಾಶವನ್ನು ಕಳೆದುಕೊಳ್ಳಬಾರದೆಂದು ವಿನಂತಿಸುತ್ತೇವೆ. ಬಹುತ್ವ ಭಾರತದ ಉಳಿವಿಗಾಗಿ, ಅಭಿವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆಗಾಗಿ ತಮ್ಮ ಮತವನ್ನು ಚಲಾಯಿಸಬೇಕಿದೆ. ಜ್ಯಾತ್ಯಾತೀತ, ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಉಳಿವಿಗಾಗಿ ದ್ವೇಷ ರಾಜಕಾರಣವನ್ನು ವಿರೋಧಿಸಿ, ಕೋಮುವಾದಿ ಫ್ಯಾಸಿಸ್ಟ್ ನೀತಿಗಳ ವಿರುದ್ಧ ಮತ ಚಲಾಯಿಸಬೇಕೆಂದು ನಾಡಿನ ಮಹಾ ಜನತೆಯಲ್ಲಿ ನಾವು ಡಾ.ಚನ್ನಣ್ಣ ವಾಲೀಕಾರ, ಡಾ.ಕಾಶಿನಾಥ ಅಂಬಲಗಿ, ಸನತ್ ಕುಮಾರ ಬೆಳಗಲಿ, ಡಾ.ಪ್ರಭು ಖಾನಾಪುರೆ, ಬಸಣ್ಣ ಸಿಂಗೆ, ಮಾರುತಿ ಗೋಖಲೆ, ಎಸ್.ಪಿ. ಸುಳ್ಳದ್, ಡಾ.ಹಣಮಂತ ದೊಡ್ಡಮನಿ ಚಂದ್ರಕಾಂತ ಕರದಳ್ಳಿ, ದತ್ತಾತ್ರೇಯ ಇಕ್ಕಳಕಿ, ಅರ್ಜುನ ಭದ್ರೆ, ವಿಶ್ವಾರಾಧ್ಯ ಸತ್ಯಂಪೇಟ್, ಎಂ ಬಿ ಸಜ್ಜನ್, ಕೈಲಾಸ ಡೋಣಿ, ಅಶ್ವಿನಿ ಮದನಕರ್, ಶ್ರೀಮಂತ ಬಿರಾದಾರ, ಮಹಾಂತೇಶ ನವಲಕಲ್. ಪ್ರಜಾಸತ್ತೆಗಾಗಿ ನಾವು, ಕಲಬುರಗಿ ಸಂಘಟನೆಯ ಸಂಚಾಲಕರಾದ ಪ್ರೊ.ಆರ್. ಕೆ. ಹುಡಗಿ, ಕೆ. ನೀಲಾ ಕೋರುತ್ತೇವೆ.

‘ಸಂವಿಧಾನದ ಕಾಲಾಳು’

ತೀಸ್ತಾ ಸೆತಲ್ವಾಡ್ ನೆನಪುಗಳು



ಸಾಮಾಜಿಕ ಮತ್ತು ರಾಜಕೀಯ ಕಾರ್ಯಕರ್ತರಿಗೆ ಚಿರಪರಿಚಿತ ಹೆಸರು ತೀಸ್ತಾ ಸೆತಲ್ವಾಡ್. ಮುಂಬೈನ ವಕೀಲರ ಕುಟುಂಬಕ್ಕೆ ಸೇರಿದ ತೀಸ್ತಾ ಕಾನೂನು ಮತ್ತು ಸಂವಿಧಾನದ ಮೌಲ್ಯಗಳನ್ನೇ ಉಸಿರಾಗಿಸಿಕೊಂಡು ಬೆಳೆದವರು. ತಂದೆ, ತಾತ ಮತ್ತು ಮುತ್ತಾತ ದೇಶದ ಪ್ರಸಿದ್ಧ ವಕೀಲರಾಗಿ ಪಡೆದಿದ್ದ ಶ್ರೇಯಸ್ಸಿನ ನೆರಳಲ್ಲೇ ಸಾಗಿದ ತೀಸ್ತಾ ನ್ಯಾಯದಾನಕ್ಕಾಗಿ ಆರಿಸಿಕೊಂಡಿದ್ದು ಪತ್ರಿಕೋದ್ಯಮವನ್ನು. ವೃತ್ತಿಯ ಆರಂಭದಲ್ಲೇ ಕೋಮುಗಲಭೆಯ ವರದಿಗಾರಿಕೆ ಮಾಡಬೇಕಾಗಿ ಬರುತ್ತದೆ. ಅಲ್ಲಿ ಕಂಡ ಮಾನವ ಹಕ್ಕುಗಳ ದಮನ, ದ್ವೇಷದ ರಾಜಕೀಯ, ರಾಜಸತ್ತೆಯ ದಮನಕಾರಿ ಪ್ರವೃತ್ತಿಗಳು ಅವರನ್ನು ಆಕ್ಟಿವಿಸ್ಟ್ ಆಗಿ ರೂಪಿಸುತ್ತದೆ. ಪತ್ರಿಕೋದ್ಯಮದಲ್ಲೇ ಬಾಳ ಸಂಗಾತಿ ಜಾವೇದ್ ಆನಂದ್ ಅವರನ್ನೂ ಭೇಟಿ ಮಾಡುವ ತೀಸ್ತಾ ಮುಂದೆ ಪ್ರಮುಖ ವಾಹಿನಿ ಪತ್ರಿಕೆಗಳಿಂದ ಭ್ರಮನಿರಸನಗೊಂಡು ‘ಕಮ್ಯುನಲಿಸಂ ಕಾಂಬ್ಯಾಟ್’ ಎನ್ನುವ ಪತ್ರಿಕೆಯನ್ನು ಆರಂಭಿಸಿದರು. ಕೋಮುವಾದದ ವಿರುದ್ಧ ಸಾಮಾಜಿಕ, ರಾಜಕೀಯ ಹಾಗೂ ಕಾನೂನು ಹೋರಾಟಗಳನ್ನು ನಡೆಸುತ್ತಾ ಬಂದಿರುವ ಈ ಪತ್ರಿಕೆಯು ಜಗತ್ತಿನಲ್ಲೇ ವಿಶಿಷ್ಟ ಎನ್ನಲಾಗಿದೆ.

1984 ಹಾಗೂ 1992-93 ಮುಂಬೈ ಗಲಭೆಗಳು ಹಾಗೂ 2002ರ ಗುಜರಾತ್ ಹತ್ಯಾಕಾಂಡದಲ್ಲಿ ನೊಂದು ಬೆಂದವರಿಗೆ ನ್ಯಾಯ ದೊರಕಿಸಿಕೊಡಲು ಅನವರತ ಶ್ರಮಿಸುತ್ತಿರುವ ತೀಸ್ತಾ ಇಂದು ಭಾರತದ ಪ್ರಮುಖ ಮಾನವಹಕ್ಕು ಹೋರಾಟಗಾರ್ತಿಯಾಗಿದ್ದಾರೆ. ತಮ್ಮ ಸತತ ಹೋರಾಟದಿಂದ ಗುಜರಾತ್ ಹತ್ಯಾಕಾಂಡದಲ್ಲಿ 117 ಜನರಿಗೆ ಶಿಕ್ಷೆಯಾಗುವಂತೆ ಶ್ರಮವಹಿಸಿದವರು ತೀಸ್ತಾ. ಇವರ ಹೋರಾಟದಿಂದ ಎದೆಗುಂದಿದ ಗುಜರಾತ್ ಸರ್ಕಾರ ಇವರ ಮೇಲೆ ಅನೇಕ ರೀತಿಯ ದೈಹಿಕ, ಮಾನಸಿಕ ಮತ್ತು ಕಾನೂನು ದಾಳಿಗಳನ್ನು ನಡೆಸಿದರೂ ಎದೆ ಗುಂದದೆ ನ್ಯಾಯಕ್ಕಾಗಿ ಹೋರಾಡುತ್ತಿರುವ ಅಪರೂಪದ ವ್ಯಕ್ತಿ ತೀಸ್ತಾ. ದಮನಿತರ ನಿಜವಾದ ಸಂಗಾತಿ.

ತಮ್ಮ ಬಾಲ್ಯ, ಯೌವನ, ಹಾಗೂ ನಂತರದ ಹೋರಾಟದ ಬದುಕನ್ನು ದಾಖಲಿಸಿರುವ ಹೊತ್ತಿಗೆಯೇ ಸಂವಿಧಾನದ ಕಾಲಾಳು ಪುಸ್ತಕ. ಇದನ್ನು ಇಂಗ್ಲೀಷ್ ಮೂಲದಲ್ಲಿ ದೆಹಲಿಯ **ಲೆಫ್ಟ್‌ವರ್ಡ್ಸ್** ಪ್ರಕಟಿಸಿದ್ದು, ಸಂವಹನ ಸಮಾಲೋಚಕಿ **ಸತ್ಯಾ ಎಸ್** ಇದನ್ನು ಕನ್ನಡಕ್ಕೆ ತಂದಿದ್ದಾರೆ. ಅದನ್ನು **ಕ್ರಿಯಾ ಮಾಧ್ಯಮ** ಸದ್ಯದಲ್ಲೇ ಬಿಡುಗಡೆ ಮಾಡಲಿದೆ.

ಪುಸ್ತಕದಿಂದ ಆಯ್ದ ಎರಡು ಭಾಗಗಳನ್ನು ಇಲ್ಲಿ ಪ್ರಕಟಿಸಲಾಗಿದೆ:

******

1992-93ರ ಮುಂಬೈ ಗಲಭೆಗಳನ್ನು ಬಿಸಿನೆಸ್ ಇಂಡಿಯಾ ಪತ್ರಿಕೆಗೆ ವರದಿ ಮಾಡುತ್ತಿದ್ದ ಸಂದರ್ಭ. ಸುದ್ದಿ ಸಂಗ್ರಹಣೆ ಮಾಡುತ್ತಾ ಬೀದಿಗಳಲ್ಲಿ ಅಲೆದಾಡುತ್ತಿದ್ದೆ. 1993ರ ಜನವರಿ 10ರಿಂದ 18ರವರೆಗೆ ಕೆಲವು ಮುಸ್ಲಿಂ ಯುವಕರ ನೆರವಿನಿಂದ ಪೊಲೀಸರ ವಯರ್ ಲೆಸ್ ಸಂದೇಶಗಳನ್ನು ಆಲಿಸಿದೆವು. ಅದು ಸಂಚಾರಿ ಪೊಲೀಸ್ ವ್ಯಾನ್ ಮತ್ತು ಪೊಲೀಸ್ ಕಂಟ್ರೋಲ್ ರೂಂ ನಡುವೆ ನಡೆಯುತ್ತಿದ್ದ ಸಂಭಾಷಣೆಯಾಗಿತ್ತು. ಅದರ ಫ್ರೀಕ್ವೆನ್ಸಿಯನ್ನು ಹೇಗೋ ಪತ್ತೆ ಮಾಡಿ, ಧ್ವನಿ ಮುದ್ರಣವನ್ನೂ ಮಾಡಿಕೊಂಡು ದಾಖಲೆಯಾಗಿ ಸಂಗ್ರಹಿಸಿದೆವು.

ಆ ಸಂಭಾಷಣೆಗಳಲ್ಲಿ ಮುಸ್ಲಿಮರನ್ನು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದ ಪೊಲೀಸರು, ಮುಸ್ಲಿಮರ ಪ್ರದೇಶಗಳಿಗೆ ಹೋಗದಂತೆ ಪರಿಹಾರ ತಂಡಗಳಿಗೆ ಸೂಚನೆಯನ್ನು ಕೊಡುತ್ತಿದ್ದರು. ಅವರ ಮಾತುಗಳಲ್ಲಿ ಮುಸ್ಲಿಮರ ಬಗ್ಗೆ ತಿರಸ್ಕಾರ ಮತ್ತು ದ್ವೇಷದ ಭಾವನೆಗಳಿದ್ದವು.

ಈ ತನಿಖಾ ವರದಿಯು ಸಿಎನ್ ಎನ್, ಬಿಬಿಸಿ, ನ್ಯೂಸ್ ಟ್ರ್ಯಾಕ್ ಹಾಗೂ ಐ ವಿಟ್ನೆಸ್ ಚಾನೆಲ್ ಗಳಲ್ಲಿ ಪ್ರಸಾರವಾಯಿತು. ಪೊಲೀಸರ ಈ ನಡೆ ಎಲ್ಲ ಕಡೆ ತೀಕ್ಷ್ಣ ಚರ್ಚೆಗೆ ಗುರಿಯಾಯಿತು. ರಕ್ಷಣೆ ಮಾಡಬೇಕಾದ ಪೊಲೀಸರಲ್ಲೇ ಇರುವ ಈ ಕೋಮುಭಾವನೆ, ದ್ವೇಷ ನನ್ನನ್ನು ಸದಾ ಚಿಂತೆಗೆ ಗುರಿ ಮಾಡಿದೆ.

ಇದು ಮತ್ತೆ ಗುಜರಾತಿನಲ್ಲೂ, ಇನ್ನಷ್ಟು ತೀವ್ರತೆಯಿಂದ, ಇನ್ನಷ್ಟು ದ್ವೇಷಪೂರಿತವಾಗಿ, ಇನ್ನಷ್ಟು ವ್ಯಾಪಕವಾಗಿ ವ್ಯಕ್ತಗೊಂಡಿತು.

ಭಾರತದ ಕಾನೂನು ಅನುಷ್ಠಾನ ಸಂಸ್ಥೆಗಳು (ಪೊಲೀಸ್), ಗುಪ್ತಚರ ಇಲಾಖೆ ಹಾಗೂ ಇತರೆ ಹಲವಾರು ಆಡಳಿತ ಸಂಸ್ಥೆಗಳಲ್ಲಿ ತೂರಿಕೊಂಡಿರುವ ಕೋಮುವಾದಿ ಮತ್ತು ಬಹುಸಂಖ್ಯಾತ ಜನರ ಪರವಾದ ಮನೋಭಾವಗಳು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗುತ್ತಿರುವುದನ್ನು ನನ್ನ ಪತ್ರಿಕೋದ್ಯಮದ ಬರವಣಿಗೆಯುದ್ದಕ್ಕೂ ಮತ್ತು ಸಾಮಾಜಿಕ ಕಾರ್ಯಗಳಲ್ಲೂ ನಿರಂತರ ಪ್ರಸ್ತಾಪಿಸುತ್ತಾ ಬಂದಿರುವೆ.

ರಾಷ್ಟ್ರೀಯ ಪೊಲೀಸ್ ಆಯೋಗದ ಎಂಟನೇ ವರದಿಯು (1979-81) ಈ ತರತಮದ ಬಗ್ಗೆ ಪ್ರಸ್ತಾಪ ಮಾಡಿದ್ದರೂ, ಅದನ್ನು ಒಪ್ಪಿಕೊಳ್ಳಲು ನಮ್ಮ ಆಡಳಿತ ವ್ಯವಸ್ಥೆ ಹಿಂಜರಿಯುತ್ತಿದೆ.

******

ಬಹಳಷ್ಟು ಜನರಿಗೆ ಗುಜರಾತಿನ ಈ ಪ್ರಕರಣವು ತನಿಖೆಗಳ ಭಾರದಲ್ಲಿ ಕಳೆದುಹೋದ ಅಧ್ಯಾಯದಂತೆ ಕಂಡುಬರಬಹುದು. ಆದರೆ, ದಾಖಲೆಗಳನ್ನು ಕೆದಕುತ್ತಾ ಹೋದರೆ, ಸರ್ವಕಾಲಕ್ಕೂ ಎಚ್ಚರಿಸುವಂತಹ ಮಾಹಿತಿಗಳು ದೊರೆಯುತ್ತವೆ. ಅಂತಹುದರಲ್ಲಿ ಒಂದು ದಾಖಲೆ 2002ರ ಜೂನ್ 1ರಂದು ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಗೆ ಬರೆದ ಪತ್ರ. ಗೋಧ್ರಾ ಘಟನೆ ಮತ್ತು ಗೋಧ್ರಾ ನಂತರದ ಘಟನೆ ಸಂಭವಿಸಿ ಮೂರು ತಿಂಗಳ ನಂತರ ಬರೆದ ಈ ಪತ್ರದಲ್ಲಿ ವಾಜಪೇಯಿ ಅವರು ಗುಜರಾತಿನಲ್ಲಿ ಇರುವ ಸೂಕ್ಷ್ಮ ಕೋಮು ವಾತಾವರಣದ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ; ಕೋಮು ಗಲಭೆಗೆ ಬಲಿಯಾದ ಜನರ ಹಿತರಕ್ಷಣೆಯ ಬಗ್ಗೆ ಕಾಳಜಿ ವ್ಯಕ್ತಪಡಿಸಿದ್ದಾರೆ.26,27 ಮುಖ್ಯಮಂತ್ರಿಯಾದವರು ತನ್ನ ಜನರನ್ನು ಜಾತಿ, ಧರ್ಮ, ಪಂಗಡಗಳ ಆಧಾರದ ಮೇಲೆ ತಾರತಮ್ಯ ಮಾಡದೆ, ರಾಜಧರ್ಮ ಪಾಲಿಸಬೇಕು ಎಂದು ವಾಜಪೇಯಿ ಅವರು ಖುದ್ದಾಗಿ ಮೋದಿಗೆ ಹೇಳಿದ ಎರಡು ತಿಂಗಳ ನಂತರ ಈ ಪತ್ರ ಬರೆಯಲಾಗಿದೆ. ಮಾಹಿತಿ ಹಕ್ಕು ಕಾಯಿದೆಯ ಮೂಲಕ ಪಡೆಯಲಾದ ಈ ಪತ್ರದಲ್ಲಿ, ಸಾಧಾರಣವಾಗಿ ದೀರ್ಘ ಪತ್ರಗಳನ್ನು ಬರೆಯದಿರುವ ವಾಜಪೇಯಿ ಅವರು ಗುಜರಾತಿನ ಮುಖ್ಯಮಂತ್ರಿಗೆ ಸುದೀರ್ಘ ಪತ್ರ ಬರೆದಿರುವುದನ್ನು ಕಾಣಬಹುದು. ಹತ್ಯಾಕಾಂಡದ ಸಂತ್ರಸ್ತರಿಗೆ ಪರಿಹಾರ ಒದಗಿಸಲು, ರಕ್ಷಣೆ ಒದಗಿಸಲು, ಭರವಸೆ ನೀಡಲು ಸಾಕಷ್ಟು ಕ್ರಮಗಳನ್ನು ಕೈಗೊಂಡಿಲ್ಲ ಎನ್ನುವ ಕಾಳಜಿ ಈ ಪತ್ರದಲ್ಲಿ ಧ್ವನಿಸುತ್ತದೆ. ಗಲಭೆಯಲ್ಲಿ ಮನೆಗಳಿಗೆ ಆಗಿರುವ ಹಾನಿಯ ಬಗ್ಗೆ ರಾಜ್ಯ ಸರ್ಕಾರ ನೀಡಿದ ಅಂಕಿಅಂಶಗಳು ಸತ್ಯಕ್ಕೆ ದೂರವಾಗಿದೆ ಎಂಬ ಅಂಶವನ್ನು ವಾಜಪೇಯಿ ಅವರು ಮೋದಿ ಅವರ ಗಮನಕ್ಕೆ ತಂದಿದ್ದಾರೆ. ‘ಅನೇಕ ಕಾರಣಗಳಿಂದಾಗಿ ಹಾನಿಯನ್ನು ಅಂದಾಜು ಮಾಡಲು ನಿಯೋಜಿಸಿರುವ ತಂಡವು ಹಾನಿಯನ್ನು ಸರಿಯಾಗಿ ಗ್ರಹಿಸದೆ ಹೋಗಿರುವ ಸಾಧ್ಯತೆಗಳಿವೆ. ಎಲ್ಲರಿಗೂ ನ್ಯಾಯದೊರಕುವಂತೆ ಎಚ್ಚರವಹಿಸಲು ಅಲ್ಲಲ್ಲಿ ಈ ಹಾನಿ ಅಂದಾಜು ಪ್ರಕ್ರಿಯೆಯನ್ನು ಮರುಪರೀಕ್ಷೆಗೆ ಒಳಪಡಿಸಬೇಕು. ಈ ಮರುಪರೀಕ್ಷೆಯಲ್ಲಿ ಹಾನಿಯ ಅಂದಾಜು ಎಲ್ಲಾದರೂ ಕಡಿಮೆ ಇರುವುದು ಕಂಡು ಬಂದರೆ, ಮರುಪರೀಕ್ಷೆಗೆ ಆದೇಶಿಸಬೇಕು’ ಎಂದಿದ್ದಾರೆ. ಪರಿಹಾರ ಕಾರ್ಯಗಳಿಗೆ ಹೆಚ್ಚಿನ ಆರ್ಥಿಕ ನೆರವು ಬೇಕಾದಲ್ಲಿ ಕೇಂದ್ರದಿಂದ ಅದನ್ನು ಒದಗಿಸುವ ಭರವಸೆಯನ್ನೂ ನೀಡಿದ್ದಾರೆ. ‘ಹತ್ಯೆಗೊಳಗಾದ ಜನರ ಗುರುತು ಪತ್ತೆ ಹಚ್ಚುವ ಕೆಲಸ ಮತ್ತು ಹತ್ಯೆಗೊಳಗಾದವರ ಕುಟುಂಬಗಳಿಗೆ ಪರಿಹಾರ ಧನ ನೀಡುವ ಕೆಲಸ ವಿಳಂಬವಾಗಿರುವುದರ ಬಗ್ಗೆ ಅನೇಕ ದೂರುಗಳು ಬಂದಿವೆ. ಕಾಣೆಯಾದವರನ್ನು ಪತ್ತೆ ಮಾಡುವ ಕೆಲಸವೂ ನಿಧಾನಗತಿಯಲ್ಲಿ ಸಾಗಿದೆ ಎಂದು ತಿಳಿದುಬಂದಿದೆ. ಪರಿಹಾರ ಧನ ನೀಡುವ ಕೆಲಸದಲ್ಲಿ ಆಗುತ್ತಿರುವ ವಿಳಂಬವು ತೀವ್ರ ಕಾಳಜಿಗೆ ಕಾರಣವಾಗಿದೆ. ಡಿಎನ್ಎ ಮಾದರಿಗಳ ಮೂಲಕ ಗುರುತು ಪತ್ತೆಹಚ್ಚುವುದು ಬಹಳ ಸಮಯ ಬೇಡುವ ವಿಧಾನವಾಗಿದೆ’ ಎಂದಿರುವ ಅವರು, ‘ಇದು ಪರಿಹಾರ ಕಾರ್ಯಗಳನ್ನು ಮತ್ತಷ್ಟು ವಿಳಂಬ ಮಾಡುತ್ತದೆ’ ಎಂಬ ಆತಂಕ ವ್ಯಕ್ತಪಡಿಸಿದ್ದಾರೆ. ಜನರ ಮುಖದ ಮೇಲೆ ತಾಂಡವವಾಡುತ್ತಿದ್ದ ಭೀತಿ, ಅಸುರಕ್ಷತೆಯ ಭಾವದ ಬಗ್ಗೆ ಹೀಗೆ ಬರೆದಿದ್ದಾರೆ- ‘ಬರ್ಬರ ಹಲ್ಲೆಗಳು ನಡೆದ ಪ್ರದೇಶಗಳಿಗೆ ಹಿಂದಿರುಗಿ, ಅಲ್ಲೇ ನೆಲೆಸಲು ಜನರು ನಿರಾಕರಿಸುವುದು ಸಹಜ. ಆದರೆ, ಅಂತಹ ಪ್ರದೇಶಗಳಲ್ಲಿ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಂಡು ಜನರು ತಮ್ಮ ಊರಿಗೆ ಭಯ ಭೀತಿ ಇಲ್ಲದೆ ಹಿಂದಿರುಗುವಂತೆ ಮಾಡುವ, ಸುರಕ್ಷತೆಯ ಭಾವನೆಯನ್ನು ಮೂಡಿಸುವ ಕೆಲ ಮಾಡಬೇಕು. ನರೋಡ ಪಟಿಯಾ, ಲುನಾವಾಡ ಮೊದಲಾದ ತೀವ್ರ ಗಲಭೆ ಪೀಡಿತ ಪ್ರದೇಶಗಳ ಜನರನ್ನು ಪಡೆಯುವ ಸಾಧ್ಯತೆಗಳಿವೆ. ಆ ಶಕ್ತಿಗಳು ಈಗಾಗಲೇ ಸಂಕೀರ್ಣವಾಗಿರುವ ಪರಿಸ್ಥಿತಿಯನ್ನು ಮತ್ತಷ್ಟು ವಿಷಮಯ ಮಾಡುವ ಅಪಾಯವಿದೆ’ ಎಂದಿದ್ದಾರೆ. ಗುಜರಾತಿನಲ್ಲಿ ನಡೆದಿದ್ದ ಹತ್ಯಾಕಾಂಡದಿಂದ ವಿಚಲಿತರಾಗಿದ್ದ ವಾಜಪೇಯಿ ಅವರು, ಬದುಕುಳಿದಿರುವ ಜನರ ಬದುಕುಗಳನ್ನು ಕಟ್ಟುವ ಬಗ್ಗೆ ನೈಜ ಕಾಳಜಿಯಿಂದ ಸ್ವತಃ ತಾವೇ ಬರೆದ ಪತ್ರ ಇದಾಗಿದೆ. ಹಾಗೂ ರಾಜ್ಯ ಸರ್ಕಾರವೊಂದು ತನ್ನ ಜವಾಬ್ದಾರಿ ನಿರ್ವಹಿಸದೆ ಇದ್ದಾಗ ಅನಿವಾರ್ಯವಾಗಿ ಮಧ್ಯ ಪ್ರವೇಶಿಸಿ, ಪರಿಹಾರ ಕೆಲಸಗಳನ್ನು ಹೇಗೆ ಮಾಡಬೇಕೆಂದು ಸೂಚನೆಗಳನ್ನು ನೀಡಿದ್ದಾರೆ. ಪ್ರಧಾನಿಯೊಬ್ಬರು ರಾಜ್ಯ ಸರ್ಕಾರಕ್ಕೆ ತನ್ನ ಕೆಲಸವನ್ನು ಹೇಗೆ ನಿರ್ವಹಿಸಬೇಕು ಎಂಬುದರ ಬಗ್ಗೆ ಸೂಚನೆ ನೀಡಿರುವುದು ಇದೇ ಮೊದಲ ಸಲವಾಗಿದೆ. ಆದರೆ, ಈ ಪತ್ರ, ಇದು ಸ್ಫುರಿಸುವ ಭಾವ ಹಾಗೂ ಇದರ ಮಹತ್ವವನ್ನು ಭಾರತ ಇಂದು ಮರೆತಿದೆ.

ಝಾಕಿಯಾ ಜಾಫ್ರಿ ಅವರ ಪ್ರಕರಣಕ್ಕೆ ಸಂಬಂಧಿಸಿದಂತೆ ಹೀಗೇ ದಾಖಲೆಗಳನ್ನು ಹುಡುಕುತ್ತಾ ಹೋದಂತೆ ಮತ್ತೊಂದು ಮಾಹಿತಿ ಎದ್ದು ಬಂದಿತು. ಗಲಭೆಗಳ ನಿಯಂತ್ರಣಕ್ಕೆಂದು ನಿಯೋಜಿಸಲಾಗಿದ್ದ ಸೇನೆಯ ಮುಖ್ಯಸ್ಥರು ಸಲ್ಲಿಸಿದ್ದ ‘ಆಪರೇಷನ್ ಅಮನ್’ ಎಂಬ ವರದಿಯಲ್ಲಿ ಮೋದಿ ಸರ್ಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಳ್ಳಲಾಗಿದೆ. ಇದರ ಬೆನ್ನು ಹತ್ತಿ ಮತ್ತೊಂದು ಪಯಣಕ್ಕೆ ಹೊರಟೆವು. ಆದರೆ ಅದೀಗ ಮಾಹಿತಿ ಆಯೋಗದ ಆಯುಕ್ತರ ಕಚೇರಿಯಲ್ಲಿ ತಡೆಯಾಗಿದೆ. ಏನಾದರಾಗಲಿ ನಾನು ಈ ನನ್ನ ಹೋರಾಟವನ್ನು ಕೈಬಿಡುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ಈ ನನ್ನ ನಿಲುವು ನನಗೆ ಅಪಾರ ಕಷ್ಟಗಳನ್ನು, ನನ್ನ ಕುಟುಂಬಕ್ಕೆ ಚಿಂತೆಯನ್ನೂ ತಂದೊಡ್ಡಿದೆ.

ಝಾಕಿಯಾ ಜಾಫ್ರಿ ಪ್ರಕರಣವು ಸಾಕ್ಷಿ-ಪುರಾವೆಗಳನ್ನು ಹುಡುಕಿ, ಸಂಗ್ರಹಿಸುವ ವಿಚಾರದಲ್ಲಿ ಒಂದು ಮೈಲಿಗಲ್ಲಾಗಿದೆ. ಗುಪ್ತಚರ ಇಲಾಖೆಯ ದಾಖಲೆಗಳು, ಪೊಲೀಸ್ ಕಂಟ್ರೋಲ್ ರೂಮಿನ ದಾಖಲೆಗಳು, ಅಗ್ನಿ ಶಾಮಕ ದಳದ ದಾಖಲೆಗಳೂ ಸೇರಿದಂತೆ 23,000 ಪುಟಗಳಷ್ಟಿರುವ ಪುರಾವೆಗಳು ಆಡಳಿತದ ಲೋಪಗಳನ್ನು ಮಾತ್ರವಲ್ಲದೆ, ಆಡಳಿತ ವ್ಯವಸ್ಥೆಯು ಹತ್ಯಾಕಾಂಡದಲ್ಲಿ ಶಾಮೀಲಾಗಿರುವುದನ್ನೂ ದೃಢಪಡಿಸುತ್ತವೆ.

*****

ಪುಸ್ತಕದ ಬಗ್ಗೆ

ಒಂದೊಂದು ವಿವರವನ್ನೂ ದಾಖಲಿಸಿರುವ ಈ ರಾಜಕೀಯ ಹೋರಾಟದ ನೆನಪುಗಳ ಪುಸ್ತಕ, ಈಗಿನ ವಿದ್ಯಮಾನಗಳ ವಿಸ್ತೃತ ಹೇಳಿಕೆಯಂತಿದೆ. ವಿಭಿನ್ನ ಹೇಳಿಕೆಗಳು ತೇಲಾಡುತ್ತಿರುವ ಸಂದರ್ಭದಲ್ಲಿ ಸತ್ಯವನ್ನು ಬಿಚ್ಚಿಡುವ ಇಂತಹ ದಾಖಲೆ ಅಗತ್ಯವಿದೆ. ಇಡೀ ವಿದ್ಯಮಾನವನ್ನು ಸ್ಪಷ್ಟತೆ ಹಾಗೂ ಸಮಗ್ರ ದೃಷ್ಟಿಕೋನದಿಂದ ಕಟ್ಟಿಕೊಡುತ್ತಾರೆ. ಅವರ ಬಗ್ಗೆ ಹರಿಯಬಿಟ್ಟಿರುವ ಸುಳ್ಳು ಆರೋಪಗಳ ಹೊರತಾಗಿಯೂ ಅವರು ತಮ್ಮ ಹೋರಾಟವನ್ನು ಮುಂದುವರೆಸಿ ಸತ್ಯಾಂಶಗಳನ್ನು ಜನರ ಮುಂದಿಡುತ್ತಾರೆ ಎಂಬ ಭರವಸೆ ನನಗಿದೆ. ಇಂತಹವರು ಹೆಚ್ಚು ಹೆಚ್ಚು ಜನ ಇರಬೇಕೆಂದು ಮನಸ್ಸು ಬಯಸುತ್ತದೆ.

– ***ರೊಮಿಲಾ ಥಾಪರ್,*** *ಖ್ಯಾತ ಇತಿಹಾಸಕಾರರು*

ಹೋರಾಟಕ್ಕೆ ಒಂದು ಉದಾಹರಣೆ ತೀಸ್ತಾ; ನಮ್ಮ ಪೀಳಿಗೆಗೆ ಮತ್ತು ಮುಂದಿನ ಪೀಳಿಗೆಗೂ ಕೂಡ. ಹಾಗೂ ಅವರ ಈ ಪುಸ್ತಕ ಆ ಹೋರಾಟಕ್ಕೆ ಒಂದು ಅಸ್ತ್ರ.

– ***ಕನ್ಹಯ್ಯ ಕುಮಾರ್,*** *ವಿದ್ಯಾರ್ಥಿ ಯುವಜನ ನಾಯಕ*



ಚುನಾವಣಾ ಬಾಂಡು ಎಂಬ ಕುಟಿಲ ಯೋಜನೆಯನ್ನು ರದ್ದು ಮಾಡಬೇಕು, ಈಗಲೇ!



"ನಿಧಿ ನೀಡಿಕೆ ಕಾನೂನುಬದ್ಧವಾಗಿರುವ ವರೆಗೆ ರಾಜಕೀಯ ಪಕ್ಷಗಳಿಗೆ ಯಾರು ನಿಧಿ ನೀಡುತ್ತಾರೆ ಎಂದು ತಿಳಿಯುವ ಹಕ್ಕು ಸಾರ್ವಜನಿಕರಿಗೆ ಇಲ್ಲ" ಎಂಬ ಒಂದು ದಂಗುಬಡಿಸುವ ಹೇಳಿಕೆಯನ್ನು ಸರಕಾರದ ಪರವಾಗಿ ಅಟಾರ್ನಿ ಜನರಲ್ ನೀಡಿದ್ದಾರೆ. ತದ್ವಿರುದ್ಧವಾಗಿ, ಸುಪ್ರಿಂ ಕೋರ್ಟ್ ಜನತೆಗೆ ತಿಳಿಯುವ ಹಕ್ಕು ಇದೆ ಎಂಬ ನಿಲುವನ್ನು ಘೋಷಿಸಿದೆ. ಹೀಗಿರುವಾಗ, ಅದು ಒಂದು ಅಂತಿಮ ತೀರ್ಪು ಕೊಡುವ ವರೆಗೆ ಈ ಯೋಜನೆಗೆ ತಡೆಯಾಜ್ಞೆಯನ್ನಾದರೂ ಕೊಡಬಹುದಿತ್ತು.



ಪ್ರಕಾಶ ಕಾರಟ್

ಮಾರ್ಚ್ 2018ರಲ್ಲಿ ಜಾರಿಗೆ ಬಂದ ಚುನಾವಣಾ ಬಾಂಡುಗಳ ಯೋಜನೆ ಕಾರ್ಪೊರೇಟ್ ನಿಧಿಗಳನ್ನು, ಕಮಿಶನ್ ಲಂಚಗಳನ್ನು ಮತ್ತು ಕಪ್ಪು ಹಣವನ್ನು ಆಳುವ ಪಕ್ಷದ ಖಜಾನೆಗೆ ಎಳೆದುಕೊಳ್ಳುವ ಒಂದು ಭಂಡ ಮತ್ತು ಅಪಾರದರ್ಶಕ ವಿಧಾನ.

ಆದ್ದರಿಂದಲೇ, ಸಿಪಿಐ(ಎಂ), ಈ ಯೋಜನೆಯನ್ನು ಮತ್ತು ಅದಕ್ಕಾಗಿ ಮಾಡಿದ ತಿದ್ದುಪಡಿಗಳನ್ನು ಸುಪ್ರಿಂ ಕೋರ್ಟಿನಲ್ಲಿ ಪ್ರಶ್ನಿಸಿದೆ. ಅಸೋಸಿಯೇಷನ್ ಫಾರ್ ಡೆಮಾಕ್ರೆಟಿಕ್ ರಿಫಾರ್ಮ್ಸ್(ಎಡಿಆರ್–ಪ್ರಜಾಸತ್ತಾತ್ಮಕ ಸುಧಾರಣೆಗಳ ಸಂಘ) ಕೂಡ ಈ ಯೋಜನೆಯನ್ನು ರದ್ದುಗೊಳಿಸುವಂತೆ ನ್ಯಾಯಾಲಯಕ್ಕೆ ಅರ್ಜಿ ಹಾಕಿದೆ. ಚುನಾವಣಾ ಬಾಂಡುಗಳನ್ನು ಸ್ವೀಕರಿಸುವುದಿಲ್ಲ ಎಂದು ಹೇಳಿರುವ ಏಕೈಕ ಪಕ್ಷ ಸಿಪಿಐ(ಎಂ).

ಈ ಯೋಜನೆಯಲ್ಲಿ ಅನಾಮಧೇಯ ದಾನಿಗಳು ಒಂದು ರಾಜಕೀಯ ಪಕ್ಷಕ್ಕೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ(ಎಸ್‌ಬಿಐ)ದ ಇದಕ್ಕಾಗಿ ನಿಯೋಜಿತವಾದ ಖಾತೆಗಳ ಮೂಲಕ ಎಷ್ಟು ಬೇಕಾದರೂ ಹಣವನ್ನು ಕೊಡಬಹುದು. ಇದಕ್ಕಾಗಿ, ಜನತಾ ಪ್ರಾತಿನಿಧ್ಯ ಕಾಯ್ದೆ, ಆದಾಯ ತೆರಿಗೆ ಕಾಯ್ದೆ, ಕಂಪನಿಗಳ ಕಾಯ್ದೆ ಮತ್ತು ಆರ್‌ಬಿಐ ಕಾಯ್ದೆಯನ್ನು ತಿದ್ದುಪಡಿ ಮಾಡಲಾಯಿತು. ಕಂಪನಿಗಳು ಮೂರು ವರ್ಷಗಳ ನಿವ್ವಳ ಲಾಭದ 7.5% ದ ವರೆಗಿನ ಮೊತ್ತವನ್ನು ಮಾತ್ರ ದೇಣಿಗೆಯಾಗಿ ಕೊಡಬಹುದು ಎಂದಿದ್ದ ಮಿತಿಯನ್ನು ತೆಗೆಯಲಾಯಿತು. ಇನ್ನೂ ಅಪಾಯಕಾರಿ ಸಂಗತಿಯೆಂದರೆ, ಭಾರತದಲ್ಲಿ ಕಾರ್ಯನಿರ್ವಹಿಸುವ ವಿದೇಶಿ ಕಂಪನಿಗಳು ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡಲು ಅನುವಾಗುವಂತೆಯೂ ಕಾಯ್ದೆಯನ್ನು ತಿದ್ದುಪಡಿ ಮಾಡಲಾಯಿತು.

ಅರುಣ್ ಜೇಟ್ಲಿ ತರ್ಕಗಳು

ದಾನಿ ಯಾರೆಂಬುದು ಎಸ್‌ಬಿಐಗೆ ಗೊತ್ತಿರುತ್ತದೆ. ಇದು ಸರಕಾರೀ ಒಡೆತನ ಬ್ಯಾಂಕ್ ಆಗಿರುವುದರಿಂದಾಗಿ, ಅದರ ಮೂಲಕ ಸರಕಾರಕ್ಕೂ ಗೊತ್ತಾಗುತ್ತದೆ. ಆದ್ದರಿಂದ ಕಾರ್ಪೊರೇಟ್‌ಗಳು ಮತ್ತು ದೊಡ್ಡ ದೇಣಿಗೆದಾರರು ಪ್ರತಿಪಕ್ಷಕ್ಕಿಂತ ಆಳುವ ಪಕ್ಷಕ್ಕೇ ದೇಣಿಗೆ ಕೊಡಲು ಮುಂದೆ ಬರುತ್ತಾರೆ. ದಾನಿಗಳ ಹೆಸರನ್ನು ಸಾರ್ವಜನಿಕಗೊಳಿಸುವುದಿಲ್ಲವಾದ್ದರಿಂದ, ಅವರು ಈಗ ಯಾವುದೇ ಭಯವಿಲ್ಲದೆ ಯಾರಿಗಾದರೂ ದೇಣಿಗೆ ಕೊಡಬಹುದು ಎಂಬ ಹಣಕಾಸು ಮಂತ್ರಿ ಅರುಣ್ ಜೇಟ್ಲಿ ತರ್ಕಕ್ಕೆ ತದ್ವಿರುದ್ಧವಾಗಿ, ಸರಕಾರಕ್ಕೆ ದಾನಿಯ ಹೆಸರು ಗೊತ್ತಾಗುವುದರಿಂದಾಗಿ, ಈ ಬಾಂಡ್‌ಗಳು ಮುಖ್ಯವಾಗಿ ಆಳುವ ಪಕ್ಷಕ್ಕೇ ಬರುವುದನ್ನು ಖಾತ್ರಿ ಮಾಡಿಕೊಂಡಂತಾಗಿದೆ.

ಇದರ ಫಲಿತಾಂಶ ನಿರೀಕ್ಷಿಸಿದಂತೆಯೇ ಇದೆ. ನವಂಬರ್ 2018ರ ವರೆಗೆ ಎಸ್‌ಬಿಐ ಕೊಟ್ಟಿರುವ ಬಾಂಡುಗಳಲ್ಲಿ 95%ವನ್ನು ಬಿಜೆಪಿ ಪಡೆದಿದೆ. ಚುನಾವಣೆಗಳ ಪ್ರಕಟಣೆಯ ನಂತರ ನೀಡಲಾರಂಭಿಸಿರುವ ಚುನಾವಣಾ ಬಾಂಡುಗಳಲ್ಲೂ ಇದು ಮುಂದುವರೆಯಲಿದೆ.

ಅರುಣ್ ಜೇಟ್ಲಿಯವರ ಇನ್ನೊಂದು ತರ್ಕ, ಇದರಿಂದಾಗಿ ರಾಜಕೀಯ ನಿಧಿ ನೀಡಿಕೆ ಕಾನೂನುಬದ್ಧ ರೀತಿಗಳಲ್ಲಿ ಬರುವಂತಾಗುತ್ತದೆ ಎಂಬುದು ಕೂಡ ಸರಿಯಲ್ಲ ಎಂಬುದು ಸಾಬೀತಾಗಿದೆ. ಏಕೆಂದರೆ ಈ ಚುನಾವಣೆಗಳಲ್ಲಿ ಅಪಾರ ಮೊತ್ತಗಳನ್ನು ನಗದಿನ ಮೂಲಕವೇ ನಿಯೋಜಿಸಲಾಗುತ್ತಿದೆ. ಎಪ್ರಿಲ್ 1 ರ ವರೆಗೆ ಚುನಾವಣಾ ಆಯೋಗದ ಅಧಿಕಾರಿಗಳು 1,400 ಕೋಟಿ ರೂ.ಗಳಷ್ಟು ನಗದನ್ನು ವಶಪಡಿಸಿಕೊಂಡಿದ್ದಾರೆ. ಇದು ಚುನಾವಣೆಗಳಲ್ಲಿ ಹರಿದಾಡುತ್ತಿರುವ ಕಪ್ಪು ಹಣದ ಒಂದು ಸಣ್ಣ ಭಾಗವಷ್ಟೇ.

ಸುಪ್ರಿಂ ಕೋರ್ಟ್, ಅರ್ಜಿಗಳನ್ನು ಹಾಕಿದ ಸುಮಾರು ಒಂದು ವರ್ಷದ ನಂತರ, ಒಂದು ಮಧ್ಯಂತರ ಆದೇಶ ನೀಡಿ, ರಾಜಕೀಯ ಪಕ್ಷಗಳು ತಾವು ಪಡೆದಿರುವ ಚುನಾವಣಾ ಬಾಂಡುಗಳು, ಮತ್ತು ಅವನ್ನು ಯಾರಿಂದ ಪಡೆಯಲಾಯಿತು ಎಂಬುದರ ವಿವರಗಳನ್ನು ಸೀಲಾದ ಲಕೋಟೆಯಲ್ಲಿ ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕು ಎಂದು ಹೇಳಿದೆ. ನ್ಯಾಯಾಲಯ ಈ ಯೋಜನೆಯನ್ನು ಸದ್ಯಕ್ಕೆ ನಿಲ್ಲಿಸುವ ತಡೆಯಾಜ್ಞೆಯನ್ನು ಕೊಟ್ಟಿಲ್ಲ. ಪಕ್ಷಗಳು ನೀಡುವ ವಿವರಗಳನ್ನು ಚುನಾವಣಾ ಆಯೋಗ ತಿಳಿಸಬೇಕು ಎಂದು ಕೂಡ ಹೇಳಿಲ್ಲ. ಬಾಂಡುಗಳನ್ನು ನೀಡುವ ಅವಧಿಯನ್ನು ಮೇ ತಿಂಗಳಲ್ಲಿ 10 ದಿನಗಳಿಂದ 5 ದಿನಗಳಿಗೆ ಇಳಿಸಿದೆಯಷ್ಟೇ. ನ್ಯಾಯಾಲಯ, ಮೇ 30ರಂದು, ಚುನಾವಣೆಗಳು ಮುಗಿದು ಹೋದ ನಂತರ ಈ ಕೇಸಿನ ಮುಂದಿನ ವಿಚಾರಣೆಯನ್ನು ಮಾಡುತ್ತದೆ.

ಅರೆಮನಸ್ಸಿನ ಮತ್ತು ನಿರಾಶಾದಾಯಕ ಆದೇಶ

ಇದೊಂದು ಅರೆಮನಸ್ಸಿನ ಮತ್ತು ನಿರಾಶಾದಾಯಕ ಆದೇಶ. ಏಕೆಂದರೆ, ಅದು ಮೂರು ದಿನಗಳ ಕಾಲ ಎಲ್ಲ ಕಡೆಗಳಿಂದ ತರ್ಕಗಳನ್ನು ಆಲಿಸಿತು. ಚುನಾವಣಾ ಆಯೋಗ ನ್ಯಾಯಲಯದಲ್ಲಿ ಸಲ್ಲಿಸಿದ ಅಫಿಡವಿಟ್‌ನಲ್ಲಿ ಕಾಯ್ದೆಗಳಲ್ಲಿನ ಬದಲಾವಣೆಗಳು "ರಾಜಕೀಯ ಪಕ್ಷಗಳ ರಾಜಕೀಯ ಹಣಕಾಸು/ನಿಧಿ ನೀಡಿಕೆಯ ಪಾರದರ್ಶಕತೆಯ ಮೇಲೆ ಗಂಭೀರ ಪರಿಣಾಮಗಳನ್ನು" ಬೀರುತ್ತವೆಂದು ಹೇಳಿದೆ. ಬಾಂಡುಗಳ ಮೂಲವನ್ನು ವರದಿ ಮಾಡದಿರುವುದು, ಎಂದರೆ, ರಾಜಕೀಯ ಪಕ್ಷ ಸರಕಾರೀ ಕಂಪನಿಗಳಿಂದ ಮತ್ತು ವಿದೇಶಿ ಮೂಲಗಳಿಂದ ದೇಣಿಗೆಗಳನ್ನು ತಗೊಂಡಿದೆಯೋ ಎಂಬುದನ್ನು ದೃಢಪಡಿಸಲಾಗುವುದಿಲ್ಲ ಎಂದಾಗುತ್ತದೆ ಎಂದೂ ಆಯೋಗ ಹೇಳಿದೆ.

ಅಟಾರ್ನಿ ಜನರಲ್ ಅವರು "ನಿಧಿ ನೀಡಿಕೆ ಕಾನೂನುಬದ್ಧವಾಗಿರುವ ವರೆಗೆ ರಾಜಕೀಯ ಪಕ್ಷಗಳಿಗೆ ಯಾರು ನಿಧಿ ನೀಡುತ್ತಾರೆ ಎಂದು ತಿಳಿಯುವ ಹಕ್ಕು ಸಾರ್ವಜನಿಕರಿಗೆ ಇಲ್ಲ" ಎಂಬ ಒಂದು ದಂಗುಬಡಿಸುವ ಹೇಳಿಕೆಯನ್ನು ನೀಡಿದ್ದಾರೆ. ಆದರೆ ಜನತೆಗೆ ತಿಳಿಯುವ ಹಕ್ಕು ಇದೆ ಎಂಬ ನಿಲುವನ್ನು ನ್ಯಾಯಾಲಯ ಘೋಷಿಸಿರುವಾಗ, ಅದು ಒಂದು ಅಂತಿಮ ತೀರ್ಪು ಕೊಡುವ ವರೆಗೆ ಈ ಯೋಜನೆಗೆ ತಡೆಯಾಜ್ಞೆಯನ್ನಾದರೂ ಕೊಡಬಹುದಿತ್ತು.

ಈ ನಡುವೆ ಚುನಾವಣೆಗಳ ಹಿನ್ನೆಲೆಯಲ್ಲಿ ಚುನಾವಣಾ ಬಾಂಡುಗಳ ಮೂಲಕ ನಿಧಿ ನೀಡಿಕೆಯಲ್ಲಿ ಭಾರೀ ಹೆಚ್ಚಳ ಕಾಣಬಂದಿದೆ. ಒಂದು ಮಾಹಿತಿ ಹಕ್ಕು (ಆರ್‌ಟಿಐ) ಪ್ರಶ್ನೆಗೆ ಎಸ್‌ಬಿಐ ನೀಡಿರುವ ಉತ್ತರದ ಪ್ರಕಾರ, ಇಡೀ 2018ಕ್ಕೆ ಹೋಲಿಸಿದರೆ, 2019ರ ಮೊದಲ ಮೂರು ತಿಂಗಳಲ್ಲೇ ಚುನಾವಣಾ ಬಾಂಡ್‌ಗಳಿಗೆ 62% ಹೆಚ್ಚು ಹಣ ಬಂದಿದೆ. 2018ರಲ್ಲಿ ಒಟ್ಟು 1,056.73 ಕೋಟಿ ರೂ.ಗಳ ಮೊತ್ತದ ಚುನಾವಣಾ ಬಾಂಡುಗಳನ್ನು ಕೊಡಲಾಗಿದ್ದರೆ, ಈ ವರ್ಷದ ಜನವರಿಯಿಂದ ಮಾರ್ಚ್ ವರೆಗಿನ ಅವಧಿಯಲ್ಲೇ ನೀಡಿರುವ ಬಾಂಡುಗಳ ಮೊತ್ತ 1,716 ಕೋಟಿ ರೂ.ಗಳು. ನಿಜವಾದ ಚುನಾವಣಾ ತಿಂಗಳುಗಳಾದ ಎಪ್ರಿಲ್ ಮತ್ತು ಮೇ ನಲ್ಲಿ ಇದು ಇನ್ನೂ ಹೆಚ್ಚುತ್ತದೆ ಎಂದು ನಿರೀಕ್ಷಿಸಬಹುದು. ಸುಪ್ರಿಂ ಕೋರ್ಟ್ ಈ ಯೋಜನೆಗೆ ತಡೆಯಾಜ್ಞೆ ನೀಡುವ ಮೂಲಕ ಈ ಹರಿವನ್ನಾದರೂ ನಿಲ್ಲಿಸಬಹುದಾಗಿತ್ತು.

ಆಳುವ ಪಕ್ಷಕ್ಕೆ ದೊಡ್ಡ ಕಾರ್ಪೊರೇಟ್‌ಗಳು ಮತ್ತು ಕಾನೂನುಬಾಹಿರವಾದ ಹಣ ನೀಡಿಕೆಯನ್ನು ಕಾನೂನುಬದ್ಧಗೊಳಿಸುವ ಈ ಕುಟಿಲ ಯೋಜನೆಯನ್ನು ಸುಪ್ರಿಂ ಕೋರ್ಟ್ ಕೊನೆಗೊಳಿಸುತ್ತದೆ ಎಂದು ಆಶಿಸಬೇಕಾಗಿದೆ. ●

ಮುಕ್ತ ಮತದಾನದ ಚುನಾವಣಾ ಆಯೋಗದ ಆಶ್ವಾಸನೆ ಹುಸಿಯಾಗುತ್ತಿದೆ

ಪುಟ 2 ರಿಂದ

ಮುಗಿಯುವ ವರೆಗೆ ಅವರನ್ನು ಹಿಡಿದಿಡಬೇಕು.

3. ಈ ಕ್ಷೇತ್ರದ ಎಲ್ಲ ಮತದಾನ ಕೇಂದ್ರಗಳಲ್ಲಿ ಕೇಂದ್ರೀಯ ಪಡೆಗಳನ್ನು ಮಾತ್ರವೇ ನಿಯೋಜಿಸುವಂತೆ ನೋಡಿಕೊಳ್ಳಬೇಕು, ಈ ಪಡೆಗಳ ಕನಿಷ್ಟ 7 ಸಿಬ್ಬಂದಿಯಾದರೂ ಇರಬೇಕು.
4. ಎಲ್ಲ ಸೂಕ್ಷ್ಮ ವಲಯಗಳಲ್ಲಿ 3ಕ್ಕಿಂತ ಹೆಚ್ಚು ಕೇಂದ್ರೀಯ ಪಡೆಗಳ ಗಸ್ತು ವಾಹನಗಳು ಇರಬೇಕು.
5. ಯಾವುದೇ ಸಂದರ್ಭದಲ್ಲಿ ಸಾಲಿನಲ್ಲಿರುವ ಅನಧಿಕೃತ ವ್ಯಕ್ತಿಗಳು ಮತ್ತು ಸಂಬಂಧಪಟ್ಟ ಮತದಾರರು ಮತದಾನ ಕೇಂದ್ರದೊಳಕ್ಕೆ ಪ್ರವೇಶಿಸಲು ಬಿಡಬಾರದು, ಎಪ್ರಿಲ್ 11ರ ಮತದಾನದಲ್ಲಿ ಇದು ವ್ಯಾಪಕವಾಗಿ ನಡೆದಿದೆ.
6. ಅಭ್ಯರ್ಥಿಗಳ ಪೋಲಿಂಗ್ ಏಜೆಂಟ್‌ಗಳು ಸುರಕ್ಷಿತವಾಗಿ ಹಾಜರಾಗುವಂತೆ ಮತ್ತು ಹಿಂದಿರುಗಲು ಸಾಧ್ಯವಾಗುವಂತೆ, ಅವರು ಕೋರಿಕೊಂಡಲ್ಲೆಲ್ಲ ಚುನಾವಣಾ ಆಯೋಗದ ತುರ್ತು ತನಿಖಾ ಪಡೆಗಳು ಮತ್ತು ಗಸ್ತು ವಾಹನಗಳು ನೋಡಿಕೊಳ್ಳಬೇಕು.
7. ಹೊರಗಿನವರನ್ನು ಯಾರನ್ನೂ, ಅವರು ಆ ಮತಗಟ್ಟೆಯ ಮತದಾರರಲ್ಲದಿದ್ದರೆ, ಅಥವ ಅವರು ಆಗಲೇ ಮತದಾನ ಮಾಡಿದ್ದರೆ, ಅವರನ್ನು ಪ್ರವೇಶಿಸಲು ಬಿಡಬಾರದು, ಇಡೀ ಪ್ರದೇಶವನ್ನು ಸುತ್ತುವರಿದಿರಬೇಕು.
8. ಎರಡಕ್ಕಿಂತ ಹೆಚ್ಚು ಮೋಟಾರ್ ಸೈಕಲ್ ಗಳು ಒಟ್ಟಾಗಿ ಚಲಿಸದಂತೆ ತಡೆಯಬೇಕು ಮತ್ತು ಸಂಜೆ 5 ಗಂಟೆಯ ನಂತರ ಹೊರಗಿನವರನ್ನು ಸಂಪೂರ್ಣವಾಗಿ ನಿಷೇಧಿಸಬೇಕು.

"ಭಾರತದ ಚುನಾವಣಾ ಆಯೋಗ ಇಷ್ಟು ವರ್ಷಗಳಿಂದ ನಮ್ಮ ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವ ಸಂಸದೀಯ ಪ್ರಜಾಪ್ರಭುತ್ವವನ್ನು ರಕ್ಷಿಸುವ ಪ್ರಧಾನ ಕೊತ್ತಳವಾಗಿ ವಿಕಾಸಗೊಂಡಿದೆ ಎಂದು ನಾವು ನಮ್ಮೆಲ್ಲ ಶಕ್ತಿಯನ್ನೂ ಕ್ರೋಡೀಕರಿಸಿ ಹೇಳುತ್ತಿದ್ದೇವೆ. ತ್ರಿಪುರಾದ ಜನತೆ ಮತ್ತು ದೇಶದ ಜನತೆ ಕೂಡ ಭಾರತದ ಚುನಾವಣಾ ಆಯೋಗದ ಸ್ವತಂತ್ರ ಪಾತ್ರಕ್ಕೆ ಅಪಕೀರ್ತಿ ಬರಬಾರದು ಎಂದು ಕಳಕಳಿಯಿಂದ ನಿರೀಕ್ಷಿಸುತ್ತೇವೆ" ಎಂದು ತ್ರಿಪುರಾ ಕುರಿತ ಮನವಿಯ ಕೊನೆಯಲ್ಲಿ ಹೇಳಲಾಗಿದೆ.

ಪಶ್ಚಿಮ ಬಂಗಾಲ: ಆಯುಕ್ತರ ಲಿಖಿತ ಆಶ್ವಾಸನೆಗಳ ಹೊರತಾಗಿಯೂ?..

ಎರಡನೇ ಮನವಿ, ಪಶ್ಚಿಮ ಬಂಗಾಲ ಕುರಿತಾಗಿದ್ದು, ಅಲ್ಲಿ ಒಂದು ಮುಕ್ತ ಮತ್ತು ನ್ಯಾಯಯುತ ಚುನಾವಣೆ ನಡೆಸುವಲ್ಲಿ ರಾಜ್ಯ ಆಡಳಿತದ ನಿಷ್ಪಕ್ಷಪಾತತೆಯ ಬಗ್ಗೆ ಸಾರ್ವಜನಿಕರಲ್ಲಿ ಏನೇನೂ ವಿಶ್ವಾಸ ಇಲ್ಲದಿರುವುದನ್ನು ಚುನಾವಣಾ ಆಯೋಗದ ಗಮನಕ್ಕೆ ತರಲಾಗಿತ್ತು. ಚುನಾವಣಾ ಕರ್ತವ್ಯಗಳನ್ನು ವಹಿಸಲಾದ ಸಿಬ್ಬಂದಿಗಳಲ್ಲಿ ಬಹಳಷ್ಟು ಮಂದಿ ಸಾಮೂಹಿಕವಾಗಿ ತಮ್ಮ ಸುರಕ್ಷಿತತೆ ಮತ್ತು ಭದ್ರತೆಯ ಬಗ್ಗೆ ಆತಂಕವನ್ನು ವ್ಯಕ್ತಪಡಿಸಿದ್ದು, ಇದಕ್ಕಾಗಿ ಕೇಂದ್ರೀಯ ಪಡೆಗಳನ್ನು ನಿಯೋಜಿಸಬೇಕು ಎಂಬುದನ್ನು ಒತ್ತಿ ಹೇಳಿರುವುದು ಪರಿಸ್ಥಿತಿಯ ಗಂಭೀರತೆಯನ್ನು ಎತ್ತಿ ತೋರಿಸುತ್ತದೆ. ಇಂತಹ ಚುನಾವಣಾ ಕರ್ತವ್ಯಕ್ಕೆ ನಿಯೋಜಿತರಾದವರ ಬಂಡಾಯವೇ ಎನ್ನಬಹುದಾದ ಪರಿಸ್ಥಿತಿಯಿಂದಾಗಿಯೇ ಕೊನೆಗೂ ಇಲ್ಲಿಯ ಮುಖ್ಯ ಚುನಾವಣಾ ಆಯುಕ್ತರು ಈ ಕುರಿತು ನಿರ್ದಿಷ್ಟ ಲಿಖಿತ ಆಶ್ವಾಸನೆಯನ್ನು ಕೊಡಬೇಕಾಗಿ ಬಂತು ಎಂಬ ಸಂಗತಿಯನ್ನೂ ಸಿಪಿಐ(ಎಂ) ಮನವಿಯಲ್ಲಿ ಆಯೋಗದ ಗಮನಕ್ಕೆ ತರಲಾಗಿದೆ.

ಇಂತಹ ನಿರ್ದಿಷ್ಟ ಲಿಖಿತ ಆಶ್ವಾಸನೆ ಇದ್ದರೂ, ವಾಸ್ತವವಾಗಿ, ಎಪ್ರಿಲ್ 11ರಂದು ನಡೆದ ಅಲಿಪುರ್‌ದುವಾರ್ ಎಸ್. ಟಿ. ಮತ್ತು ಕೂಚ್‌ಬೆಹಾರ್ ಈ ಎರಡು ಲೋಕಸಭಾ ಕ್ಷೇತ್ರಗಳ ಮತದಾನದಲ್ಲಿ ಚುನಾವಣಾ ಆಯೋಗದಲ್ಲಿ ಸಾಮಾನ್ಯ ಮತದಾರರು ಹೊಂದಿದ್ದ ನಿರೀಕ್ಷೆ ಹುಸಿಯಾಗಿದೆ ಎಂದು ಮನವಿ ಪತ್ರ ಹೇಳಿದೆ. ತ್ರಿಪುರಾದಲ್ಲಿ ಆಗಿರುವಂತೆಯೇ, ಈ ಎರಡು ಕ್ಷೇತ್ರಗಳಲ್ಲೂ ವಿಶ್ವಾಸದ ಭಾವನೆಯನ್ನು ಸೃಷ್ಟಿಸಲು ಮತ್ತು ಒಂದು ಮುಕ್ತ ಹಾಗೂ ನ್ಯಾಯಯುತ ಮತದಾನ ನಡೆಸಲು ಅಗತ್ಯವಾದ ಕೇಂದ್ರೀಯ ಭದ್ರತಾ ಪಡೆಗಳ ಗೈರು ಹಾಜರು ಕಣ್ಣಿಗೆ ರಾಚುವಂತಿತ್ತು.

ಕನಿಷ್ಟ ನಾಲ್ಕು ಎಡರಂಗದ ಅಭ್ಯರ್ಥಿಗಳ ಮೇಲೆಯೇ, ಅಸನ್ ಸೋಲ್ ಕ್ಷೇತ್ರದಲ್ಲಿ ಗೌರಾಂಗ ಚಟರ್ಜಿ, ಡೈಮಂಡ್ ಹಾರ್ಬರ್ ಕ್ಷೇತ್ರದಲ್ಲಿ ಡಾ. ಫವುದ್ ಹಲೀಂ, ಬಸಿರ್ಹಾಟ್ ಕ್ಷೇತ್ರದಲ್ಲಿ ಪಲ್ಲವ್ ಸೇನ್ ಗುಪ್ತ ಮತ್ತು ಬೀರ್‌ಭೂಮ್ ನಲ್ಲಿ ಡಾ. ರಿಯುವುಲ್ ಕರೀಂ ಇವರುಗಳ ಮೇಲೆ ಹಲ್ಲೆಗಳು ನಡೆದಿವೆ. ಈ ಎಲ್ಲ ಪ್ರಕರಣಗಳಲ್ಲೂ, ಅಭ್ಯರ್ಥಿಗಳಿಗೆ ನೀಡಬೇಕಾಗಿದ್ದ ಭದ್ರತೆ ನಾಪತ್ತೆಯಾಗಿತ್ತು, ಅಭ್ಯರ್ಥಿಗಳ ಪ್ರಚಾರದ ವಿಡಿಯೋಗ್ರಫಿ ಸೌಕರ್ಯವೂ ಕೂಡ ಇರಲಿಲ್ಲ ಎಂಬ ಆಶ್ಚರ್ಯದ ಸಂಗತಿಯನ್ನು ಮನವಿ ಮುಖ್ಯ ಚುನಾವಣಾ ಆಯುಕ್ತರ ಗಮನಕ್ಕೆ ತಂದಿದೆ.

ಈ ಮೊದಲೇ ಸಿಪಿಐ(ಎಂ), ಕಾಂಟ್ರಾಕ್ಟ್ ನೌಕರರನ್ನು ಚುನಾವಣಾ ಕರ್ತವ್ಯಗಳಿಗೆ ನಿಯೋಜಿಸಬಾರದು, ಏಕೆಂದರೆ ಅವರು ಆಳುವ ಪಕ್ಷದ ಮರ್ಜಿಗಳನ್ನು ಸಂಪೂರ್ಣವಾಗಿ ಅವಲಂಬಿಸಿರುತ್ತಾರೆ ಎಂದು ಮುಖ್ಯ ಚುನಾವಣಾ ಆಯುಕ್ತರ ಗಮನಕ್ಕೆ ತಂದಿತ್ತು. ದುರದೃಷ್ಟವಶಾತ್, ಇದನ್ನು ಗಮನಕ್ಕೆ ತಗೊಳ್ಳಲಾಗಿಲ್ಲ. ವಿಶೇಷವಾಗಿ ರಾಯ್‌ಗಂಜ್ ಕ್ಷೇತ್ರದ ಬಗ್ಗೆ ವಿಶೇಷ ಗಮನ ನೀಡಬೇಕಾದ ಅಗತ್ಯದ ಬಗ್ಗೆ ಮುಕ್ತ ಮತ್ತು ನ್ಯಾಯಯುತ ಚುನಾವಣೆಗಾಗಿ ಅಲ್ಲಿ ಕೇಂದ್ರೀಯ ಪಡೆಗಳನ್ನು ನಿಯೋಜಿಸುವ ಅಗತ್ಯದ ಬಗ್ಗೆ ದಸ್ತಾವೇಜುಗಳನ್ನು ಈ ಮನವಿ ಪತ್ರದೊಂದಿಗೆ ಚುನಾವಣಾ ಆಯೋಗಕ್ಕೆ ಸಲ್ಲಿಸಲಾಗಿದೆ.

ಇದಲ್ಲದೆ, ನರೇಂದ್ರ ಮೋದಿ ಜೀವನ ಚಿತ್ರದಂತೆ, ಅಖಿಲ ಭಾರತ ತೃಣಮೂಲ ಕಾಂಗ್ರೆಸಿನ ಅಧ್ಯಕ್ಷೆ ಮತ್ತು ಪಶ್ಚಿಮ ಬಂಗಾಲದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರ ಜೀವನಚಿತ್ರದ ಟ್ರೇಲರನ್ನು ಕಾನೂನುಬಾಹಿರವಾಗಿ, ಮಾದರಿ ಆಚಾರ ಸಂಹಿತೆಯನ್ನು ಉಲ್ಲಂಘಿಸಿ ಪ್ರಸರಿಸಲಾಗುತ್ತಿದೆ ಎಂಬ ಸಂಗತಿಯನ್ನೂ ಸಿಪಿಐ(ಎಂ) ಮುಖ್ಯ ಚುನಾವಣಾ ಆಯುಕ್ತರ ಗಮನಕ್ಕೆ ತಂದಿದೆ. ಇವೆಲ್ಲವೂ ತುರ್ತಿನ ಸಂಗತಿಗಳಾಗಿದ್ದು, ಚುನಾವಣಾ ಆಯೋಗ ಅಷ್ಟೇ ತುರ್ತಿನಿಂದ ಕ್ರಮ ವಹಿಸುವುದಾಗಿ ಸಿಪಿಐ(ಎಂ)ನ ಮನವಿ ಪತ್ರ ಆಶಿಸಿದೆ. ●

ಬಿಜೆಪಿಯ 'ಸಂಕಲ್ಪ ಪತ್ರ'-ಮತ್ತಷ್ಟು 'ಜುಮ್ಲಾ'ಗಳು: ಜನಗಳ ಬಾಧಿಸುತ್ತಿರುವ ನಿರುದ್ಯೋಗ, ಸಾಮಾಜಿಕ ನ್ಯಾಯ, ಕಪ್ಪುಹಣದ ಬಗ್ಗೆ ಆಘಾತಕಾರಿ ಮೌನ

ಐದು ವರ್ಷಗಳ ಆಳ್ವಿಕೆಯ ನಂತರ ಮತ್ತೊಮ್ಮೆ ಅಧಿಕಾರ ಕೇಳುತ್ತಿರುವ ಬಿಜೆಪಿಯ 2019ರ ಚುನಾವಣಾ ಪ್ರಣಾಳಿಕೆ ಸುಳ್ಳುಗಳ ಮೇಲೆ ನಿಂತ ಮತ್ತು ಪ್ರತಿಗಾಮಿ ಯೋಚನೆಗಳಿಂದ ತುಂಬಿದ ದಸ್ತಾವೇಜು. ಈ 'ಸಂಕಲ್ಪ ಪತ್ರ' ದೇಶದ ಜನರನ್ನು ಬಹುವಾಗಿ ಬಾಧಿಸುವ ಪ್ರಮುಖ ಪ್ರಶ್ನೆಗಳ ಬಗ್ಗೆ, ಈಗ ಮೋದಿ ಆಳ್ವಿಕೆಯಲ್ಲಿ ಸಾಮಾನ್ಯವಾಗಿ ಬಿಟ್ಟಿರುವ ಆಘಾತಕಾರಿ ಮೌನ ವಹಿಸಿರುವುದೇ ಅದರ ವಿಫಲತೆಯನ್ನು ಮತ್ತು ಅದನ್ನು ಅಧಿಕಾರದಿಂದ ಇಳಿಸಬೇಕಾದ ಅಗತ್ಯವನ್ನು ಸಾರಿ ಹೇಳುತ್ತಿದೆ.



ಪಾಪ್-ಅಪ್ ಮ್ಯಾನಿಫೆಸ್ಟೊ-ಕೇಶವ್, ದಿ ಹಿಂದು

ಈ ಬಾರಿ ಬಿ.ಜೆ.ಪಿ. ಸಾಕಷ್ಟು ಮೊದಲೇ 'ಸಂಕಲ್ಪ ಪತ್ರ' ಎಂಬ ತನ್ನ ಚುನಾವಣಾ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದೆ. 2014ರಲ್ಲಿ ಮೋದಿಯವರನ್ನು ತನ್ನ ಪ್ರಧಾನ ಮಂತ್ರಿ ಅಭ್ಯರ್ಥಿ ಎಂದು ಬಹಳ ಮೊದಲೇ ಘೋಷಿಸಿದ್ದರೂ, ಅವರು ಪ್ರಧಾನ ಮಂತ್ರಿ ಹುದ್ದೆಯ ಆಕಾಂಕ್ಷಿಯಾಗಿ ದೇಶವೆಲ್ಲ ಸುತ್ತುತ್ತಿದ್ದರೂ, ಚುನಾವಣಾ ಪ್ರಣಾಳಿಕೆ ಎಂಬುದನ್ನು ಬಿಡುಗಡೆ ಮಾಡಿದ್ದು ಮೊದಲ ಸುತ್ತಿನ ಮತದಾನದ ದಿನದಂದು!

ಆದರೆ ಈ ಬಾರಿ ಸಾಕಷ್ಟು ಮೊದಲೇ 'ಸಂಕಲ್ಪ ಪತ್ರ'ವನ್ನು ಬಿಡುಗಡೆ ಮಾಡಲು, ಈ ಕುರಿತಂತೆ ಚುನಾವಣಾ ಆಯೋಗ ಮಾದರಿ ಆಚಾರ ಸಂಹಿತೆಯನ್ನು ತಿದ್ದುಪಡಿ ಮಾಡಿದ್ದು ಮಾತ್ರ ಕಾರಣವಾಗಿರಲಿಕ್ಕಿಲ್ಲ.

ನಿರೀಕ್ಷಿಸಿದಂತೆ, ನರೇಂದ್ರ ಮೋದಿಯವರನ್ನು ಹಾಡಿ ಹೊಗಳಿರುವ ಈ 'ಸಂಕಲ್ಪ ಪತ್ರ'ವೂ ಹಲವು ಆಶ್ವಾಸನೆಗಳಿಂದ ತುಂಬಿದೆ, ಕೆಲವು 2014ರ ಪುನರಾವರ್ತನೆಗಳಾದರೆ, ಇನ್ನು ಕೆಲವು ಹೊಸದು. ಒಟ್ಟಿನಲ್ಲಿ, ಇದರಲ್ಲಿ ಎರಡು ಗಮನಾರ್ಹ ಸಂಗತಿಗಳಿವೆ. ಒಂದು, ಆರೆಸ್ಸೆಸ್ ಸ್ಫೂರ್ತಿಯ ಅಜೆಂಡಾವನ್ನು ಪೂರ್ಣ ಪ್ರಮಾಣದಲ್ಲಿ ಅಳವಡಿಸಿಕೊಂಡಿರುವುದು, ಮತ್ತು ಎರಡು, ದೇಶದ ಜನರನ್ನು ಬಹುವಾಗಿ ಬಾಧಿಸುವ ಪ್ರಮುಖ ಪ್ರಶ್ನೆಗಳ ಬಗ್ಗೆ, ಈಗ ಮೋದಿ ಆಳ್ವಿಕೆಯಲ್ಲಿ ಸಾಮಾನ್ಯವಾಗಿ ಬಿಟ್ಟಿರುವ ಆಘಾತಕಾರಿ ಮೌನ.

ಆರೆಸ್ಸೆಸ್ ಅಜೆಂಡಾವೇ ಜೀವಾಳ

ಈ 'ಸಂಕಲ್ಪ ಪತ್ರ' ತನ್ನ ಗುರು ಆರೆಸ್ಸೆಸ್‌ನಿಂದ ಸ್ಫೂರ್ತಿ ಪಡೆದ ಪ್ರಶ್ನೆಗಳ ಪ್ಯಾಕೇಜ್‌ಗೆ ತನ್ನ ಬದ್ಧತೆಯನ್ನು ಒತ್ತಿ ಹೇಳಿದೆ. ಏಕೆಂದರೆ ಅದರ ಕಾರ್ಯಕ್ರಮಗಳು, ಯೋಜನೆಗಳು ಇತ್ಯಾದಿಗಳೆಲ್ಲವೂ ಆರೆಸ್ಸೆಸ್ ಬಯಸುವ ಸಮಾಜವನ್ನು ಸಾಧಿಸಲು ಒಂದು ದಾರಿಯಷ್ಟೇ ಎಂಬುದು ಇದರಲ್ಲಿ ಸ್ಪಷ್ಟವಾಗಿದೆ.

ಆದ್ದರಿಂದಲೇ ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ, ಸಮಾನ ನಾಗರಿಕ ಸಂಹಿತೆ, ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಪಟ್ಟ ಸಂವಿಧಾನದ ಕಲಮು 370ನ್ನು ತೆಗೆದು ಹಾಕುವುದು, ಹಾಗೂ 35 ಎ ನ್ನು ರದ್ದುಗೊಳಿಸುವುದು. ಇದಲ್ಲದೆ, ಈಗ, ಪಕ್ಷ ಅಧಿಕಾರಕ್ಕೆ ಮರಳಿದರೆ, ಇಡೀ ದೇಶಕ್ಕೆ ಅನ್ವಯವಾಗುವ ನಾಗರಿಕತ್ವ ತಿದ್ದುಪಡಿ ಮಸೂದೆಯನ್ನು ತರಲಾಗುವುದು, ಶಬರಿಮಲೆ ಪ್ರಶ್ನೆಯನ್ನು "ನಂಬಿಕೆ, ಸಂಪ್ರದಾಯ ಮತ್ತು ಪೂಜಾ ವಿಧಾನದ ವಿಷಯವಾಗಿ ಸುಪ್ರಿಂ ಕೋರ್ಟಿನಲ್ಲಿ "ಸರಿಯಾಗಿ ಪ್ರಸ್ತುತ ಪಡಿಸುವುದು" ಮತ್ತು ನಂಬಿಕೆ ಮತ್ತು ಸಂಪ್ರದಾಯದ ಪ್ರಶ್ನೆಗಳಿಗೆ ಸಂವಿಧಾನದ ರಕ್ಷಣೆ ಪಡೆಯುವುದು ಎಂಬುದನ್ನು ಸೇರಿಸಲಾಗಿದೆ.

ಅಂದರೆ ಎಲ್ಲ ವಿಚ್ಛಿದ್ರಕಾರಿ, ಕೋಮುದ್ವೇಷವನ್ನು ಬಡಿದೆಬ್ಬಿಸುವ, ಸಂವಿಧಾನದ ಆಶಯಗಳಿಗೇ ತದ್ವಿರುದ್ಧವಾದ, ದೇಶವನ್ನು ಕರಾಳ ಮಧ್ಯಯುಗದತ್ತ ಮತ್ತೆ ತಳ್ಳುವ ಆರೆಸ್ಸೆಸ್‌ನ ಎಲ್ಲಾ ನೆಚ್ಚಿನ ವಿಚಾರಗಳು! 2014 ರ "ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಎಷ್ಟು ಟೊಳ್ಳು ಬೊಗಳೆಯಾಗಿತ್ತು ಎಂಬುದಕ್ಕೆ ಇದಕ್ಕಿಂತ ಸ್ಪಷ್ಟವಾದ ಸಾಕ್ಷ್ಯ ಬೇಕಿಲ್ಲ.

ಹಿಂದಿನ ಸಾರ್ವತ್ರಿಕ ಚುನಾವಣೆಗಿಂತ ಒಂದು ಭಿನ್ನತೆಯೆಂದರೆ, 'ರಾಷ್ಟ್ರೀಯ ಭದ್ರತೆ'ಗೆ ಕೊಟ್ಟಿರುವ ಪ್ರಾಧಾನ್ಯತೆ. ಬಿಜೆಪಿಯ ವಿಲಕ್ಷಣ ಜಗತ್ತಿನಲ್ಲಿ ಇದರ ಅರ್ಥವೆಂದರೆ ಪಾಕಿಸ್ತಾನ ಮತ್ತು ಭಯೋತ್ಪಾದಕತೆಯ ಭಯವನ್ನು ಬಡಿದೆಬ್ಬಿಸುವುದು. ಇತ್ತೀಚಿನ ಬಾಲಕೋಟ್ ವಾಯು ಪ್ರಹಾರದ ನಂತರ, ಇದು ಜನಗಳ ದೇಶಪ್ರೇಮದ ಭಾವನೆಯನ್ನು ದುರುಪಯೋಗಪಡಿಸಿಕೊಂಡು ಮತಗಳಿಸುವ ಒಂದು ಉತ್ತಮ ಸಾಧನವಾಗಬಲ್ಲದು ಎಂಬುದನ್ನು ಅದು ಕಂಡು ಕೊಂಡಂತಿದೆ. ಎಲ್ಲ ಭಯೋತ್ಪಾದನೆ ಮತ್ತು ರಾಷ್ಟ್ರೀಯ ಭದ್ರತೆಯ ಪ್ರಶ್ನೆಗಳನ್ನು ಹೇಗೆ ಬಿಜೆಪಿ ಮುಸ್ಲಿಮರೊಂದಿಗೆ ಜೋಡಿಸುತ್ತದೆ ಎಂಬುದು ಇಲ್ಲಿ ಕಂಡು ಬರುತ್ತದೆ.

ಇವೆಲ್ಲ ಬರೀ ಬೊಗಳೆಗಳು ಎಂದು ಬೇರೆ ಹೇಳಬೇಕಾಗಿಲ್ಲ. ಏಕೆಂದರೆ ಮೋದಿ ಆಳ್ವಿಕೆಯಲ್ಲಿ, ಅವರ ಸರಕಾರೀ ಅಂಕಿ-ಅಂಶಗಳ ಪ್ರಕಾರವೇ, ಡಿಸೆಂಬರ್ 2018ರ ವರೆಗಿನ ನಾಲ್ಕೂವರೆ ವರ್ಷಗಳಲ್ಲೇ ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದಕ ಚಟುವಟಿಕೆಗಳಲ್ಲಿ 176% ದಷ್ಟು ಹೆಚ್ಚಳವಾಗಿದೆ. ಭದ್ರತಾ ಸಿಬ್ಬಂದಿಯ ಸಾವುಗಳಲ್ಲಿ 93% ಹೆಚ್ಚಳವಾಗಿದ್ದರೆ, ನಾಗರಿಕರ ಸಾವುಗಳಲ್ಲೂ 35% ಹೆಚ್ಚಳವಾಗಿದೆ.

ದೇಶಾದ್ಯಂತ 1482 ನಾಗರಿಕರು, 813 ಭದ್ರತಾ ಸಿಬ್ಬಂದಿ ಕೊಲ್ಲಲ್ಪಟ್ಟಿದ್ದಾರೆ. ಇನ್ನೊಂದೆಡೆಯಲ್ಲಿ ದೇಶದ ರಕ್ಷಣಾ ವಲಯವನ್ನು ಡಸಾಲ್ಟ್ ನಂತಹ ವಿದೇಶಿ ಕಂಪನಿಗಳಿಗೆ ಮಾರುತ್ತಿರುವ, ಕಪ್ಪು ಚುಕ್ಕೆಗಳೇ ತುಂಬಿಕೊಂಡ ದಾಖಲೆಯಿರುವ ಪ್ರಧಾನಿಯೊಬ್ಬರು ಈಗ ಭದ್ರತೆ ಮತ್ತು ಭಯೋತ್ಪಾದನೆಗೆ ಶೂನ್ಯ ಸಹನೆಯ ಹೆಸರಲ್ಲಿ ಮತಯಾಚಿಸುತ್ತಿರುವುದು ಒಂದು ವಿಡಂಬನೆಯೇ ಸರಿ.



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಒಂದೆಡೆಯಲ್ಲಿ "ನಾವು ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಬುಡಕಟ್ಟುಗಳು ಮತ್ತು ಹಿಂದುಳಿದ ಜಾತಿಗಳಿಗೆ ಸಂವಿಧಾನ ಒದಗಿಸಿರುವ ಸೌಕರ್ಯಗಳಿಗೆ ಬದ್ಧರಾಗಿದ್ದೇವೆ" ಎಂಬ ಟೊಳ್ಳು ಮಾತನ್ನು ಬಿಟ್ಟರೆ, ಸಾಮಾಜಿಕ ನ್ಯಾಯದ ಬೇರೆ ಮಾತಿಲ್ಲ. ದಲಿತರ ಮೇಲೆ ಅತ್ಯಾಚಾರಗಳು ಬಹಳಷ್ಟು ಹೆಚ್ಚಿರುವ ಬಗ್ಗೆ, ಜಾನುವಾರುಗಳ ಸಾಗಣೆ, ಅವುಗಳ ಚರ್ಮ ತೆಗೆಯುವ ಕಾಯಕಗಳಲ್ಲಿ ತೊಡಗಿರುವ ದಲಿತರನ್ನು ಬಡಿದು ಹಾಕುವ ಘಟನೆಗಳು ಕಳೆದ ಐದು ವರ್ಷಗಳಲ್ಲಿ ವಿಪರೀತವಾಗಿ ಹೆಚ್ಚಿದ್ದರೂ, ಅದರ ಪ್ರಸ್ತಾಪವೂ ಇಲ್ಲ, ರೋಹಿತ್ ವೆಮುಲ ಆತ್ಮಹತ್ಯೆಯ ಹಿನ್ನೆಲೆಯಲ್ಲಿ ದೇಶಾದ್ಯಂತ ದೇಶದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಭುಗಿಲೆದ್ದಿರುವ ದಲಿತರ ವಿರುದ್ಧ ಸಾಮಾಜಿಕ ಅನ್ಯಾಯದ ಪ್ರಶ್ನೆಯ ಬಗ್ಗೆಯೂ ಅದೇ ಮೌನ. ಆದಿವಾಸಿಗಳ ಮೇಲೆ ಹೆಚ್ಚುತ್ತಿರುವ ನೇರ ಮತ್ತು ಪರೋಕ್ಷ ದಾಳಿಗಳ ಬಗ್ಗೆಯೂ.

ಪರಿಶಿಷ್ಟ ಜಾತಿಗಳು ಎಂಬ ಪದ ಒಂದು ಕಡೆಯಲ್ಲಿ ಮಾತ್ರ ಕಾಣ ಬರುತ್ತಿದೆ. ಅದು ಕೂಡ ತನ್ನ ಆಳ್ವಿಕೆಯ ಕೊನೆಯ ದಿನಗಳಲ್ಲಿ, ಬಿಜೆಪಿ ನೇತೃತ್ವದ ರಾಜ್ಯಗಳಲ್ಲಿ ಚುನಾವಣೆಗಳಲ್ಲಿ ಸೋಲಿನ ಹಿನ್ನೆಲೆಯಲ್ಲಿ ಮೋದಿ ಸರಕಾರ ತಂದ ಮುಂದುವರೆದ ಜಾತಿಗಳಲ್ಲಿ ಆರ್ಥಿಕವಾಗಿ ದುರ್ಬಲ ರಾಗಿರುವವರಿಗೆ 10% ಮೀಸಲಾತಿಯ ಬಗ್ಗೆ ಹೇಳಿಕೊಳ್ಳುವ ಸಂದರ್ಭದಲ್ಲಿ.

ಒಟ್ಟಿನಲ್ಲಿ ಈ ಮೌನದ ಮೂಲಕ ದಲಿತರಿಗೆ ನ್ಯಾಯದ ಬಗ್ಗೆಯಾಗಲೀ, ಜಾತಿ ದಬ್ಬಾಳಿಕೆಯ ಬಗ್ಗೆಯಾಗಲೀ ಅದಕ್ಕೆ ಕಾಳಜಿಯೇ ಇಲ್ಲ ಎಂಬುದನ್ನು ಬಿಜೆಪಿ ಒಪ್ಪಿಕೊಂಡಂತಾಗಿದೆ. ಇದು ಕೂಡ ಆರೆಸ್ಸೆಸ್ ವಿಚಾರಧಾರೆಗೆ ಅನುಗುಣವಾಗಿರುವ ಸಂಗತಿ.

ನಿರುದ್ಯೋಗ- ವಿಫಲತೆಯ ಸಂಪೂರ್ಣ ಉಪೇಕ್ಷೆ

ಉದ್ಯೋಗಾವಕಾಶ ನಿರ್ಮಾಣದ ರಂಗದಲ್ಲಿ ಮೋದಿ ಸರಕಾರ ತನ್ನ ಬಹುದೊಡ್ಡ ಆಶ್ವಾಸನೆಗೆ ಬಗೆದ ವಿಶ್ವಾಸಘಾತವಂತೂ ಈಗ ಹಲವು ವರದಿಗಳಲ್ಲಿ ಜಗಜ್ಜಾಹೀರಾಗಿದೆ. ವ್ಯಾಪಕ ಗೇಲಿಗೂ ಒಳಗಾಗಿದೆ. ಹಲವು ಅಭಿಪ್ರಾಯ ಸಂಗ್ರಹಗಳಲ್ಲಿ ನಿರುದ್ಯೋಗ, ಈಗ ಮತದಾರರನ್ನು ಬಾಧಿಸುತ್ತಿರುವ ಪ್ರಮುಖ ಪ್ರಶ್ನೆಯೆಂದು ಸ್ಪಷ್ಟವಾಗಿ ಕಾಣುತ್ತಿದ್ದರೂ, ಈ 'ಸಂಕಲ್ಪ ಪತ್ರ'ದಲ್ಲಿ ಅದನ್ನು ಸಂಪೂರ್ಣವಾಗಿ ಉಪೇಕ್ಷಿಸಲಾಗಿದೆ. ಯುವಜನರಿಗೆ ಮತ್ತು ಮಹಿಳೆಯರಿಗೆ ಹೊಸ ಉದ್ಯೋಗಾವಕಾಶಗಳ ಮಾತಿದ್ದರೂ, ಆ ಬಗ್ಗೆ ಒಂದು ಸ್ಪಷ್ಟ ಕಣ್ಣೋಟವನ್ನು ಆಧರಿಸಿದ ಯೋಜನೆಗಳ ಮಾತಿಲ್ಲ, ಕೇವಲ ಉದ್ದಿಮೆಗಳಿಗೆ ಮತ್ತು ಕಾರ್ಪೊರೇಟ್‌ಗಳಿಗೆ 'ಪ್ರೋತ್ಸಾಹ', 'ಬೆಂಬಲ'ದ ಮಾತಷ್ಟೇ ಇದೆ.

ಆದರೆ ಈ ಕಾರ್ಪೊರೇಟ್‌ಗಳು ಮತ್ತು ಉದ್ದಿಮೆಗಳು ಇದುವರೆಗೆ ಈ ಸರಕಾರದಿಂದ ಹಿಂದೆಂದಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಲಕ್ಷ ಕೋಟಿ ರೂ.ಗಳ ತೆರಿಗೆ ರಿಯಾಯ್ತಿಗಳ ಮೂಲಕ ಪಡೆದಿರುವ ಪ್ರೋತ್ಸಾಹ', 'ಬೆಂಬಲ'ದ ನಂತರವೂ ಉದ್ಯೋಗಾವಕಾಶಗಳು ನಿರ್ಮಾಣವಾಗಿಲ್ಲ, ಬದಲಿಗೆ ಈ ದೊಡ್ಡ ಕುಳಗಳ ಬ್ಯಾಂಕ್ ಸುಸ್ತಿಗಳಷ್ಟೇ ಬೃಹತ್ ಪ್ರಮಾಣದಲ್ಲಿ ಹೆಚ್ಚಿ ನಮ್ಮ ಬ್ಯಾಂಕಿಂಗ್ ವ್ಯವಸ್ಥೆಯನ್ನು ಬಿಕ್ಕಟ್ಟಿಗೆ ಸಿಲುಕಿಸಿರುವ ಬಗ್ಗೆ ಯಾವುದೇ ಆತಂಕ ಈ ಪಕ್ಷಕ್ಕೆ ಇದ್ದಂತಿಲ್ಲ.

ಅಲ್ಲದೆ, ನೋಟುರದ್ಧತಿ, ಜಿ.ಎಸ್.ಟಿ.ಮತ್ತು ಹೆಚ್ಚುತ್ತಿರುವ ಆಮದುಗಳಿಂದಾಗಿ ಇದುವರೆಗೆ ಅತಿ ಹೆಚ್ಚು ಉದ್ಯೋಗಾವಕಾಶಗಳನ್ನು ನಿರ್ಮಿಸುತ್ತಿದ್ದ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳು ಧ್ವಂಸವಾಗಿ ಬಿಟ್ಟಿರುವ ಬಗ್ಗೆಯೂ ಈ ಪಕ್ಷಕ್ಕೆ ಯಾವುದೇ ಆತಂಕವಿಲ್ಲ.


ನಿಜ, ಉದ್ಯೋಗದ ಪ್ರಶ್ನೆಯಲ್ಲಿ ಕಾಣುತ್ತಿರುವ ಬಿಜೆಪಿಯ ಈ ದಿವಾಳಿಕೋರತನ ಭಾರತದ ಇಡೀ ಆರ್ಥಿಕ ವ್ಯವಸ್ಥೆಯನ್ನು ಆವರಿಸಿರುವ ಬಿಕ್ಕಟ್ಟಿನ ಒಂದು ಸೂಚಕವಷ್ಟೇ. ಆಳುವ ವರ್ಗಗಳ ಬಳಿ ಈ ಉದ್ಯೋಗಾವಕಾಶಹೀನತೆಯ ಬಗ್ಗೆ ಉತ್ತರಗಳಿಲ್ಲ, ಆದರೆ ಅವು ಇದನ್ನು ಉದ್ಯೋಗ ಪಡೆದವರ ಕೂಲಿ-ಸಂಬಳಗಳನ್ನು ಕೆಳಮಟ್ಟದಲ್ಲಿಡಲು ಬಳಸುತ್ತಿವೆ .

ರೈತರ ಸಂಕಟಗಳಿಗೆ ಮತ್ತಷ್ಟು 'ಜುಮ್ಲಾ'ಗಳು

ಈ ಬಿಜೆಪಿ ಪ್ರಣಾಳಿಕೆಯಲ್ಲಿ ರೈತರು ಮತ್ತು ಕೃಷಿಯ ಬಗ್ಗೆ ಬಹಳಷ್ಟು ಬರೆಯಲಾಗಿದೆ. ಆದರೆ ಎಲ್ಲವೂ ಸುಳ್ಳುಗಳು ಅಥವ ಪೊಳ್ಳು ಆಶ್ವಾಸನೆಗಳು. 2014ರಲ್ಲಿ ಆಶ್ವಾಸನೆ ನೀಡಿದಂತೆ ಕನಿಷ್ಟ ಬೆಂಬಲ ಬೆಲೆಗಳನ್ನು ಉತ್ಪಾದನಾ ಖರ್ಚಿನ ಒಂದೂವರೆ ಪಟ್ಟಿಗೆ ಏರಿಸಲಾಗಿದೆ ಎಂದು ಇದು ಪುನರುಚ್ಚರಿಸಿದೆ. ಇದೊಂದು ಶುದ್ಧ ಸುಳ್ಳು ಎಂಬುದನ್ನು ಎಲ್ಲ ರೈತ ಸಂಘಟನೆಗಳು ಈಗಾಗಲೇ ಹಲವು ಬಾರಿ ಹೇಳಿವೆ, ತೋರಿಸಿಕೊಟ್ಟಿವೆ. ಈ ಸರಕಾರ ಗೇಣಿ/ಬಾಡಿಗೆ ಮತ್ತು ಬಡ್ಡಿಗಳನ್ನು ಉತ್ಪಾದನಾ ಖರ್ಚಿನಲ್ಲಿ ಸೇರಿಸದೆ, ಉತ್ಪಾದನಾ ಖರ್ಚನ್ನೇ ಇಳಿಸಿ ಬೆಂಬಲ ಬೆಲೆ ಲೆಕ್ಕಾಚಾರದಲ್ಲಿ ಕೈಯಾಡಿಸಿದೆ. ಆದ್ದರಿಂದಲೇ ಈ ಬೆಂಬಲ ಬೆಲೆಗಳು ಇದ್ದಲ್ಲೂ ರೈತರಿಗೆ ಸಾಕಷ್ಟು ಪ್ರತಿಫಲ ಸಿಕ್ಕಿಲ್ಲ. ಈಗಲೂ ರೈತರು ಕುಸಿಯುತ್ತಿರುವ ಬೆಲೆಗಳಿಂದಾಗಿ ಹತಾಶರಾಗಿದ್ದಾರೆ. ರೈತರ ನಡುವೆ ಈ ಬಗ್ಗೆ ಆಳವಾದ ಕ್ರೋಧ ಮತ್ತು ಹತಾಶೆ ತುಂಬಿರುವುದು ಇತ್ತೀಚಿನ ದಿನಗಳಲ್ಲಿ ದೇಶಾದ್ಯಂತ ವ್ಯಕ್ತಗೊಂಡಿದೆ.

ದೇಶವ್ಯಾಪಿ ರೈತರ ಪ್ರತಿಭಟನೆಗಳು ಈ ಸರಕಾರದ ಕೃಷಿ ಧೋರಣೆಯ ರೈತ-ವಿರೋಧಿ ಸ್ವರೂಪವನ್ನು ಬಯಲಿಗೆ ತಂದರೂ, ರೈತರ

ಪುಟ 12 ಕ್ಕೆ



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ವಾರ್ತಾಭಾರತಿ

ಚೌಕಿದಾರ್ ನರೇಂದ್ರ ಮೋದಿ ಅದಾನಿ, ಅಂಬಾನಿಗಳ ಸಂಪತ್ತನ್ನು ಕಾಯುವವರೇ ಹೊರತು ಜನಸಾಮಾನ್ಯರ ಬದುಕನ್ನಲ್ಲ – ವಸಂತ ಆಚಾರಿ



ಚಾ ಮಾರುವವನೊಬ್ಬ ದೇಶದ ಪ್ರಧಾನಿಯಾಗಲಿದ್ದಾರೆ ಎಂಬ ಹಸಿಹಸಿ ಸುಳ್ಳನ್ನು ಹಬ್ಬಿಸಿ, ಅಲ್ಲಲ್ಲಿ ಚಾಯ್ ಪೇ ಚರ್ಚಾ ಎಂಬ ನಾಟಕವಾಡಿ, ಅಧಿಕಾರಕ್ಕೇರಿದ ಬಳಿಕ ತನ್ನನ್ನು ತಾನು ಪಕೀರನೆಂದು ಕರೆಸಿಕೊಂಡು ಶೋಕಿ ಜೀವನದಲ್ಲೇ ಕಾಲ ಕಳೆದ ನರೇಂದ್ರ ಮೋದಿಯವರು ಅತ್ಯಂತ ಹೆಚ್ಚಿನ ಸಮಯವನ್ನು ವಿದೇಶ ಪ್ರಯಾಣದಲ್ಲೇ ಕಳೆದಿದ್ದಾರೆ.ಇಂದು ಮತ್ತೆ ಚುನಾವಣೆಯನ್ನು ಎದುರಿಸಲು ಚೌಕಿದಾರನ ವೇಷ ಧರಿಸಿ ಜನರನ್ನು ಮರಳುಗೊಳಿಸುತ್ತಿದ್ದಾರೆ. ಜನಸಾಮಾನ್ಯರ ಬದುಕನ್ನು ಹಾಗೂ ದೇಶವನ್ನು ಕಾಯುವ ಬದಲು ದೇಶದ ಸಂಪತ್ತನ್ನು ಲೂಟಿ ಮಾಡುವ ಹಾಗೂ ಜನರ ರಕ್ತವನ್ನು ಹೀರುವ ಟಾಟಾ ಬಿರ್ಲಾ, ಅಂಬಾನಿ, ಅದಾನಿಗಳ ಸಂಪತ್ತನ್ನು ಕಾಯುತ್ತಿದ್ದಾರೆ ಎಂದು ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿಯವರು ಆಕ್ರೋಶ ವ್ಯಕ್ತಪಡಿಸಿದರು.

ಅವರು ಸಿಪಿಐ(ಎಂ) ನೇತ್ರತ್ವದಲ್ಲಿ ಜರುಗಿದ ಮಂಗಳೂರು ನಗರ ಮಟ್ಟದ ರಾಜಕೀಯ ಸಮಾವೇಶವನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಮುಂದುವರಿಸುತ್ತಾ ಅವರು, ನರೇಂದ್ರ ಮೋದಿ ಸರಕಾರದಲ್ಲಿ ಮಹಿಳೆಯರಿಗೆ, ದಲಿತ ಆದಿವಾಸಿ, ಅಲ್ಪಸಂಖ್ಯಾತರಿಗೆ ರಕ್ಷಣೆ ಎಂಬುದೇ ಇಲ್ಲ. ಒಂದು ಕಡೆ ಭೇಟಿ ಬಚಾವೋ ಭೇಟಿ ಪಡಾವೋ ಘೋಷಣೆ ನೀಡಿದರೆ, ಮತ್ತೊಂದು ಕಡೆ ಹಸಿಗೂಸಿನಿಂದ ಹಿಡಿದು ಮಹಿಳೆಯರ ಮೇಲೆ ನಿರಂತರವಾಗಿ ದೌರ್ಜನ್ಯ, ಅತ್ಯಾಚಾರ, ಕೊಲೆಗಳು ನಡೆಯುತ್ತಿದೆ. ಭ್ರಷ್ಟಾಚಾರ ನಿರ್ಮೂಲನೆ ಮಾಡುವುದಾಗಿ ಅಧಿಕಾರಕ್ಕೇರಿದ ನರೇಂದ್ರ ಮೋದಿ ಸರಕಾರವು ಇತ್ತೀಚಿನ ರಫೇಲ್ ಹಗರಣ ಸೇರಿದಂತೆ ಅನೇಕ ವಿಧದ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ಮುಳುಗಿದೆ. ಇಂತಹ ಫ್ಯಾಸಿಸ್ಟ್ ಸ್ವರೂಪದ ಎನ್‌ಡಿಎ ಕೂಟವನ್ನು ಹೀನಾಯವಾಗಿ ಸೋಲಿಸಬೇಕು ಎಂದು ಕರೆ ನೀಡಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ. ಬಾಲಕೃಷ್ಣ ಶೆಟ್ಟಿಯವರು ಮಾತನಾಡುತ್ತಾ, 'ದೇಶಕ್ಕೆ ಅನ್ನ ನೀಡುವ ರೈತಾಪಿ ಜನತೆ, ಸಂಪತ್ತನ್ನು ಸೃಷ್ಟಿಸುವ ಕಾರ್ಮಿಕ ವರ್ಗ, ಸೇವೆ ಮಾಡುವ ನೌಕರರು, ಕೂಲಿ ಕೆಲಸ ಮಾಡುವ ಕೃಷಿ ಕೂಲಿ ಕಾರ್ಮಿಕರು ನರೇಂದ್ರ ಮೋದಿ ಸರಕಾರದಿಂದ ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಮನ್ ಕಿ ಬಾತ್ ಕಾರ್ಯಕ್ರಮದ ಮೂಲಕ ಅವರ ಮನಸ್ಸಿನಲ್ಲಿ ಇದ್ದುದ್ದನ್ನು ಹೇಳುತ್ತಾರೆಯೇ ಹೊರತು ಜನಸಾಮಾನ್ಯರ ಮನಸ್ಸಿನಲ್ಲಿ ಏನಿದೆ ಎಂಬುದನ್ನು ತಿಳಿಯಲು ಆಸಕ್ತಿ ಇಲ್ಲ' ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು 'ಕಳೆದ 10 ವರ್ಷಗಳಿಂದ ಸಂಸದರಾಗಿರುವ ನಳೀನ್ ಕುಮಾರ್ ಕಟೀಲ್ ರವರು ತುಳುನಾಡಿನ ಅಭಿವೃದ್ದಿಗೆ ಎಳ್ಳಷ್ಟೂ ಶ್ರಮ ವಹಿಸಿಲ್ಲ. ಜಿಲ್ಲೆಯ ಆರ್ಥಿಕತೆಯ ಜೀವನಾಡಿ ವಿಜಯಾ ಬ್ಯಾಂಕನ್ನು ಬರೋಡಾ ಬ್ಯಾಂಕಿನೊಂದಿಗೆ ವಿಲೀನಗೊಳಿಸಿದಾಗ ಹಾಗೂ ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಅಧಾನಿಗೆ ಕೊಟ್ಟಾಗ ಒಂದು ಶಬ್ದವೂ ಮಾತನಾಡದೆ ಪರೋಕ್ಷವಾಗಿ ಸಹಕರಿಸಿದ್ದಾರೆ. ಜಿಲ್ಲೆಯ ಯುವಜನರಿಗೆ ಉದ್ಯೋಗ ನೀಡುವ ಬದಲು ಹಿಂದುಳಿದ ವರ್ಗದ ಯುವಕರ ತಲೆಗೆ ಹಿಂದುತ್ವದ ಅಮಲನ್ನೇರಿಸಿ ಜೈಲುಪಾಲಾಗುವಂತೆ ಮಾಡಿ ಅವರ ಭವಿಷ್ಯವನ್ನೇ ಹಾಳು ಮಾಡಿದ ಕುಖ್ಯಾತಿ ಇದೆ. ಜಿಲ್ಲೆಯ ಸೌಹಾರ್ದತೆಗೆ ಬೆಂಕಿ ಹಚ್ಚಲು ಹೊರಟ ನಳೀನ್ ರವರನ್ನು ಸೋಲಿಸುವ ಮೂಲಕ ಜನರ ಬದುಕನ್ನು ಬೆಳಗಿಸಲು ಪ್ರಬಲ ಜಾತ್ಯಾತೀತ ಶಕ್ತಿಗಳನ್ನು ಗೆಲ್ಲಿಸಬೇಕೆಂದು' ಕರೆ ನೀಡಿದರು.

ಸಭೆಯ ಅಧ್ಯಕ್ಷತೆಯನ್ನು ಸಿಪಿಐ(ಎಂ) ಮಂಗಳೂರು ನಗರ ಉತ್ತರ ಕಾರ್ಯದರ್ಶಿ ದಯಾನಂದ ಶೆಟ್ಟಿಯವರು ವಹಿಸಿದ್ದರು. ವೇದಿಕೆಯಲ್ಲಿ ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರಾದ ಜಯಂತಿ ಶೆಟ್ಟಿಯವರು ಉಪಸ್ಥಿತರಿದ್ದರು.

ಸುನಿಲ್ ಕುಮಾರ್ ಬಜಾಲ್





ಸಿಪಿಐಎಂ ನ ಪಿ.ಬಿ.ಸದಸ್ಯರ ಪ್ರಚಾರ





ತಪನ್ ಸೇನ್ : 12 ರಂದು ಸಂಜೆ ಹೊಸಕೋಟೆ





ಬೃಂದಾ ಕಾರತ್ ಪ್ರವಾಸ:
15 ರಂದು ಮದ್ಯಾಹ್ನ ಬಾಗೇಪಲ್ಲಿ,
ಸಂಜೆ ನೆಲಮಂಗಲದಲ್ಲಿ ಭಾಷಣ

ಸುಭಾಶಿಣಿ ಅಲಿ:13 ರಂದು ಸಂಜೆ ಚಿಕ್ಕಬಳಾಪುರ
14 ರಂದು ಯಲಹಂಕ, ದೊಡ್ಡ ಬಳ್ಳಾಪುರ







ಚೌಕಿದಾರ್ ಹೆಸರಿನಲ್ಲಿ ದೇಶವನ್ನೇ ಲೂಟಿಗೈದ ಮೋದಿ ಸರಕಾರ

– ಸುನಿಲ್ ಕುಮಾರ್ ಬಜಾಲ್–

'ಕಳೆದ 5 ವರ್ಷಗಳ ಹಿಂದೆ ಕಪ್ಪುಹಣ ತರುವುದಾಗಿ, ಭ್ರಷ್ಟಾಚಾರ ನಿಗ್ರಹಿಸುವುದಾಗಿ, ಅಚ್ಛೇದಿನ್, ಸಬ್ ಕಾ ಸಾಥ್–– ಸಬ್ ಕಾ ವಿಕಾಸ್ ಮುಂತಾದ ಪೊಳ್ಳು ಭರವಸೆಗಳನ್ನು ನೀಡಿ, ತನ್ನನ್ನು ತಾನು ಚಾಯ್ ವಾಲಾ, ಫಕೀರ ಮುಂತಾದ ಹೆಸರಿನಿಂದ ಕರೆಸಿಕೊಂಡು ದೇಶದ ಜನರಿಗೆ ಮಂಕುಬೂದಿ ಎರಚಿ ಇಡೀ ದೇಶದ ಆರ್ಥಿಕತೆಯನ್ನೇ ಸರ್ವನಾಶ ಮಾಡಿ ಜನರ ಬದುಕನ್ನು ಸಂಕಷ್ಟಕ್ಕೆ ದೂಡಿದ ನರೇಂದ್ರ ಮೋದಿ ಸರಕಾರ ಮತ್ತೊಮ್ಮೆ ಅಧಿಕಾರಕ್ಕೇರಿದರೆ ದೇಶದ ಜಾತ್ಯಾತೀತ ಪರಂಪರೆ ಮತ್ತಷ್ಟು ಅಪಾಯವನ್ನು ಎದುರಿಸಲಿದೆ' ಎಂದು ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸುನಿಲ್ ಕುಮಾರ್ ಬಜಾಲ್ ರವರು ತೀವ್ರ ಆತಂಕವನ್ನು ವ್ಯಕ್ತಪಡಿಸಿದರು.

ಅವರು ಉರ್ವಾಸ್ಟೋರಿನಲ್ಲಿ ಜರುಗಿದ ಸಿಪಿಐ(ಎಂ) ಪಕ್ಷದ ಕಾರ್ಯಕರ್ತರ, ಹಿತೈಷಿಗಳ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಈ ಮಾತುಗಳನ್ನು ಹೇಳಿದರು.

ಮುಂದುವರಿಸುತ್ತಾ ಅವರು, 'ದೇಶ ಕಟ್ಟಬೇಕಾದ ಯುವ ಜನತೆಗೆ ತಾನು ಅಧಿಕಾರಕ್ಕೆ ಬಂದರೆ ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುವುದಾಗಿ, ಅದಕ್ಕಾಗಿ ಮೇಕ್ ಇನ್ ಇಂಡಿಯಾ ಎಂಬ ಘೋಷಣೆಯನ್ನು ನೀಡಿದ ನರೇಂದ್ರ ಮೋದಿಯವರು, ಕಳೆದ 5 ವರ್ಷದಲ್ಲಿ ಸೃಷ್ಟಿಯಾಗಬೇಕಾಗಿದ್ದ 10 ಕೋಟಿ ಉದ್ಯೋಗದಲ್ಲಿ ಕನಿಷ್ಠ 10 ಲಕ್ಷ ಉದ್ಯೋಗವೂ ಸೃಷ್ಟಿಯಾಗಿಲ್ಲ ಎಂಬುದನ್ನು ಕೇಂದ್ರ ಸರಕಾರದ ಇಲಾಖೆಯೇ ಧೃಢಪಡಿಸಿದೆ. ನೋಟು ರದ್ದತಿಯಿಂದಾಗಿ ಇದ್ದ ಲಕ್ಷಾಂತರ ಉದ್ಯೋಗಗಳೇ ನಾಶವಾಗಿದೆ. ಸರಕಾರದ ತಪ್ಪು ನೀತಿಗಳಿಂದಾಗಿ ಲಕ್ಷಗಟ್ಟಲೆ ಕೈಗಾರಿಕೆಗಳು ಮುಚ್ಚುಗಡೆಯಾಗಿ ಕಾರ್ಮಿಕರು ಬೀದಿಪಾಲಾಗಿದ್ದಾರೆ. ಕಳೆದ 5 ವರ್ಷಗಳಲ್ಲಿ ನಿರುದ್ಯೋಗ ಸಮಸ್ಯೆ ಗಂಭೀರ ಹಂತಕ್ಕೆ ತಲುಪಿದೆ. ಮತ್ತೊಂದು ಕಡೆ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣ ಗೊಳಿಸಲಾಗಿದೆ. ರಫೇಲ್ ಹಗರಣದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರವೇ ನಡೆದಿದ್ದು, ಅದಕ್ಕೆ ಸಂಬಂದಿಸಿದ ದಾಖಲೆಗಳೇ ಕಳವಾಗಿದೆ ಎಂದು ದೇಶದ ಸರ್ವೋಚ್ಚ ನ್ಯಾಯಾಲಯಕ್ಕೆ ಸುಳ್ಳು ಹೇಳುವ ಮೂಲಕ ಭ್ರಷ್ಟಾಚಾರ ನಡೆದಿರುವುದನ್ನು ಒಪ್ಪಿಕೊಂಡಂತಾಗಿದೆ. ವಾಸ್ತವತೆ ಹೀಗಿದ್ದರೂ ತನ್ನನ್ನು ತಾನು ದೇಶ ಕಾಯುವ ಕಾವಲುಗಾರನಂತೆ ಬಿಂಬಿಸಿ, ಚೌಕಿದಾರ್ ಹೆಸರಿನಲ್ಲಿ ಮತ್ತೆ ದೇಶವನ್ನು ಲೂಟಿಗೈಯ್ಯಲು ಸಂಚು ರೂಪಿಸುತ್ತಿದೆ' ಎಂದು ಹೇಳಿದರು.

ದ.ಕ. ಜಿಲ್ಲೆಯ ಅಭಿವೃದ್ದಿಗೆ ಸಾಕಷ್ಟು ಅವಕಾಶಗಳಿದ್ದರೂ ಕಳೆದ 25 ವರ್ಷಗಳಿಂದ ಬಿಜೆಪಿ ಗೆದ್ದು ಬಂದಿದ್ದರೂ, ಕಳೆದ 10 ವರ್ಷಗಳಿಂದ ನಳೀನ್ ಕುಮಾರ್ ರವರು ಸಂಸದರಾಗಿದ್ದರೂ ಜಿಲ್ಲೆಯ ಅಭಿವೃದ್ದಿಗೆ ಕಿಂಚಿತ್ತೂ ಶ್ರಮವಹಿಸಿಲ್ಲ. ಜಾತಿ ಧರ್ಮದ ಹೆಸರಿನಲ್ಲಿ ರಾಜಕೀಯ ಮಾಡಿ, ಹಿಂದುತ್ವದ ಅಮಲನ್ನು ಯುವಜನರ ತಲೆಗೇರಿಸಿ ಜಿಲ್ಲೆಯೆಲ್ಲೆಡೆ ಭಯದ ವಾತಾವರಣ ಸೃಷ್ಟಿಸಿ, ಬೆಂಕಿ ಹಚ್ಚುವ ಕಾರ್ಯಕ್ಕೆ ಮುಂದಾಗಿದ್ದಾರೆಯೇ ಹೊರತು ಈ ಜಿಲ್ಲೆಯ ಯುವಜನರಿಗೆ ಉದ್ಯೋಗ ದೊರಕಿಸಲು ಎಳ್ಳಷ್ಟೂ ಪ್ರಯತ್ನಿಸಿಲ್ಲ. ಇಂತಹ ನಾಲಾಯಕ್ಕು ಅಯೋಗ್ಯ ಸಂಸದರು ಪ್ರಜ್ಞಾವಂತ ಜಿಲ್ಲೆಯ ಪ್ರತಿಷ್ಠೆಗೆ ಕಪ್ಪು ಚುಕ್ಕೆ. ಅಂತಹವರನ್ನು ಹೀನಾಯವಾಗಿ ಸೋಲಿಸುವ ಮೂಲಕ ಪ್ರಬಲ ಜಾತ್ಯಾತೀತ ಶಕ್ತಿಗಳ ಗೆಲುವಿಗೆ ಶ್ರಮಿಸಬೇಕೆಂದು' ಕರೆ ನೀಡಿದರು.

ಅಧ್ಯಕ್ಷತೆಯನ್ನು ಸ್ಥಳೀಯ ಸಿಪಿಐ(ಎಂ) ನಾಯಕರಾದ ಮನೋಜ್ ಉರ್ವಾಸ್ಟೋರುರವರು ವಹಿಸಿದ್ದರು. ವೇದಿಕೆಯಲ್ಲಿ ಸಿಪಿಐ(ಎಂ) ನಾಯಕರಾದ ಪ್ರದೀಪ್, ರಘುವೀರ್, ಕಿಶೋರ್, ಇಕ್ಬಾಲ್, ನಾಗೇಂದ್ರರವರು ಉಪಸ್ಥಿತರಿದ್ದರು.

ಪ್ರದೀಪ್ ಕುಮಾರ್



ಉದ್ಯೋಗದ ಬದಲು ನಿರುದ್ಯೋಗ ಸೃಷ್ಟಿ

– ಸಂತೋಷ್ ಬಜಾಲ್

ತಾನು ಅಧಿಕಾರಕ್ಕೆ ಬಂದರೆ ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಯುವಜನರಿಗೆ ಭರವಸೆ ನೀಡಿ,ಅಧಿಕಾರಕ್ಕೇರಿದ ಬಳಿಕ ಮೇಕ್ ಇನ್ ಇಂಡಿಯಾ ಘೋಷಣೆ ಮೊಳಗಿಸಿ, ಜಗತ್ತಿನ 60 ಕ್ಕೂ ಮಿಕ್ಕಿದ ದೇಶಗಳಿಗೆ ಪ್ರದಕ್ಷಿಣೆ ಹಾಕಿ ಶೋಕಿ ಜೀವನವನ್ನು ನಡೆಸಿದ ನರೇಂದ್ರ ಮೋದಿಯವರು, ಕಳೆದ 5 ವರ್ಷಗಳಲ್ಲಿ 10 ಕೋಟಿ ಉದ್ಯೋಗ ಸೃಷ್ಟಿಸಬೇಕಾಗಿತ್ತು. ಆದರೆ ಕೇವಲ 10 ಲಕ್ಷದಷ್ಟು ಮಾತ್ರ ಉದ್ಯೋಗ ಸೃಷ್ಟಿಸಿ ದೇಶದ ಯುವಜನರನ್ನು ನಿರುದ್ಯೋಗದ ಕೂಪಕ್ಕೆ ತಳ್ಳಿದೆ. ಭವಿಷ್ಯದ ಜೀವನದ ಬಗ್ಗೆ ಕಂಗಾಲಾಗಿರುವ ದೇಶದ ಯುವಜನತೆ ಒಕ್ಕೊರಲಿನಿಂದ ಮೋದಿ ಸರಕಾರವನ್ನು ಕೇಳುತ್ತಿದೆ, "ನನ್ನ ಉದ್ಯೋಗ ಎಲ್ಲಿದೆ..."? ಎಂದು. ಆದರೆ ಮೋದಿ ಸರಕಾರವು ಮಾತ್ರ ಯುವಜನರಲ್ಲಿ ಕೋಮು ಉನ್ಮಾದವನ್ನು, ಹುಸಿ ರಾಷ್ಟ್ರಪ್ರೇಮವನ್ನು ಬಡಿದೆಬ್ಬಿಸಿ, ಯುವಜನರ ಬದುಕನ್ನೇ ನಾಶ ಮಾಡಲು ಹೊರಟಿದೆ ಎಂದು ಸಿಪಿಐ(ಎಂ) ದ.ಕ. ಜಿಲ್ಲಾ ಸಮಿತಿ ಸದಸ್ಯರೂ, ಜಿಲ್ಲಾ ಯುವಜನ ನಾಯಕರಾದ ಸಂತೋಷ್ ಕುಮಾರ್ ಬಜಾಲ್ ರವರು ಆತಂಕ ವ್ಯಕ್ತಪಡಿಸಿದರು.

ಅವರು ಬಜಾಲ್ ಪಕ್ಕಲಡ್ಕದಲ್ಲಿ ಜರುಗಿದ ಸಿಪಿಐ(ಎಂ) ಪಕ್ಷದ ಕಾರ್ಯಕರ್ತರ, ಹಿತೈಷಿಗಳ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಮುಂದುವರಿಸುತ್ತಾ ಅವರು, ಕಳೆದ 5 ವರ್ಷಗಳ ಅವಧಿಯಲ್ಲಿ ವಿವಿಧ ಹುದ್ದೆಗಳ ನೇಮಕಾತಿ ಸಂಧರ್ಭದಲ್ಲಿ ಕೋಟಿಗಟ್ಟಲೆ ಯುವಜನರು ಅರ್ಜಿ ಹಾಕಿರುವುದು ದೇಶದ ನಿರುದ್ಯೋಗ ಸಮಸ್ಯೆಯ ಕರಾಳತೆ ಕಣ್ಣಿಗೆ ರಾಚುವಂತಿದ್ದರೂ, ಕೇಂದ್ರ ಸಚಿವರಾದ ಅರುಣ್ ಜೇಟ್ಲೀಯವರು ದೇಶದಲ್ಲಿ ನಿರುದ್ಯೋಗ ಸಮಸ್ಯೆ ಎಂಬುದು ಇಲ್ಲವೇ ಇಲ್ಲ ಎಂಬ ಬೇಜವಾಬ್ದಾರಿ ಹೇಳಿಕೆ ನೀಡುತ್ತಿದ್ದಾರೆ. ಮತ್ತೊಂದು ಕಡೆ ಪ್ರಧಾನಿ ನರೇಂದ್ರ ಮೋದಿಯವರು 'ಪಕೋಡಾ ಮಾರಿ' ಎಂದು ಬಹಿರಂಗ ಹೇಳಿಕೆ ನೀಡುವ ಮೂಲಕ ಯುವಜನತೆಯನ್ನು ಅವಮಾನ ಮಾಡಿದ್ದಾರೆ. ಇಂತಹ ಯುವಜನ ವಿರೋಧಿ ಕೇಂದ್ರ ಸರಕಾರವನ್ನು ಕಿತ್ತೊಗೆಯಬೇಕೆಂದು ಕರೆ ನೀಡಿದರು.

ಸಭೆಯ ಅಧ್ಯಕ್ಷತೆಯನ್ನು ಸಿಪಿಐ(ಎಂ) ಹಿರಿಯ ಸದಸ್ಯರಾದ ಅಶೋಕ್ ಸಾಲ್ಯಾನ್ ರವರು ವಹಿಸಿದ್ದರು. ವೇದಿಕೆಯಲ್ಲಿ ಸಿಪಿಐ(ಎಂ) ಮುಖಂಡರಾದ ಸುರೇಶ್ ಬಜಾಲ್, ದೀಪಕ್ ಬಜಾಲ್, ನಾಗರಾಜ್ ಬಜಾಲ್, ವರಪ್ರಸಾದ್ ಬಜಾಲ್ ರವರು ಉಪಸ್ಥಿತರಿದ್ದರು.

–ವರಪ್ರಸಾದ್ ಬಜಾಲ್

ಕಪ್ಪುಹಣ, ಅಚ್ಛೇದಿನ್, ಗುಜರಾತ್ ಮಾದರಿ ಘೋಷಣೆಗಳು ಈ ಚುನಾವಣೆಯಲ್ಲಿ ಯಾಕಿಲ್ಲ

ಕಳೆದ ಚುನಾವಣೆಯ ಸಂಧರ್ಭದಲ್ಲಿ ದೇಶದ ಜನರಲ್ಲಿ ಮೂಡಿದ ಅನಿಶ್ಚಿತತೆಯ ದುರ್ಲಾಭ ಪಡೆದ ಬಿಜೆಪಿ, ಎಲ್ಲಾ ಸಮಸ್ಯೆಗಳಿಗೆ ಉತ್ತರ ನರೇಂದ್ರ ಮೋದಿ ಪ್ರಧಾನಿಯಾಗಬೇಕೆಂಬ ಉನ್ಮಾದ ಸೃಷ್ಟಿಸಿ, ದೇಶದ ಬಂಡವಾಳಶಾಹಿಗಳು ಕೋಟ್ಯಾಂತರ ರೂ. ಹಣವನ್ನು ಸುರಿಸಿ, ರಾಷ್ಟ್ರೀಯ ಮಾಧ್ಯಮಗಳನ್ನು ತನ್ನ ಕಪಿ ಮುಷ್ಠಿಯಲ್ಲಿಟ್ಟು ವಿದೇಶದಲ್ಲಿರುವ ಕಪ್ಪು ಹಣವನ್ನು 100 ದಿನಗಳಲ್ಲಿ ತರುವುದಾಗಿಯೂ, ಪ್ರತಿಯೊಬ್ಬರ ಖಾತೆಗೆ 15 ಲಕ್ಷ ಹಾಕುವುದಾಗಿಯೂ, ಅಚ್ಛೇದಿನ್ ಬರಲಿದೆಯೆಂದೂ, ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಮಾಡುವುದಾಗಿಯೂ, ಗುಜರಾತ್ ಅಭಿವೃದ್ಧಿ ಮಾದರಿಯಂತೆ ದೇಶವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲಾಗುವುದು ಎಂಬಿತ್ಯಾದಿ ಭ್ರಮೆಗಳನ್ನು ಹುಟ್ಟಿಸಿ, ಅಧಿಕಾರಕ್ಕೇರಿದ ನರೇಂದ್ರ ಮೋದಿಯವರು, ಕಳೆದ 5 ವರ್ಷಗಳ ಅವಧಿಯಲ್ಲಿ ಟಾಟಾ ಬಿರ್ಲಾ ಅಂಬಾನಿ ಅದಾನಿಗಳ ಹಿತ ಕಾಯುವ ಮೂಲಕ ದೇಶದ ಜನಸಾಮಾನ್ಯರ ಬದುಕನ್ನು ಸರ್ವನಾಶಗೊಳಿಸಿದ್ದಾರೆ ಎಂದು ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಹೇಳಿದರು.

ಅವರು ಶಕ್ತಿನಗರದಲ್ಲಿ ಜರುಗಿದ ಸಿಪಿಐ(ಎಂ) ಕಾರ್ಯಕರ್ತರ, ಹಿತೈಷಿಗಳ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಮುಂದುವರಿಸುತ್ತಾ ಅವರು, ಕಳೆದ 10 ವರ್ಷಗಳಿಂದ ದ.ಕ.ಜಿಲ್ಲೆಯಲ್ಲಿ ಸಂಸದರಾಗಿರುವ ನಳೀನ್ ಕುಮಾರ್ ಕಟೀಲ್ ರವರು ಯಾವುದೇ ಒಂದು ಅಭಿವೃದ್ಧಿ ಕಾರ್ಯವನ್ನು ಮಾಡದೆ, ತಾನು 16,000 ಕೋಟಿಗೂ ಮಿಕ್ಕಿ ಹಣವನ್ನು ತಂದು ಅಭಿವೃದ್ಧಿ ಕಾರ್ಯ ಮಾಡಿದ್ದೇನೆಂದು ಬೊಗಳೆ ಬಿಡುತ್ತಿದ್ದಾರೆ. ಮತ್ತೊಂದು ಕಡೆ ಮೋದಿಗಾಗಿ ಮತ ನೀಡಿರೆಂದು ಜನರಲ್ಲಿ ಅಂಗಲಾಚುವ ಮೂಲಕ ತಾನು ಮಾಡಿದ ತಪ್ಪನ್ನು ಸ್ವತಃ ಒಪ್ಪಿಕೊಂಡಿದ್ದಾರೆ. ಹಿಂದುತ್ವದ ಸಿದ್ದಾಂತವನ್ನು ಹೇರುವ ಮೂಲಕ ತುಳುನಾಡಿನ ಸೌಹಾರ್ದತಾ ಪರಂಪರೆಗೆ ಕೊಳ್ಳಿಯನ್ನಿಟ್ಟಿರುವ ನಳೀನ್ ಕುಮಾರ್ ರವರನ್ನು ನಿರ್ಣಾಯಕವಾಗಿ ಸೋಲಿಸುವ ಮೂಲಕ ತುಳುನಾಡನ್ನು ಉಳಿಸಬೇಕಾಗಿದೆ ಎಂದು ಹೇಳಿದರು.

ಸಭೆಯ ಅಧ್ಯಕ್ಷತೆಯನ್ನು ಸಿಪಿಐ(ಎಂ) ಶಕ್ತಿನಗರದ ಮುಖಂಡರಾದ ಉಮೇಶ್ ಶಕ್ತಿನಗರರವರು ವಹಿಸಿದ್ದರು. ವೇದಿಕೆಯಲ್ಲಿ ಸಿಪಿಐ(ಎಂ) ಮುಖಂಡರಾದ ಮೋಹನದಾಸ್, ರಾಹುಲ್ ಕಾನಡ್ಕ, ಕೃಷ್ಣ, ದಿನೇಶ್‌ರವರು ಉಪಸ್ಥಿತರಿದ್ದರು.

ಪ್ರಣಾಳಿಕೆಗಳಲ್ಲಿ ಪ್ರಸ್ತಾಪಿತವಾಗುವ ಭರವಸೆಗಳು ನಿಜಕ್ಕೂ ಜಾರಿಯಾಗುತ್ತವೆಯೇ ಎಂಬುದನ್ನು ಮಾತ್ರವಲ್ಲದೆ ಅವುಗಳ ಸೈದ್ಧಾಂತಿಕ ಸಾರವನ್ನು ಪರಿಶೀಲಿಸುವ ಅಗತ್ಯವಿದೆ. .. .. ಒಂದು ಪರ್ಯಾಯ ಸಾಮಾಜಿಕ ಮತ್ತು ಆರ್ಥಿಕ ಮಾದರಿಯ ಬಗೆಗಿನ ಬದ್ಧತೆಯ ದೃಷ್ಟಿಯಿಂದ ಮತ್ತು ಸಂಘಪರಿವಾರವನ್ನು ನೇರವಾಗಿ ಮುಖಾಮುಖಿಯಾಗುತ್ತಿರುವ ದೃಷ್ಟಿಯಿಂದ ಕಮ್ಯುನಿಸ್ಟ್ ಪಕ್ಷದ ಪ್ರಣಾಳಿಕೆಯು ಮಹತ್ವದ ದಾಖಲೆಗಳಾಗಿವೆ. ಚುನಾವಣಾ ಕಣದಲ್ಲಿ ದಿನೇದಿನೇ ಕುಸಿಯುತ್ತಿರುವ ಅವರ ಸಾಮರ್ಥ್ಯದ ಕಾರಣದಿಂದಾಗಿ ಪ್ರಣಾಳಿಕೆಯಲ್ಲಿರುವ ವಿಷಯಗಳು ಅದರ ಜಾರಿ ಸಾಧ್ಯತೆಗಿಂತ ಹೆಚ್ಚಾಗಿ ಅವು ಮುಂದೆ ಒಂದು ಜನಸಮೂಹದ ಚಳವಳಿಗಳನ್ನು ಕಟ್ಟುವ ಪ್ರಧಾನ ವಿಷಯಗಳಾಗುವ ದೃಷ್ಟಿಯಿಂದ ಮಹತ್ವದ್ದಾಗಿವೆ. ಐತಿಹಾಸಿಕವಾಗಿ ನೋಡಿದರೆ ಈ ಚಳವಳಿಗಳು ಈ ಹಿಂದೆ ಕನಿಷ್ಟ ಕಾಂಗ್ರೆಸ್‌ನಂಥ ಪಕ್ಷಗಳಾದರೂ ಚಳವಳಿಗಳ ಆಗ್ರಹಗಳಲ್ಲಿ ಕೆಲವನ್ನಾದರೂ ಜಾರಿಗೆ ತರುವಂತೆ ಮಾಡುವಲ್ಲಿ ಯಶಸ್ವಿಯಾಗಿತ್ತೆನ್ನುವುದನ್ನು ಕಂಡಿದ್ದೇವೆ.

ಚುನಾವಣಾ ಪ್ರಣಾಳಿಕೆಗಳ ರಾಜಕೀಯ

ಹಾಲಿ ನಡೆಯುತ್ತಿರುವ ಚುನಾವಣೆಗಾಗಿ ಬಹುಪಾಲು ರಾಷ್ಟ್ರೀಯ ಪಕ್ಷಗಳು ಮತ್ತು ಆಯಾ ಪ್ರದೇಶಗಳ ಚುನಾವಣೆಯಲ್ಲಿ ಮಹತ್ವವಾಗಿರುವ ಪ್ರಾದೇಶಿಕ ಪಕ್ಷಗಳು ತಮ್ಮ ತಮ್ಮ ಚುನಾವಣಾ ಪ್ರಣಾಳಿಕೆಗಳನ್ನು ಪ್ರಕಟ ಮಾಡಿವೆ. ಆದರೆ ಪ್ರಣಾಳಿಕೆಗಳು ಹೇಳಿದ್ದನ್ನೇ ಹೇಳುವುದರಿಂದ ಸಾಮಾನ್ಯ ಜನರು ಈ ಪ್ರಣಾಳಿಕೆಗಳನ್ನು ಒಂದು ಚುನಾವಣೆಯ ರೀತಿ ರಿವಾಜು ಎಂಬಂತೆ ಮಾತ್ರ ಭಾವಿಸುತ್ತಿದ್ದಾರೆ. ಅದೇನೇ ಇದ್ದರೂ ಆಯಾ ರಾಜಕೀಯ ಪಕ್ಷಗಳ ರಾಜಕೀಯ ಆದ್ಯತೆಗಳನ್ನೂ ಮತ್ತು ಸೈದ್ಧಾಂತಿಕ ಧೋರಣೆಗಳನ್ನೂ ಅರ್ಥಮಾಡಿಕೊಳ್ಳುವಲ್ಲಿ ಈ ಪ್ರಣಾಳಿಕೆಗಳು ತಮ್ಮ ಮಹತ್ವವನ್ನು ಉಳಿಸಿಕೊಂಡಿವೆ. ಅಷ್ಟು ಮಾತ್ರವಲ್ಲದೆ ಹಿಂದಿನ ಚುನಾವಣೆಗಳಿಗೆ ಮುನ್ನ ಅವರು ಕೊಟ್ಟ ಭರವಸೆಗಳನ್ನು ಹಾಗೂ ಅವುಗಳನ್ನು ಈಡೇರಿಸುವಲ್ಲಿ ಪಕ್ಷಗಳು ಕೈಗೊಂಡ ಕ್ರಮಗಳ ಮೌಲ್ಯಾಂಕನ ಮಾಡುವಲ್ಲಿಯೂ ಇವು ಅತ್ಯಗತ್ಯ ದಾಖಲೆಗಳಾಗಿಯೂ ಉಪಯುಕ್ತವಾಗಿವೆ. ಹೀಗಾಗಿ ಒಂದು ಪಕ್ಷದ ಪ್ರಣಾಳಿಕೆಯನ್ನು ಮತ್ತು ಆಯಾ ಪಕ್ಷಗಳನ್ನು ಮೌಲ್ಯಾಂಕನ ಮಾಡುವಲ್ಲಿ ಅವು ಕೊಟ್ಟ ಭರವಸೆಗಳನ್ನು ಈಡೇರಿಸಿದ ಅಥವಾ ಈಡೇರಿಸಲಾಗದ ಅಂಶಗಳು ಮಹತ್ವದ ಮಾನದಂಡಗಳಾಗಿವೆ. ಆದರೆ ಪ್ರಧಾನಧಾರೆ ಮಾಧ್ಯಮಗಳು ಆಳುವ ಪಕ್ಷಗಳು ಕಳೆದ ಐದು ವರ್ಷಗಳಲ್ಲಿ ಕೊಟ್ಟ ಭರವಸೆಗಳನ್ನು ಎಷ್ಟು ಈಡೇರಿಸಿದೆಯೆಂಬುದನ್ನು ಪರಿಶೀಲಿಸುವ ಗೋಜಿಗೇ ಹೋಗದೇ ವಿರೋಧ ಪಕ್ಷಗಳು ತಾವು ಅಧಿಕಾರಕ್ಕೆ ಬಂದರೆ ಮಾಡುತ್ತೇವೆಂದು ಹೇಳುತ್ತಿರುವ ಭರವಸೆಗಳ ತನಿಖೆ ಮಾತ್ರ ಮಾಡುತ್ತಿವೆ. ಆದರೆ ಈ ರೀತಿ ಒಂದು ರಾಜಕೀಯ ಪಕ್ಷದ ಪ್ರಣಾಳಿಕೆಯನ್ನು ಕೇವಲ ಭರವಸೆಗಳ ಅಂದಾಜುಗಳಿಗೆ ಇಳಿಸಿಬಿಡುವುದು ಕೂಡಾ ತಪ್ಪಾದ ಕ್ರಮವಾಗಿದೆ. ಏಕೆಂದರೆ ಆಗ ರಾಜಕೀಯ ಪಕ್ಷಗಳನ್ನು ಕೇವಲ ಸೇವಾ ಸೌಲಭ್ಯಗಳನ್ನು ಒದಗಿಸುವ ಯಂತ್ರವೆಂಬಂತೆ ಗ್ರಹಿಸುವಂತಾಗುತ್ತದೆ. ಪ್ರಣಾಳಿಕೆಗಳ ರಾಜಕೀಯವು ಜಾರಿಸಾಧ್ಯವಾದ ಭರವಸೆಗಳನ್ನು ಕೊಡುವ ಮತ್ತು ಅದಕ್ಕೆ ಉತ್ತರದಾಯಿತ್ವವನ್ನು ಹೊದಿರಬೇಕಾದ ವಿಷಯಗಳಾಚೆಗೆ ಆಯಾ ಪಕ್ಷಗಳ ಪ್ರಚಾರ ಮತ್ತು ತತ್ವಸಿದ್ಧಾಂತಗಳ ಅಂಶಗಳನ್ನೂ ಹೊಂದಿರುತ್ತವೆ. ಹೀಗಾಗಿ ಒಂದು ರಾಜಕೀಯ ಪಕ್ಷವನ್ನು ಅದರ ಈಡೇರಿಸಬಹುದಾದ ಘೋಷಣೆ ಮತ್ತು ಭರವಸೆಗಳನ್ನು ಆಧರಿಸಿ ಮಾತ್ರವಲ್ಲದೆ ಅವುಗಳ ಪ್ರಚಾರಾತ್ಮಕ ಮತ್ತು ಸೈದ್ಧಾಂತಿಕ ಘೋಷಣೆಗಳ ಮೂಲಕವೂ ಅಳೆಯಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರಮುಖ ರಾಜಕೀಯ ಪಕ್ಷಗಳ ಪ್ರಣಾಳಿಕೆಗಳು ಏನು ಹೇಳುತ್ತವೆ?

ಬಿಜೆಪಿ ಪಕ್ಷವು 2014ರ ಚುನಾವಣೆಯಲ್ಲಿ ತನ್ನ ಪ್ರಣಾಳಿಕೆಯನ್ನು ಮೊದಲಹಂತದ ಚುನಾವಣೆಯಾದ ನಂತರದಲ್ಲಿ ಪ್ರಕಟಿಸಿತ್ತು. ಹೀಗಾಗಿ ಆ ಪಕ್ಷವು ಪ್ರಣಾಳಿಕೆಗಳನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ ಎಂಬುದನ್ನು ಈಗಾಗಲೇ ಸ್ಪಷ್ಟಪಡಿಸಿದೆ. ಆದರೆ ಈ ಬಾರಿ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯು ಚುನಾವಣಾ ಕಣದಲ್ಲಿ ಒಂದಷ್ಟು ಸದ್ದು ಮಾಡುತ್ತಿರುವುದನ್ನು ಮನಗಂಡು ಅದಕ್ಕೆ ಪ್ರತಿಕ್ರಿಯೆ ಎಂಬಂತೆ ಬಿಜೆಪಿ ಪಕ್ಷವು ಸಹ ಅವಸರವಸರದಲ್ಲಿ ತನ್ನ ಪ್ರಣಾಳಿಕೆಯನ್ನು ಸಿದ್ಧಪಡಿಸಿದಂತಿದೆ. ಅದೇನೇ ಇರಲಿ, ಬಿಜೆಪಿ ಪ್ರಣಾಳಿಕೆಯು ಅಭಿವೃದ್ಧಿ ಸಂಬಂಧೀ ಹೇಳಿಕೆಗಳನ್ನು ಹೊಂದಿದ್ದರೂ, ಸಂಘಪರಿವಾರದ ಉದ್ದೇಶಗಳ ತಿರುಳನ್ನೇ ಪ್ರಧಾನವಾಗಿ ತನ್ನ ಪ್ರಣಾಳಿಕೆಯಲ್ಲಿ ಮಂಡಿಸಿದೆ. ಮತ್ತು ಅದರ ಪ್ರಣಾಳಿಕೆಯು ತನ್ನ ಚುನಾವಣಾ ಪ್ರಚಾರದಲ್ಲಿ ಅಳವಡಿಸಿಕೊಂಡಿರುವ ಒಟ್ಟಾರೆ ಸಮಾಜ ವಿಭಜಕ ಮತ್ತು ಕೋಮು ಧೃವೀಕರಣದ ರಾಜಕೀಯಕ್ಕೆ ತಕ್ಕಂತಿದೆ. ಬಿಜೆಪಿ ಪಕ್ಷದ ಪ್ರಣಾಳಿಕೆಯು ಪ್ರಾರಂಭವಾಗುವುದೇ ರಾಷ್ಟ್ರೀಯ ಭದ್ರತೆಯ ವಿಷಯಗಳ ಮೂಲಕ. ಅದರ ತಥಾಕಥಿತ ಅಭಿವೃದ್ಧಿ ಅಜೆಂಡಾಗಳು ನಂತರದಲ್ಲಿ ಹಿಂಬಾಲಿಸುತ್ತವೆ. ಈ ವಿಭಾಗದಲ್ಲಿರುವ ಪೌರತ್ವ ನೋಂದಣಿ ರಿಜಿಸ್ಟ್ರಾರ್ ಅನ್ನು ದೇಶದೆಲ್ಲೆಡೆ ವಿಸ್ತರಿಸುವುದು, ಪೌರತ್ವ ತಿದ್ದುಪಡಿ ಮಸೂದೆ, 370ನೇ ಕಲಮನ್ನು ರದ್ದುಗೊಳಿಸುವುದು ಇತ್ಯಾದಿಗಳು ರಾಷ್ಟ್ರ ಮತ್ತು ರಾಷ್ಟ್ರವಾದದ ಬಗ್ಗೆ ಬಿಜೆಪಿಗಿರುವ ತಾರತಮ್ಯ ಪೂರಿತ ಮತ್ತು ಒಳಗೊಳ್ಳುವುದಕ್ಕಿಂತ ಹೊರದಬ್ಬುವ ತತ್ವದ ಸ್ವರೂಪವನ್ನು ಮತ್ತೊಮ್ಮೆ ಬಯಲುಗೊಳಿಸುತ್ತದೆ. ಇನು ಅಭಿವೃದ್ಧಿ ಸಂಬಂಧೀ ವಿಷಯದಲ್ಲೂ ಸಹ ಬಿಜೆಪಿ ಪ್ರಣಾಳಿಕೆಯು ಯುವಕರನ್ನು ಉದ್ಯಮಿಗಳನ್ನಾಗಿಸುವ ನೀತಿಧೋರಣೆಯಡಿಯಲ್ಲಿ ನಿರುದ್ಯೋಗದ ಪ್ರಶ್ನೆಯನ್ನು ಹಿಂದಕ್ಕೆ ಸರಿಸಿಬಿಡುವ ಪ್ರಯತ್ನವನ್ನು ಮಾಡಿದೆ. ಆ ಮೂಲಕ ಒಂದು ಜ್ವಲಂತ ಮತ್ತು ತುರ್ತು ಸಮಸ್ಯೆಯನ್ನು ನಿರ್ವಹಿಸಬೇಕಾದ ಅಗತ್ಯವನ್ನೇ ಅದು ಪಕ್ಕಕ್ಕೆ ಸರಿಸಿದೆ. ಮಹಿಳಾ ಸಬಲೀಕರಣದ ಬಗ್ಗೆ ಉದ್ದುದ್ದನೇ ಮಾತುಗಳನ್ನಾಡಿದರೂ ಪ್ರಣಾಳಿಕೆಯಲ್ಲಿ ಸಮಾನ ಕೆಲಸಕ್ಕೆ ಸಮಾನ ವೇತನದ ಪ್ರಸ್ತಾಪವಿಲ್ಲ. ಮಾತ್ರವಲ್ಲ ಲಿಂಗ ಸಮಾನತೆಯ ವಿಷಯವನ್ನು ಮುಸ್ಲಿಂ ಮಹಿಳೆಯರ ಆಚರಣೆಗೆ ಮಾತ್ರ ಸೀಮಿತಗೊಳಿಸಲಾಗಿದೆ. ಆದರೆ ಮುಸ್ಲಿಂ ಸಮುದಾಯದೊಳಗಿನ ಸಮಾನತೆಯ ಬಗ್ಗೆ ಇಷ್ಟೆಲ್ಲ ಮೊಸಳೆ ಕಣ್ಣೀರು ಸುರಿಸುವ ಬಿಜೆಪಿಯ ಪ್ರಣಾಳಿಕೆಯು ಅಲ್ಪಸಂಖ್ಯಾತರ ಬಗ್ಗೆ ಘನತೆಯೊಂದಿಗೆ ಅಭಿವೃದ್ಧಿ ಎಂಬ ಒಂದು ಸಾಲನ್ನು ಬಿಟ್ಟರೆ ಮತ್ತೇನನ್ನೂ ಹೇಳಿಲ್ಲ. ಇದು ಬಿಜೆಪಿಯ ರಾಷ್ಟ್ರದ ಪರಿಕಲ್ಪನೆಗೆ ಅಲ್ಪಸಂಖ್ಯಾತ ಸಮುದಾಯಗಳ ಅಸ್ತಿತ್ವವು ಎಷ್ಟು ಅಪ್ರಮುಖ ಎಂದು ಭಾವಿಸುತ್ತದೆಂಬುದನ್ನು ಎತ್ತಿ ತೋರಿಸುತ್ತದೆ. ರಾಮಮಂದಿರ ಮತ್ತು ಶಬರಿಮಲ ವಿಷಯಗಳು ಪ್ರಣಾಳಿಕೆಯ ಭಾಗವಾಗಿದ್ದು ಒಂದು ಸಾಂವಿಧಾನಿಕ ಪ್ರಜಾತಂತ್ರಕ್ಕೆ ಬಿಜೆಪಿಯ ಆಳ್ವಿಕೆಯು ಒಡ್ಡಬಹುದಾದ ಅಪಾಯವನ್ನು ವಿವರಿಸುತ್ತದೆ. ಜನತೆಯ ಶ್ರದ್ಧೆ ಮತ್ತು ನಂಬಿಕೆಗಳಿಗೆ ಸಂಬಂಧಪಟ್ಟ ವಿಷಯಗಳಿಗೆ ಸಾಂವಿಧಾನಿಕ ರಕ್ಷಣೆಯನ್ನು ದಕ್ಕಿಸಿಕೊಳ್ಳಲು ತಮ್ಮ ಪಕ್ಷವು ಶ್ರಮಿಸುತ್ತದೆ ಎಂದು ಅವರ ಪ್ರಣಾಳಿಕೆಯು ಹೇಳುತ್ತದೆ. ಆ ಮೂಲಕ ಅದು ಸಾಂವಿಧಾನಿಕ ಮೌಲ್ಯಗಳನ್ನೇ ಬುಡಮೇಲು ಮಾಡಲು ಬಹಿರಂಗ ಕರೆಯನ್ನೇ ಕೊಟ್ಟಂತಾಗಿದೆ.

ರಾಷ್ಟ್ರೀಯ ಭದ್ರತೆಯೇ ಮೊದಲು ಎಂಬ ಬಿಜೆಪಿಯ ಪ್ರಣಾಳಿಕೆಗೆ ವ್ಯತಿರಿಕ್ತವಾಗಿ ಕಾಂಗ್ರೆಸ್ ಪ್ರಣಾಳಿಕೆಯು ಉದ್ಯೋಗದ ಪ್ರಶ್ನೆಗೆ ಮಹತ್ವವನ್ನು ನೀಡುವ ಮೂಲಕ ಈ ದೇಶದ ಜನತೆಯ ಜೀವನದ ಮತ್ತು ಜೀವನೋಪಾಯಗಳ ಪ್ರಶ್ನೆಯೇ ಪ್ರಮುಖ ರಾಷ್ಟ್ರೀಯ ಪ್ರಶ್ನೆಯೆಂದು ಪ್ರತಿಪಾದಿಸಿದೆ. ಕನಿಷ್ಟ ಆದಾಯ ಖಾತರಿ ಯೋಜನೆಯನ್ನು ಪ್ರಧಾನವಾಗಿರಿಸಿಕೊಂಡಿರುವುದು ಮತ್ತು ಕೃಷಿಗೆ ಪ್ರತ್ಯೇಕ ಬಜೆಟ್ಟನ್ನು ರೂಪಿಸುವ ಪರಿಕಲ್ಪನೆಗಳನ್ನು ಮುಂದಿರಿಸುವ ಮೂಲಕ, ಒಟ್ಟಾರೆಯಾಗಿ ನವ ಉದಾರವಾದಿ ಚೌಕಟ್ಟಿನೊಳಗೇ ಇದ್ದರೂ, ಪ್ರಜಾತಾಂತ್ರಿಕ ಒತ್ತಡಗಳಿಗೆ ಸಂವೇದನಾಶೀಲವಾಗಿರುವ ಅಂಶವನ್ನು ಕಾಂಗ್ರೆಸ್ಸ ಪ್ರಣಾಳಿಕೆ ತೋರಿಸುತ್ತದೆ. ಅಷ್ಟು ಮಾತ್ರವಲ್ಲದೇ ನೈತಿಕ ಪೊಲೀಸ್ಗಿರಿ ಮತ್ತು ಗುಂಪುಹಲ್ಲೆಗಳ ದೊಂಬಿಕೋರರನ್ನು ಅಂತರಿಕ ಭದ್ರತೆಗೆ ಎದುರಾಗಿರುವ ಅಪಾಯಗಳೆಂದು ಗುರುತಿಸಿರುವುದು ನಿರಾಳ ಉಂಟುಮಾಡುವಂಥ ಸಂಗತಿಗಳಾಗಿವೆ. ಇದರ ಅರ್ಥ ಈ ವಿದ್ಯಮಾನವು ಒಂದು ಕಾನೂನು ಭದ್ರತೆಯ ಸಮಸ್ಯೆ ಎಂದಲ್ಲ. ಆ ಗುಂಪುಗಳು ಸಮಾಜದ ಐಕ್ಯತೆಗೆ ಮಾಡುತ್ತಿರುವ ಧಕ್ಕೆಯನ್ನು ಗುರುತಿಸುತ್ತಿರುವುದು ದೇಶದ ಬಹುತ್ವ ಸ್ವರೂಪಕ್ಕೆ ಸಿಕ್ಕಿರುವ ಮನ್ನಣೆಯಾಗಿದೆ. ಇವೆಲ್ಲಕ್ಕಿಂತ ಹೆಚ್ಚಾಗಿ ನಾಗರಿಕ ಹಕ್ಕುಗಳನ್ನು ರಕ್ಷಿಸುವ ಬಗ್ಗೆ (ಕನಿಷ್ಟ ಉದ್ದೇಶವನ್ನಾದರೂ) ವ್ಯಕ್ತಪಡಿಸಿರುವ ಅಂಶವು ಕಾಂಗ್ರೆಸ್ಸ ಪ್ರಣಾಳಿಕೆಯನ್ನು ಬಿಜೆಪಿಗಿಂತ ಭಿನ್ನವಾಗಿಸುತ್ತದೆ. ಇದಲ್ಲದೆ ದೇಶದ್ರೋಹಿ ಕಾಯಿದೆಯನ್ನು ಮತ್ತು ಮಾನನಷ್ಟವನ್ನು ಕ್ರಿಮಿನಲ್ ಅಪರಾಧಗೊಳಿಸುವ ಕಾಯಿದೆಯನ್ನು ರದ್ದು ಮಾಡುವ ಮತ್ತು 1958ರ ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯಿದೆಯ ಅಂಶಗಳನ್ನು ಪುನರ್ಪರಿಶೀಲಿಸುವ ಅಂಶಗಳು ಈ ದೇಶವು ಒಂದು ಸೇನಾಸರೆಯ ರಾಷ್ಟವಾಗದಂತೆ ಕಾಪಾಡಬೇಕೆಂಬ ಕಾಂಗ್ರೆಸ್ಸ ಉದ್ದೇಶಗಳನ್ನು ಸ್ಪಷ್ಟಪಡಿಸುತ್ತದೆ. ಚುನಾವಣೆಯ ಬಗ್ಗೆ ನಡೆದಿರುವ ಸಾರ್ವಜನಿಕ ಚರ್ಚೆಯನ್ನು ಸಾರಾಂಶದಲ್ಲಿ ಒಂದು ಅಮೂರ್ತ ರಾಷ್ಟ್ರದ ಪರಿಕಲ್ಪನೆಗೂ ಮತ್ತು ನೈಜ ಹಾಗೂ ಜೀವಂತ ಮನುಷ್ಯರ ಪರಿಕಲ್ಪನೆಯೂ ನಡುವೆ ನಡೆಯುತ್ತಿರುವ ಸ್ಪರ್ಧೆಯೆಂಬಂತೆ ರೂಪಿಸಲು ಕಾಂಗ್ರೆಸ್ ಪಕ್ಷಕ್ಕೆ ಸಾಧ್ಯವಾದಲ್ಲಿ ಅದರ ಪ್ರಣಾಳಿಕೆಯು ಒಂದು ಪರಿಣಾಮಕಾರಿ ರಾಜಕೀಯ ಸಾಧನವಾಗಿ ಸಹಾಯ ಮಾಡಬಲ್ಲದು.

ಒಂದು ಪರ್ಯಾಯ ಸಾಮಾಜಿಕ ಮತ್ತು ಆರ್ಥಿಕ ಮಾದರಿಯ ಬಗೆಗಿನ ಬದ್ಧತೆಯ ದೃಷ್ಟಿಯಿಂದ ಮತ್ತು ಸಂಘಪರಿವಾರವನ್ನು ನೇರವಾಗಿ ಮುಖಾಮುಖಿಯಾಗುತ್ತಿರುವ ದೃಷ್ಟಿಯಿಂದ ಕಮ್ಯುನಿಸ್ಟ್ ಪಕ್ಷದ ಪ್ರಣಾಳಿಕೆಯು ಮಹತ್ವದ ದಾಖಲೆಗಳಾಗಿವೆ. ಚುನಾವಣಾ ಕಣದಲ್ಲಿ ದಿನೇದಿನೇ ಕುಸಿಯುತ್ತಿರುವ ಅವರ ಸಾಮರ್ಥ್ಯದ ಕಾರಣದಿಂದಾಗಿ ಪ್ರಣಾಳಿಕೆಯಲ್ಲಿರುವ ವಿಷಯಗಳು ಅದರ ಜಾರಿ ಸಾಧ್ಯತೆಗಿಂತ ಹೆಚ್ಚಾಗಿ ಅವು ಮುಂದೆ ಒಂದು ಜನಸಮೂಹದ ಚಳವಳಿಗಳನ್ನು ಕಟ್ಟುವ ಪ್ರಧಾನ ವಿಷಯಗಳಾಗುವ ದೃಷ್ಟಿಯಿಂದ ಮಹತ್ವದ್ದಾಗಿವೆ. ಐತಿಹಾಸಿಕವಾಗಿ ನೋಡಿದರೆ ಈ ಚಳವಳಿಗಳು ಈ ಹಿಂದೆ ಕನಿಷ್ಟ ಕಾಂಗ್ರೆಸ್ಸಂಥ ಪಕ್ಷಗಳಾದರೂ ಚಳವಳಿಗಳ ಆಗ್ರಹಗಳಲ್ಲಿ ಕೆಲವನ್ನಾದರೂ ಜಾರಿಗೆ ತರುವಂತೆ ಮಾಡುವಲ್ಲಿ ಯಶಸ್ವಿಯಾಗಿತ್ತೆನ್ನುವುದನ್ನು ಕಂಡಿದ್ದೇವೆ. ಸಿಪಿಎಂ ಪಕ್ಷವು ಸಲಹೆ ಮಾಡಿರುವ ನಗರ ಉದ್ಯೋಗ ಖಾತರಿ ಯೋಜನೆ ಮತ್ತು ಸಮಾಜವಾದಿ ಪಕ್ಷವು ಬಡತನದ ಜಾತಿ ಸ್ವರೂಪವನ್ನು ಗುರುತಿಸಿರುವುದೂ ಮತ್ತು ಅತಿ ಶ್ರೀಮಂತರ ಮೇಲೆ ಹೆಚ್ಚುವರಿ ತೆರಿಗೆಯನ್ನು ಹಾಕಬೇಕೆಂದು ಮಾಡಿರುವ ಪ್ರಸ್ತಾಪಗಳು ಅಂಥ ಚಳವಳಿ ಸಾಮರ್ಥ್ಯವನ್ನು ಹೊಂದಿವೆ.

ಈ ರಾಜಕೀಯ ಪಕ್ಷಗಳನ್ನು ಹೊರತುಪಡಿಸಿ ಸಫಾಯಿ ಕರ್ಮಾಚಾರಿ ಆಂದೋಲನವು ಮುಂದಿಟ್ಟಿರುವ ಪ್ರಣಾಳಿಕೆಯು ಜೀವದ ಹಕ್ಕನ್ನು ಪ್ರಧಾನವಾಗಿ ಮುನ್ನೆಲೆಗೆ ತಂದಿದೆ. ಅದು ಒಟ್ಟಾರೆಯಾಗಿ ಸಮಾಜ ಮತ್ತು ರಾಜಕೀಯ ವ್ಯವಸ್ಥೆಗೆ ಮಾಡಿರುವ ಒಂದು ನೈತಿಕ ಮನವಿಯಾಗಿದೆ. ಆಳುವ ಪಕ್ಷದ ಟೊಳ್ಳು ರಾಷ್ಟ್ರವಾದಕ್ಕೆ ಪ್ರತಿಯಾಗಿ ಮಾನವ ಘನತೆಯ ಪ್ರಧಾನಾವಾದ ಆದ್ಯತೆಯಾಗಬೇಕೆನ್ನುವ ವಿಷಯವು ನಿಜವಾದ ಅರ್ಥಪಡೆದುಕೊಳ್ಳಬೇಕೆಂದರೆ ಆ ಪ್ರತಿಪಾದನೆಯನ್ನು ಪರಿಣಾಮಕಾರಿಯಾಗಿ ಮತದಾರರ ಬಳಿ ತೆಗೆದುಕೊಂಡು ಹೋಗಬೇಕಾದ ಜವಾಬ್ದಾರಿಯು ಮಾತ್ರ ಪ್ರಧಾನವಾಗಿ ವಿರೋಧಪಕ್ಷಗಳದ್ದೇ ಆಗಿದೆ.

ಕೃಪೆ: Economic and Political Weekly
Apr 13, 2019. Vol. 54. No.15
ಅನು: ಶಿವಸುಂದರ್



ಕಾಸರಗೋಡಿನಲ್ಲಿ ಚುನಾವಣಾ ಪ್ರಚಾರ ಸಭೆ – ಬೃಂದಾಕಾರಟ್ ಮಾತನಾಡುತ್ತಿರುವುದು



ತೆಲಂಗಾಣದಲ್ಲಿ ಚುನಾವಣಾ ಪ್ರಚಾರ



ರಾಜಸ್ತಾನದ ಸಿಕಾರ್ ನಲ್ಲಿ ಸಿಪಿಎಂ ಅಭ್ಯರ್ಥಿಯ ನಾಮಪತ್ರ ಸಲ್ಲಿಕೆ



ಹರಿಯಾಣದಲ್ಲಿ ಚುನಾವಣಾ ಪ್ರಚಾರ

ರೈತ ಕೃಷಿ ಕೂಲಿ ಕಾರ್ಮಿಕ ವಿರೋಧಿ ಬಿಜೆಪಿಯನ್ನು ಸೋಲಿಸಿ. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಉಡುಪಿ ಜಿಲ್ಲಾ ಸಮಿತಿ ಕರೆ

ಪ್ರಧಾನ ಮಂತ್ರಿಗಳು ತಮ್ಮ ಪರಮ ಕೊಡುಗೆ ಎಂಬಂತೆ ಕೊಡುತ್ತಿರುವ ವಾರ್ಷಿಕ ರೂ. 6,000/–ಗಳ ಅಂದರೆ ದಿನಕ್ಕೆ ರೂ. 17/– ರೊಟ್ಟಿ ತುಣಕು ರೈತರನ್ನು ತಣಿಸಲಾರದು. ಏಕೆಂದರೆ ಅವರು ಅದಕ್ಕಿಂತ ಎಷ್ಟೋ ಹೆಚ್ಚು ಪಟ್ಟು ಹಣವನ್ನು ಈ ಸರ್ಕಾರದ ಕಡಿಮೆ ಬೆಲೆ ನಿಗದಿ ಮತ್ತು ಖರೀದಿ ವ್ಯವಸ್ಥೆಯ ಅಭಾವದಿಂದಾಗಿ ಕಳೆದುಕೊಳ್ಳುತ್ತಿದ್ದಾರೆ. ಕೃಷಿ ತಜ್ಞ ಎಂ.ಎಸ್. ಸ್ವಾಮಿನಾಥನ್ ಆಯೋಗ ವರದಿ ಜಾರಿ, ಕೃಷಿ ಆದಾಯ ಹೆಚ್ಚಳ ಬೆಂಬಲ ಬೆಲೆ ನೀಡುವುದಾಗಿ ಭರವಸೆ ನೀಡಿದರೂ ಇದುವರೆಗೆ ಜ್ಯಾರಿಗೊಂಡಿಲ್ಲ. ಪ್ರತಿ ದಿನ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಗಮನ ಹರಿಸದ ಮೋದಿ ಸರ್ಕಾರವನ್ನು ಈ ಚುನಾವಣೆಯಲ್ಲಿ ಮನೆಗೆ ಕಳುಹಿಸಬೇಕು.

ರೈತರು ತಮ್ಮ ಉತ್ಪನ್ನಗಳನ್ನು ಕನಿಷ್ಠ ಬೆಂಬಲ ಬೆಲೆಯಲ್ಲಿ ಮಾರುವ ಹಕ್ಕನ್ನು ಜಾರಿಗೊಳಿಸಿ, ಈ ಬೆಂಬಲ ಬೆಲೆ ಒಟ್ಟು ಉತ್ಪಾದನೆಯ ಖರ್ಚಿಗಿಂತ ಕನಿಷ್ಠ 50% ರಷ್ಟು ಹೆಚ್ಚಿರಬೇಕು. ಕಳೆದ 5 ವರ್ಷಗಳಲ್ಲಿ ಕೃಷಿ ಕಾರ್ಮಿಕರು ಮತ್ತು ರೈತರ ಆದಾಯ ಇಳಿಮುಖವಾಗಿದೆ. ಆದರೆ ಲಲಿತ್‌ಮೋದಿ, ಚೋಕ್ಸಿ, ಮಲ್ಯರಂತವರ ಜಗತ್ತು ಉತ್ತಮಗೊಂಡಿದೆ. ರಾಜ್ಯದ ರೈತರು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಪಡೆದ ರೂ. 42 ಸಾವಿರ ಕೋಟಿ ಸಾಲ ಮನ್ನಾ ಮಾಡಲು ಕೇಂದ್ರ ಸರ್ಕಾರ ಸಿದ್ಧವಿಲ್ಲ. ರೈತರ ಪರವಲ್ಲದ ಸರ್ಕಾರ. ಆದರೆ ಉದ್ಯಮಿಗಳ ರೂ. 6 ಲಕ್ಷ ಕೋಟಿ ಸಾಲವನ್ನು ಮನ್ನಾ ಮಾಡಿರುವುದು ರೈತರಿಗೆ ಮಾಡಿದ ದ್ರೋಹ. ರಾಷ್ಟ್ರೀಯ ಗ್ರಾಮೀಣ ಉದ್ಯೋಗಖಾತರಿ ಯೋಜನೆ ಸಮರ್ಪಕವಾಗಿ ಅನುಷ್ಠಾನಗೊಳಿಸದೇ ಅನುದಾನ ಕಡಿತ ಮಾಡಿರುವುದು ಗ್ರಾಮಾಂತರ ಪ್ರದೇಶದ ಬಡ ಕೃಷಿ ಕೂಲಿಕಾರ್ಮಿಕರಿಗೆ ಅನ್ಯಾಯವೆಸಗಿದ ಬಿಜೆಪಿ ರೈತ ಕೃಷಿ ಕೂಲಿಕಾರ್ಮಿಕ ವಿರೋಧಿಯಾಗಿದೆ. ಈ ಹಿನ್ನಲೆಯಲ್ಲಿ ಶಿವಮೊಗ್ಗ ಲೋಕಸಭಾ ಕ್ಷೇತ್ರ ಹಾಗೂ ಉಡುಪಿ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಲ್ಲಿ ಕೋಮುವಾದಿ ಬಿಜೆಪಿಯನ್ನು ಸೋಲಿಸಬೇಕು. ಸೋಲಿಸಬಲ್ಲ ಅಭ್ಯರ್ಥಿಗೆ ಮತ ನೀಡಬೇಕೆಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರ್ಮಿಕ ಸಂಘದ ಉಡುಪಿ ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಮತದಾರರಲ್ಲಿ ವಿನಂತಿಸಿಕೊಂಡಿದ್ದಾರೆ.

ಬಿಜೆಪಿಯ 'ಸಂಕಲ್ಪ ಪತ್ರ"–ಮತ್ತಷ್ಟು 'ಜುಮ್ಲಾ'ಗಳು... ಪುಟ 8 ರಿಂದ

ಆದಾಯವನ್ನು ದ್ವಿಗುಣಗೊಳಿಸುವ 'ಜುಮ್ಲಾ'ವನ್ನು ಬಿಜೆಪಿ ಪುನರುಚ್ಚರಿಸಿದೆ. ಬೆಳೆಗಳ ಬೆಲೆಗಳಲ್ಲಿ ಕುಸಿತ, ಕೃಷಿ ಕೂಲಿಕಾರರ ಕೂಲಿಗಳಲ್ಲಿ ಇಳಿಕೆ ಮತ್ತು ಕೃಷಿ ಲಾಗುವಾಡುಗಳ ಬೆಲೆಗಳಲ್ಲಿ ಸತತ ಏರಿಕೆಯಿಂದಾಗಿ ಕೃಷಿರಂಗ ಸರ್ವವ್ಯಾಪೀ ಬಿಕ್ಕಟ್ಟನ್ನು ಎದುರಿಸುತ್ತಿರುವಾಗ, ಕೃಷಿ ಆದಾಯಗಳು ಸ್ಥಗಿತಗೊಂಡಿರುವಾಗ ಈ 'ಜುಮ್ಲಾ'ವನ್ನು ರೈತರು ಇನ್ನು ಮುಂದೆಯೂ ನಂಬುತ್ತಾರೆ ಎಂದು ಬಿಜೆಪಿ ಭಾವಿಸಿದಂತಿದೆ.

ಇದಲ್ಲದೆ ಬಹಳಷ್ಟು ಆಶ್ವಾಸನೆಗಳಿವೆ. ಕೃಷಿ ವಲಯದಲ್ಲಿ 25 ಲಕ್ಷ ಕೋಟಿ ರೂ. ಹೂಡಲಾಗುವುದು, 12.5 ಕೋಟಿ ಸಣ್ಣ ಮತ್ತು ಅಂಚಿನಲ್ಲಿರುವ ರೈತರಿಗೆ ಪೆನ್ಶನ್ ನೀಡಲಾಗುವುದು, ಪಿಎಂ–ಕಿಸಾನ್ ಯೋಜನೆಯನ್ನು ಎಲ್ಲ ರೈತರಿಗೆ ವಿಸ್ತರಿಸಲಾಗುವುದು ಹಾಗೂ ಐದು ವರ್ಷಗಳ ಕಾಲ ಬಡ್ಡಿರಹಿತ ಸಾಲ ಕೊಡಲಾಗುವುದು ಎಂದು ಈ ಪ್ರಣಾಳಿಕೆ ಹೇಳಿದೆ. ಆದರೆ ಇವನ್ನೆಲ್ಲ ಈ ಐದು ವರ್ಷಗಳಲ್ಲಿ ಏಕೆ ಮಾಡಿಲ್ಲ ಎಂದು ರೈತರು ಕೇಳಿಯೇ ಕೇಳುತ್ತಾರೆ. ಕಳೆದ ಐದು ವರ್ಷಗಳ ಸರಕಾರದ ರೈತ–ವಿರೋಧಿ ಧೋರಣೆಯ ಹಿನ್ನೆಲೆಯಲ್ಲಿ ರೈತರು ಈ ಎಲ್ಲ ಪೊಳ್ಳು ಆಶ್ವಾಸನೆಗಳನ್ನು ಏಕಾದರೂ ನಂಬಬೇಕು ಎಂಬ ಪ್ರಶ್ನೆಯೂ ಏಳುತ್ತದೆ.

'ಹುಸಿ ಫಲಾನುಭವಿ'ಗಳ ಹೆಸರುಗಳನ್ನು ತೆಗೆಯುವ ಮಟ್ಟಕ್ಕಿಳಿದ ಕಪ್ಪು ಹಣ,ಭ್ರಷ್ಟಾಚಾರದ ವಿರುದ್ಧ ಸಮರ

ಕಪ್ಪು ಹಣ ಮತ್ತು ಭ್ರಷ್ಟಾಚಾರ ಮೋದಿಯವರ 2014ರ ಚುನಾವಣಾ ಪ್ರಚಾರದ ಮುಖ್ಯ ಅಂಶಗಳಾಗಿದ್ದವು. ಕಪ್ಪು ಹಣವನ್ನು ವಿದೇಶಗಳಿಂದ ಹಿಂದಕ್ಕೆ ತರುವ ಆಶ್ವಾಸನೆ ನೆನಪಿದೆಯೇ? ಅದರ ಗತಿಯೇನಾಗಿದೆ ಎಂದೀಗ ಎಲ್ಲರಿಗೂ ಗೊತ್ತಿದೆ. ಆ ಪಕ್ಷದ ಅಧ್ಯಕ್ಷರ 'ಜುಮ್ಲಾ' ಬಣ್ಣನೆ ಅಲ್ಲಿಂದಲೇ ಆರಂಭವಾದದ್ದು ತಾನೇ? ನಂತರ ನೋಟುರದ್ದತಿ ಕಪ್ಪು ಹಣವನ್ನು ಹೊರಗೆಳೆಯುತ್ತದೆ ಎನ್ನಲಾಯಿತು. ಅದರ ದುರ್ಗತಿಯೂ ಈಗ ಜನಜನಿತವಾಗಿದೆ. ಈಗ ಇದು ಮೋದಿ ಮತ್ತು ಬಿಜೆಪಿಯ ಎಲ್ಲ ಹಿರಿಯ–ಕಿರಿಯ ಮುಖಂಡರ ಟ್ವಟರ್ ಗಳಲ್ಲಿ ಹಾಕಿಕೊಂಡಿರುವ, ಕೇಸರಿ ಟೀಶರ್ಟ್‌ಗಳಲ್ಲಿ ಮೆರೆಸುತ್ತಿರುವ 'ಚೌಕೀದಾರ' ಎಂಬ ಬಿರುದಾಗಿ ಉಳಿದಿದೆಯಷ್ಟೇ.

ಆದರೂ ಈ ಪ್ರಣಾಳಿಕೆಯಲ್ಲಿ ಭ್ರಷ್ಟಾಚಾರ–ಮುಕ್ತ ಭಾರತದ ಬಗ್ಗೆ ಒಂದು ಸಣ್ಣ ವಿಭಾಗವಿದೆ. ತಮಾಷೆಯೆಂದರೆ ಅದರಲ್ಲಿ 'ಆರ್ಥಿಕ ಪಲಾಯನಗಾರರ ಕಾಯ್ದೆ'ಯನ್ನು ತಂದಿರುವ ಪ್ರಸ್ತಾಪ ಇದೆ. ಮಲ್ಯ, ಮೋದಿಗಳು, ಚೊಕ್ಸಿ ಮುಂತಾದ ಮೂರು –ನಾಲ್ಕು ಮಾತ್ರವಲ್ಲ 40ಕ್ಕೂ ಹೆಚ್ಚು ಪ್ರಮುಖ ಬ್ಯಾಂಕ್ ವಂಚಕರು ದೇಶದಿಂದ ಪಲಾಯನ ಮಾಡಿ ವಿದೇಶಗಳಲ್ಲಿ ಆರಾಮವಾಗಿ ನೆಲೆಸಿರುವುದನ್ನು ಭಾರತದ ಮತದಾರರು ಮರೆಯಲು ಸಾಧ್ಯವೇ?

ಬಿಜೆಪಿಯ ನಿಜವಾದ ಮಾನಸಿಕತೆ, ಈ "ಸಂಕಲ್ಪ ಪತ್ರ"ದ ಪಠ್ಯದ ಮೊದಲು ಮೋದಿಯವರೇ '130 ಕೋಟಿ ಭಾರತೀಯರನ್ನು ' ಉದ್ದೇಶಿಸಿ ಬರೆದಿರುವ ಬಹಿರಂಗ ಪತ್ರದಲ್ಲಿ ಪ್ರಕಟಗೊಂಡಿದೆ. ಭ್ರಷ್ಟಾಚಾರದ ಬಗ್ಗೆ ಬರೆಯುತ್ತ ಅವರು, ಮಧ್ಯವರ್ತಿಗಳು ಈಗ ಅಧಿಕಾರದ ಚಾವಡಿಗಳಲ್ಲಿ ತಿರುಗಾಡುತ್ತಿಲ್ಲ, ಮತ್ತು 8 ಕೋಟಿ ಹುಸಿ ಫಲಾನುಭವಿಗಳನ್ನು ಆಧಾರ್ ಮತ್ತು ಜನಧನ್ ತೆಗೆದು ಹಾಕಿದೆ ಎಂದಿದ್ದಾರೆ. ಆದರೆ ರಫೆಲ್ ವ್ಯವಹಾರ ಮತ್ತು ವಿವಿಧ ಅದಾನಿ 'ಸಿಹಿ ವ್ಯವಹಾರ'ಗಳಲ್ಲಿ ಪ್ರತಿದಿನ ಹೊರಬರುತ್ತಿರುವ ಸಂಗತಿಗಳು ಏನನ್ನು ತೋರಿಸುತ್ತವೆ, ಭ್ರಷ್ಟಾಚಾರ ಮತ್ತು ಚಮಚಾಗಾರಿಕೆ ಇನ್ನೂ ವ್ಯಾಪಕವಾಗಿ ಹರಡಿದೆ ಎಂಬುದನ್ನು ತಾನೇ?

ಮೋದಿ 8 ಕೋಟಿ ಹುಸಿ ಫಲಾನುಭವಿಗಳ ಮಾತಾಡಿದ್ದಾರೆ, ಈ ಅಂಕಿ–ಅಂಶದ ಮೂಲದ ಬಗ್ಗೆ ಅವರೇನೂ ಹೇಳಿಲ್ಲ. ಆದರೆ ದೇಶದಲ್ಲಿ ಅವರ ಆಳ್ವಿಕೆಯಲ್ಲಿ 56 ಮಂದಿ ಹಸಿವಿನಿಂದ ಸತ್ತಿದ್ದಾರೆ, ಇದರಲ್ಲಿ ಕನಿಷ್ಟ 25 ಆಧಾರ್ ಸಮಸ್ಯೆಗಳಿಂದಾಗಿ ಎಂಬುದು ಅವರಿಗೆ ತಿಳಿದಿದಿಯೇ ಎಂದು ದೇಶದ ಪ್ರಜಾಪ್ರಭುತ್ವ ಆಂದೋಲನ ಕೇಳುತ್ತಿದೆ. ಆದರೆ ಮೋದಿ ಮತ್ತು ಅವರ ಪಕ್ಷಕ್ಕೆ ಭ್ರಷ್ಟಾಚಾರದ ವಿರುದ್ಧ ಹೋರಾಟ 'ಹುಸಿ' ಫಲಾನುಭವಿಗಳ ಹೆಸರನ್ನು ತೆಗೆದು ಹಾಕುವ ಮಟ್ಟಕ್ಕೆ ಇಳಿದಿದೆ.

ಐದು ವರ್ಷಗಳ ಆಳ್ವಿಕೆಯ ನಂತರ ಮತ್ತೊಮ್ಮೆ ಅಧಿಕಾರ ಕೇಳುತ್ತಿರುವ ಬಿಜೆಪಿಯು 2019ರ ಚುನಾವಣಾ ಪ್ರಣಾಳಿಕೆ ಹೀಗೆ ಸುಳ್ಳುಗಳ ಮೇಲೆ ನಿಂತ ಮತ್ತು ಪ್ರತಿಗಾಮಿ ಯೋಚನೆಗಳಿಂದ ತುಂಬಿದ ದಸ್ತಾವೇಜು ಆಗಿರುವುದೇ ಅದರ ವಿಫಲತೆಯನ್ನು ಮತ್ತು ಅದನ್ನು ಅಧಿಕಾರದಿಂದ ಇಳಿಸಬೇಕಾದ ಅಗತ್ಯವನ್ನು ಸಾರಿ ಹೇಳುತ್ತಿದೆ. ●



ಕಾಂಗ್ರೆಸಿನ 'ನ್ಯಾಯ' ಯೋಜನೆ: ಔದಾರ್ಯವಷ್ಟೇ, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸಾಕಾರಗೊಳಿಸುವ ಒಂದು ದಾರಿಯಾಗಲಾರದು– ಪ್ರೊ.ಪ್ರಭಾತ್ ಪಟ್ನಾಯಕ್

ಕಾಂಗ್ರೆಸ್ ಪಕ್ಷ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಆಶ್ವಾಸನೆ ನೀಡಿರುವ 'ನ್ಯಾಯ' ಯೋಜನೆಯ ಬಗ್ಗೆ ಚರ್ಚೆಗಳಾಗುತ್ತಿವೆ. 'ನ್ಯೂನತಮ್ ಆಯ್ ಯೋಜನಾ' ಇದರ ಪೂರ್ಣ ಹೆಸರು. ತಿಂಗಳ ಆದಾಯ 12,000 ರೂ.ಗಿಂತ ಕಡಿಮೆಯಿರುವ ಪ್ರತಿ ಕುಟುಂಬಕ್ಕೆ ತಿಂಗಳಿಗೆ 6000ರೂ. ಹಣ ವರ್ಗಾವಣೆ ಮಾಡುವುದಾಗಿ ಇದು ಆಶ್ವಾಸನೆ ನೀಡುತ್ತದೆ. ದೇಶ'ದಲ್ಲಿ ಒಟ್ಟು ಕುಟುಂಬಗಳ ಸಂಖ್ಯೆ 25 ಕೋಟಿಯಿದ್ದು, ಇದರಲ್ಲಿ 20%ದಷ್ಟು, ಅಂದರೆ 5 ಕೋಟಿ ಕುಟುಂಬಗಳು ಬಡತನದ ರೇಖೆಯ ಕೆಳಗೆ ಇವೆ ಎಂದು ಅಂದಾಜು ಮಾಡಲಾಗಿದೆ. ಈ ಎಲ್ಲ ಕುಟುಂಬಗಳು ಈ ಯೋಜನೆಯ ಫಲಾನುಭವಿಗಳಾಗುತ್ತಾರೆ ಎಂಬುದು ಕಾಂಗ್ರೆಸ್ ಪಕ್ಷದ ಹೇಳಿಕೆ.

ಇದು ಸುಮಾರು 12 ಕೋಟಿ ಸಣ್ಣ ಮತ್ತು ಅಂಚಿನಲ್ಲಿರುವ ರೈತರಿಗೆ ವರ್ಷಕ್ಕೆ 6000ರೂ. ಕೋಟಿ ಕನಿಷ್ಟ ಆದಾಯ ಬೆಂಬಲ ನೀಡಲಾಗುವುದು ಎಂಬ ಮೋದಿ ಸರಕಾರ ಐದು ವರ್ಷಗಳ ಆಳ್ವಿಕೆಯ ಕೊನೆಯಲ್ಲಿ, ದೇಶದಲ್ಲೆಲ್ಲ ರೈತರ ಆಕ್ರೋಶ ಭುಗಿಲೆದ್ದಿರುವ ಹಿನ್ನೆಲೆಯಲ್ಲಿ 'ಮಧ್ಯಂತರ ಬಜೆಟ'ನಲ್ಲಿ ಪ್ರಕಟಿಸಿದ 'ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ'(ಪಿಎಂ–ಕಿಸಾನ್)ಗೆ ಪ್ರತಿಸ್ಪರ್ಧಿ ಎನ್ನಲಾಗಿದೆ.

ವೆಬ್ ಪತ್ರಿಕೆ 'ದಿ ವೈರ್' ಈ 'ನ್ಯಾಯ' ಯೋಜನೆಯ ಬಗ್ಗೆ ಕೆಲವು ಆರ್ಥಿಕ ತಜ್ಞರ ಅಭಿಪ್ರಾಯವನ್ನು ಕೇಳಿತ್ತು. ಅವರಲ್ಲಿ ಜನಪರ ಆರ್ಥಿಕ ತಜ್ಞ ಪ್ರೊ. ಪ್ರಭಾತ್ ಪಟ್ನಾಯಕ್ ಕೂಡ ಒಬ್ಬರು. ಅವರು ಕೊಟ್ಟಿರುವ ಪ್ರತಿಕ್ರಿಯೆಯನ್ನು ನಮ್ಮ ಓದುಗರಿಗಾಗಿ ಇಲ್ಲಿ ಕೊಡಲಾಗಿದೆ.

ಈ ಯೋಜನೆಯನ್ನು ಕಲ್ಪಿಸಿರುವುದೇ ಒಂದು ಔದಾರ್ಯದ ಯೋಜನೆಯಾಗಿಯೇ ಹೊರತು ಘನತೆಯ ಬದುಕಿನ ಹಕ್ಕು ಆಗಿ ಅಲ್ಲ. ನವ–ಉದಾರವಾದಕ್ಕೆ 'ಮಾನವೀಯ ಮುಖ' ತೊಡಿಸುವ ವೈರುಧ್ಯಮಯ ಯೋಚನೆಯ ಇನ್ನೊಂದು ಪ್ರಯತ್ನ, ಆದರೂ ಒಬ್ಬ ದಮನಕಾರೀ ಚಕ್ರವರ್ತಿಗಿಂತ ಉಪಕಾರಿ ಚಕ್ರವರ್ತಿ ಲೇಸು ಎಂಬರ್ಥದಲ್ಲಿ ಇದು ಸ್ವಾಗತಾರ್ಹ, ಆದರೆ ಗಣತಂತ್ರ ಯಾವುದೇ ರಾಜಪ್ರಭುತ್ವಕ್ಕಿಂತ ಲೇಸು ತಾನೇ ಎನ್ನುತ್ತಾರೆ ಪ್ರೊ. ಪಟ್ನಾಯಕ್.



ಕಾಂಗ್ರೆಸಿನ 'ನ್ಯಾಯ' ಯೋಜನೆ ಕುರಿತಂತೆ ನನ್ನ ನಿಲುವು ಒಂದು ಉಪಕಾರ ಬುದ್ಧಿಯ ಚಕ್ರವರ್ತಿಯ ಬಗ್ಗೆ ನನ್ನ ನಿಲುವಿನಂತೆ ಇದೆ. ಒಬ್ಬ ಉಪಕಾರೀ ಚಕ್ರವರ್ತಿ ದಮನಕಾರೀ ಚಕ್ರವರ್ತಿಗಿಮತ ಖಂಡಿತಾ ಒಳ್ಳೆಯವನೇ. ಆದರೆ ಒಂದು ಗಣತಂತ್ರಕ್ಕೆ ಹೋಲಿಸಿದರೆ, ಯಾವುದೇ ರಾಜಪ್ರಭುತ್ವ ಅಸಂಗತ. ಅದೇ ರೀತಿಯಲ್ಲಿ ಪ್ರಸಕ್ತ ನವ–ಉದಾರವಾದಿ ವ್ಯವಸ್ಥೆಗೆ ಹೋಲಿಸಿದರೆ, ಬಡವರಿಗೆ ಯಾವುದೇ ಹಣ ವರ್ಗಾವಣೆ ಮಾಡುವ ಯೋಜನೆ ಸ್ವಾಗತಾರ್ಹವೇ. ಆದರೆ ಈ 'ನ್ಯಾಯ' ಎಂಬುದು ಸರಕಾರ ಕೊಡುವ ಉದಾರ ದಾನವಷ್ಟೇ, ಅತಿ ಕೆಳಗಿನ 20% ಕ್ಕೆ ತೋರುವ ಔದಾರ್ಯ ಮಾತ್ರ, ಘನತೆಯ ಬದುಕಿನ ಒಂದು ಸಾರ್ವತ್ರಿಕ ಹಕ್ಕು ಇದರಿಂದ ಸ್ಥಾಪಿತಗೊಳ್ಳುವುದಿಲ್ಲ. ನನ್ನ ಮಟ್ಟಿಗೆ, ಸಾರ್ವತ್ರಿಕ ಹಕ್ಕುಗಳಿಗೆ ಹೋಲಿಸಿದರೆ, ಒಂದು ವಿಭಾಗವನ್ನು ಗುರಿಯಿಟ್ಟುಕೊಂಡು ಮಾಡುವ ವರ್ಗಾವಣೆ ಒಪ್ಪತಕ್ಕಂತದ್ದಲ್ಲ.

ಸಮಾಜದಲ್ಲಿ ಬಡತನ ಮತ್ತು ನಿರುದ್ಯೋಗ ಉಂಟಾಗುವುದು ನಾವು ಯಾವ ಸಾಮಾಜಿಕ ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆಯೋ ಅದರಿಂದಾಗಿಯೇ ಹೊರತು, ಬಡವರ ಅಥವ ನಿರುದ್ಯೋಗಿಗಳ ಯಾವುದೇ ತಪ್ಪಿನಿಂದಲ್ಲ. ಆದ್ದರಿಂದ ಬಡತನ ಮತ್ತು ನಿರುದ್ಯೋಗವನ್ನು ನಿವಾರಿಸುವುದು ಸಮಾಜದ ಹೊಣೆಗಾರಿಕೆ. ನಮ್ಮ ಸಾಮಾಜಿಕ ಏರ್ಪಾಡು ಬಡತನ ಮತ್ತು ನಿರುದ್ಯೋಗ ಇಲ್ಲದಂತೆ ಮಾಡುವಂತದ್ದಾಗಿರಬೇಕು.

ಆದ್ದರಿಂದ, ಒಂದು ನಿರ್ದಿಷ್ಟ ಸಾಮಾಜಿಕ ಏರ್ಪಾಡು ಹೇರಿರುವ ಹಣಕಾಸು ಅಥವ ಬೇರೆ ಯಾವುದೇ ನಿರ್ಬಂಧಗಳೊಳಗೆ ಜನಗಳಿಗೆ "ಅವಕಾಶ ಮಾಡಿಕೊಡುವ'(ಇದರಿಂದಾಗಿ ಫಲಾನುಭವಿಗಳ ಸಂಖ್ಯೆ ಮತ್ತು ಮೊತ್ತಗಳನ್ನೂ 'ಸೂಕ್ತ'ವಾಗಿ ಕಡಿಮೆ ಮಟ್ಟದಲ್ಲಿ ಇಡಬೇಕಾಗುತ್ತದೆ) ಬದಲು, ಸಾಮಾಜಿಕ ಏರ್ಪಾಡುಗಳನ್ನೇ ಪ್ರತಿಯೊಬ್ಬರಿಗೂ ಒಂದು ಘನತೆಯ ಬದುಕಿನ ಹಕ್ಕು ಲಭ್ಯವಾಗುವಂತೆ ಬದಲಿಸಬೇಕು.

'ನ್ಯಾಯ' ಎಂಬುದನ್ನು ಪರಿಕಲ್ಪಿಸಿರುವುದೇ ಒಂದು ಔದಾರ್ಯದ ಯೋಜನೆಯಾಗಿಯೇ ಹೊರತು, ಪ್ರಜಾಪ್ರಭುತ್ವ ವ್ಯವಸ್ಥೆಯೊಂದನ್ನು ಸಾಕಾರಗೊಳಿಸುವ ಸಾಧನವಾಗಿ ಅಲ್ಲ. ಅದು "ಮಾನವೀಯ ಮುಖದ ನವ–ಉದರವಾದ"ವನ್ನು ನಿರ್ಮಿಸಬಯಸುತ್ತದೆ. ಆದ್ದರಿಂದಲೇ ಅದು ಸದಾ, ಸಂದರ್ಭಾನುಸಾರ, ತಿದ್ದುಪಡಿಗೆ, ಮುಂದೂಡಿಕೆಗೆ, ಸ್ಥಗಿತಗೊಳಿಸುವುದಕ್ಕೆ, ಅಥವ ಅದರ ವ್ಯಾಪ್ತಿಯನ್ನು ಕಡಿತಗೊಳಿಸುವುದಕ್ಕೆ ಈಡಾಗಬೇಕಾಗುತ್ತದೆ.

ಇದರ ಫಲಾನುಭವಿಗಳನ್ನು ಗುರುತಿಸುವುದು ಹೇಗೆ, ಅದಕ್ಕೆ ಸಂಪನ್ಮೂಲಗಳನ್ನು ಎತ್ತುವುದು ಹೇಗೆ, ಬಡವರ ನಡುವೆಯೂ ಸಮತ್ವವನ್ನು ಹೇಗೆ ಖಾತರಿಗೊಳಿಸುವುದು ಮುಂತಾದ ವಿವರಗಳು ಲಭ್ಯವಿಲ್ಲವೆಂಬುದೇ, ಅವನ್ನು ಹೇಗೆ ಬೇಕಾದರೂ "ಮಣಿಸಬಹುದು" ಎಂಬುದರ ಎಂದು ಅಶುಭ ಲಕ್ಷಣವಾಗಿದೆ.

ನನ್ನ ಆತಂಕ ನಿರ್ದಿಷ್ಟವಾಗಿ ಎರಡು ಕಾರಣಗಳಿಗಾಗಿ. ನವ–ಉದಾರವಾದವನ್ನು ನಮಗೆ ಬೇಕಾದಂತೆ 'ಮಣಿಸಲು' ಸಾಧ್ಯವಿಲ್ಲ, ಒಂದು ಧುವದಲ್ಲಿ ಬಡತನವನ್ನು ಮತ್ತು ಇನ್ನೊಂದು ಧ್ರುವದಲ್ಲಿ ಸಂಪತ್ತನ್ನು ಸೃಷ್ಟಿಸುವ ಅದರ ಸ್ವಯಂಪ್ರೇರಿತ ಪ್ರವೃತ್ತಿಯನ್ನು ತಪ್ಪಿಸಲು ಸಾಧ್ಯವಿಲ್ಲ. ಆದ್ದರಿಂದ "ಮಾನವೀಯ ಮುಖದ ನವ–ಉದಾರವಾದ" ಒಂದು ಪದಗಳಲ್ಲಿನ ವೈರುಧ್ಯವೇ ಆಗಿದೆ, ಹೆಚ್ಚೆಂದರ ಇದೊಂದು ಕ್ಷಣಿಕ ಪ್ರಯತ್ನವಾಗಬಹುದಷ್ಟೇ. ಎರಡನೆಯ ಆತಂಕವೆಂದರೆ, ಭಾರತದ ಮೇಲ್ವರ್ಗಗಳ ಬಹಳಷ್ಟು ವಿಭಾಗಗಳಲ್ಲಿ ಬಡವರ ದುಸ್ಥಿತಿಯ ಬಗ್ಗೆ ಇರುವ ಸಂವೇದನಾಶೂನ್ಯತೆ.


ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಸಂಸತ್ತು ಸೃಷ್ಟಿಸಿದ ಒಂದು ಆರ್ಥಿಕ ಹಕ್ಕು ಆಗಿದ್ದರೂ ಕೂಡ, ಅದನ್ನು ಕುಗ್ಗಿಸಲಾಗಿದೆ. ಈ 'ನ್ಯಾಯ' ಯೋಜನೆ ಒಂದು ಹಕ್ಕನ್ನು ಕೂಡ ಸೃಷ್ಟಿಸುವುದಿಲ್ಲವಾದ್ದರಿಂದ ಅದು ಕುಗ್ಗದಿರುವ ಸಾಧ್ಯತೆ ಇಲ್ಲವೇ ಇಲ್ಲ ಎನ್ನಬಹುದು. ಆದರೂ ಒಂದು ಉಪಕಾರಿ ಚಕ್ರವರ್ತಿಯಂತೆ, ಅದು ಸ್ವಾಗತಾರ್ಹ.

ಉದ್ಯೋಗ ನಿರ್ಮಾಣದ ಬದಲು ಎರಡು ವರ್ಷಗಳಲ್ಲಿ 50 ಲಕ್ಷ ಉದ್ಯೋಗ ನಷ್ಟ

ಉದ್ಯೋಗ–ನಿರುದ್ಯೋಗ ಕುರಿತಂತೆ ಮತ್ತೊಂದು ವರದಿ ಪ್ರಕಟವಾಗಿದೆ. ಅದು ಈ ಹಿಂದೆ ಮೋದಿ ಸರಕಾರ ಬಚ್ಚಿಡಲು ಪ್ರಯತ್ನಿಸಿದ್ದ ನಿರುದ್ಯೋಗದ ಚಿತ್ರವನ್ನು ಮತ್ತೊಮ್ಮೆ ಬಯಲು ಮಾಡಿದೆ. ಸೆಂಟರ್ ಫಾರ್ ಸಸ್ಟೆನೇಬಲ್ ಎಂಪ್ಲಾಯ್‌ಮೆಂಟ್(ಸಿಎಸ್ಇ–ಸುಸ್ಥಿರ ಉದ್ಯೋಗ ಕೇಂದ್ರ) ಪ್ರಕಾರ 2016ರ ನಂತರ, ಅಂದರೆ ನೋಟುರದ್ಧತಿಯ ನಂತರ 50 ಲಕ್ಷ ಭಾರತೀಯ ಪುರುಷರು ಉದ್ಯೋಗ ಕಳಕೊಂಡಿದ್ದಾರೆ. ಮಾಹಿತಿ ಮಿತಿಗಳಿಂದಾಗಿ ಉದ್ಯೋಗ ಕಳಕೊಂಡಿರುವ ಭಾರತೀಯ ಮಹಿಳೆಯರ ಸಂಖ್ಯೆಯನ್ನು ಅಂದಾಜು ಮಾಡಲಾಗಿಲ್ಲ. ಅಂದರೆ ನಿಜವಾದ ಉದ್ಯೋಗನಷ್ಟದ ಪ್ರಮಾಣ ಇದಕ್ಕಿಂತ ಬಹಳ ಹೆಚ್ಚಿದೆ ಎಂದು ಖಂಡಿತವಾಗಿಯೂ ಊಹಿಸಬಹುದು.

ಮೋದಿ ಜಂಬೋ ಜೆಟ್ ಬಿಕ್ಕಟ್ಟು

ಸಜಿತ್ ಕುಮಾರ್,
ಡೆಕ್ಕನ್ ಹೆರಾಲ್ಡ್





ಮಂಜುಲ್, ಫಸ್ಟ್‌ಪೋಸ್ಟ್

'ರಾಜಕೀಯವನ್ನು ಸ್ವಚ್ಛ'ಗೊಳಿಸುವ ಈ ಪರಿ

ಮಧ್ಯಪ್ರದೇಶದ ಭೋಪಾಲ್ ಲೋಕಸಭಾ ಕ್ಷೇತ್ರದಿಂದ ಅಲ್ಲಿನ ಮಾಜಿ ಮುಖ್ಯಮಂತ್ರಿಗಳಾದ ಶಿವರಾಜ್ ಸಿಂಗ್ ಚೌಹಾಣ್ ಮತ್ತು ಉಮಾಭಾರತಿ ಸ್ಪರ್ಧಿಸಲು ನಿರಾಕರಿಸಿದ್ದರಿಂದ ಈಗ, ಆರು ಮಂದಿಯನ್ನು ಬಲಿ ತೆಗೆದುಕೊಂಡು 100ಕ್ಕೂ ಹೆಚ್ಚು ಜನಗಳನ್ನು ಗಾಯಗೊಳಿಸಿದ ಮಾಲೆಗಾಂವ್ ಸ್ಫೋಟದ ಪ್ರಮುಖ ಆರೋಪಿ ಸಾಧ್ವಿ ಪ್ರಜ್ಞಾಸಿಂಗ್ ಠಾಕುರ್ ಬಿಜೆಪಿ ಅಭ್ಯರ್ಥಿಯಾಗಿರುವುದು ದೊಡ್ಡ ಸುದ್ದಿಯಾಗಿದೆ. ಮೋದಿ ಸರಕಾರ ಬಂದ ಮೇಲೆ ಎನ್ಐಎ (ರಾಷ್ಟ್ರೀಯ ತನಿಖಾ ಏಜೆನ್ಸಿ) ಇತರ ಹಿಂದುತ್ವ ಭಯೋತ್ಪಾದಕ ಕೇಸುಗಳಂತೆ ಇದನ್ನೂ ಮುಚ್ಚಿ ಹಾಕುವ ಪ್ರಯತ್ನದಲ್ಲಿ ಆಕೆಯ ವಿರುದ್ಧ ಪುರಾವೆಗಳಿಲ್ಲ ಎಂದು ಹೇಳಿದರೂ ಎನ್ಐಎ ಕೋರ್ಟ್ ಬಿಡುಗಡೆ ಮಾಡಬೇಕೆಂಬ ಆಕೆಯ ಕೋರಿಕೆಯನ್ನು ಮನ್ನಿಸದೆ ಎಲ್ಲ ಆರೋಪಿಗಳ ವಿಚಾರಣೆ ನಡೆಸಬೇಕು ಎಂದು ಹೇಳಿತು. ನಂತರ ಆರೋಗ್ಯ ಸರಿಯಿಲ್ಲ, ನಡೆದಾಡಲಾಗುವುದಿಲ್ಲ ಎಂಬ ಕಾರಣ ಕೊಟ್ಟು ಮುಂಬೈ ಹೈಕೋರ್ಟಿನಿಂದ ಆಕೆಗೆ ಜಾಮೀನು ಸಿಕ್ಕಿದೆ.

ಈ ಸ್ಫೋಟಕ್ಕೆ ಬಲಿಯಾದ ಒಬ್ಬ ವ್ಯಕ್ತಿಯ ತಂದೆ ಆಕೆ ಸ್ಪರ್ಧಿಸದಂತೆ ನಿಷೇಧಿಸಬೇಕು ಎಂದು ಎನ್ಐಎ ಕೋರ್ಟಿಗೆ ಅರ್ಜಿ ಸಲ್ಲಿಸಿದ್ದಾರೆ.


ಈಗ ಮತದಾರರ ವಿಭಜನೆ!

ಮುಸ್ಲಿಮರು ಮತ ನೀಡದಿದ್ದರೆ ತನ್ನಿಂದ ನೆರವಿನ ನಿರೀಕ್ಷೆ ಇಟ್ಟುಕೊಳ್ಳುವಂತಿಲ್ಲ ಎಂದು ಹೇಳಿ ವಿವಾದ ಸೃಷ್ಟಿಸಿರುವ ಕೇಂದ್ರ ಮಂತ್ರಿ ಮನೇಕಾ ಗಾಂಧಿ ತನ್ನಿಂದ ಕೆಲಸದ ಆದ್ಯತೆ ಒಂದು ಹಳ್ಳಿ ಎಷ್ಟು ಮತ ನೀಡಿದೆ ಎಂಬುದರ ಮೇಲೆ ಅವಲಂಬಿಸುತ್ತದೆ. 80%ಕ್ಕಿಂತ ಹೆಚ್ಚು ಮತನೀಡಿದರೆ ಮೊದಲ ವಿಧ, 60% ಮತ ನೀಡಿದವರು ಎರಡನೇ ವಿಧ ಮತ್ತು 50% ಅಥವ ಕಡಿಮೆ ನೀಡಿದವರು ಕೊನೆಯಲ್ಲಿ ಎಂದೂ ಹೇಳಿರುವುದಾಗಿ ವರದಿಯಾಗಿದೆ.



ವಾಸು, ದಿ ಹಿಂದು

ಈ ಜಗತ್ತನ್ನು ಯಾರೋ ಸೃಷ್ಟಿಸಿ ನಡೆಸುತ್ತಿರುವಂತೆ... ಪುಟ 16 ರಿಂದ



ಚಳಿಗಾಲ. ಬೆಳೆದ ಬೆಳೆಯನ್ನು ಕೊಯ್ದು ಕಾಳು ಸಂಗ್ರಹಿಸಿಕೊಳ್ಳುವ ಕಾಲ. ಬೇಸಿಗೆ ಕಾಲ ಮನುಷ್ಯನಿಗೆ ಬಿಡುವಿನ ಕಾಲ. ಮನರಂಜನೆಯ ಕಾಲ. ಎಂಬ ಭಾವ ಮನದಲ್ಲಿ ಮೂಡುತ್ತದೆ.

ಈ ಮೇಲಿನ ಎಲ್ಲವೂ ಸೃಷ್ಟಿವಾದ. ಅಂದರೆ ಈ ಜಗತ್ತನ್ನು ಸೃಷ್ಟಿಸಿ ನಡೆಸುವ ಯಾವುದೋ ಒಂದು ಜಗನ್ನಿಯಾಮಕ ಶಕ್ತಿ ಇದೆ ಎಂದು ಪ್ರತಿಪಾದಿಸುವ ಚಿಂತನೆ. ಈಗ ಇವೇ ವಿಷಯಗಳನ್ನು ಒಂದು ಭಿನ್ನ ದೃಷ್ಟಿಕೋನದಿಂದ ನೋಡುವ. ಆಗ ಜಗತ್ತು ಹೇಗೆ ಕಾಣುತ್ತದೆ ಎಂದು ಅರಿಯುವ.

'ಸೃಷ್ಟಿ'ಯಲ್ಲ 'ವಿಕಾಸ'

ಈ ಜಗತ್ತಿನ ಗಿಡ ಮರ, ಪ್ರಾಣಿ ಪಕ್ಷಿ, ಹೂವು ಹಣ್ಣು ಯಾವುವೂ ಸಹ ದಿಢೀರನೆ ಯಾರೋ ಸೃಷ್ಟಿಸಿದ್ದಲ್ಲ. ಪ್ರಕೃತಿಯಲ್ಲಿ ಇವೆಲ್ಲವೂ ತಮ್ಮದೇ ನಿಯಮಾನುಸಾರ ಕೋಟ್ಯಾಂತರ ವರ್ಷಗಳಲ್ಲಿ ವಿಕಾಸವಾಗುತ್ತಾ ಬಂದಿರುವುದಕ್ಕೆ ಸಾಕ್ಷ್ಯಗಳಿವೆ. ಮೊತ್ತ ಮೊದಲಿಗೆ ಎಳನೀರನ್ನೇ ತೆಗೆದುಕೊಳ್ಳೋಣ. ಹಣ್ಣುಗಳ ಕುರಿತು ಸಹ ಇದೇ ಸಂದರ್ಭದಲ್ಲಿ ಅರ್ಥಮಾಡಿಕೊಳ್ಳಬಹುದು.

ಹಣ್ಣುಗಳು,ಕಾಯಿಗಳು,ಜಗನ್ನಿಯಾಮಕ ಶಕ್ತಿಯು ಪ್ರಾಣಿಪಕ್ಷಿಗಳಿಗಾಗಿ ಸೃಷ್ಟಿಸಿರುವುದಲ್ಲ. ಏಕೆಂದರೆ ಜಗತ್ತಿನಲ್ಲಿ ಒಟ್ಟು 4 ಲಕ್ಷ ಜಾತಿಯ ಸಸ್ಯಗಳಿವೆ. ಅವುಗಳಲ್ಲಿ ಲಕ್ಷಾಂತರ ಜಾತಿಯ ಸಸ್ಯಗಳು ಒಂದಲ್ಲ ಒಂದು ಬಗೆಯ ಹಣ್ಣು, ಕಾಯಿಗಳನ್ನು ಬಿಡುತ್ತವೆ. ಆದರೆ ಮನುಷ್ಯ ತಿನ್ನಲು ಸಾಧ್ಯವಿರುವುದು ಕೇವಲ 1,000 ರಿಂದ 2,000 ಜಾತಿಯ ಹಣ್ಣು, ಕಾಯಿ, ತರಕಾರಿಗಳನ್ನು ಮಾತ್ರ. ಪ್ರಾಣಿ, ಪಕ್ಷಿಗಳಿಗೆ ನೀರು ಮತ್ತು ಆಹಾರವಾಗಬಹುದಾದಂತಹ ರೂಪದ ಫಲವನ್ನು ಬಿಡುವುದು ಕೆಲವೇ ಗಿಡಮರಗಳು. ಅದರಲ್ಲಿ ಎಳನೀರನ್ನು ಕೊಡುವ ತೆಂಗಿನ ಮರ, ಮಾವಿನ ಮರಗಳೂ ಕೆಲವು. ಉಳಿದ ಲಕ್ಷಾಂತರ ಗಿಡ ಮರಗಳು ಕಾಯಿ, ಹಣ್ಣುಗಳನ್ನು ಬಿಟ್ಟರೂ ಅವನ್ನು ಮನುಷ್ಯ ತಿನ್ನಲು ಸಾಧ್ಯವಿಲ್ಲ. ಪ್ರಾಣಿ ಪಕ್ಷಿಗಳೂ ತಿನ್ನಲು ಸಾಧ್ಯವಿಲ್ಲ. ಮತ್ತು ಇನ್ನೆಷ್ಟೋ ಗಿಡಮರಗಳ ಕಾಯಿಗಳು ಪ್ರಾಣಿ–ಪಕ್ಷಿಗಳಿಗೆ ವಿಷಕಾರಿಯಾಗಿರುವುದೂ ಸಹ ಇದೆ. ಹಾಗೆಯೆ ಕೆಲವು ಔಷಧೀಯ ಗುಣ ಉಳ್ಳವುಗಳೂ ಆಗಿವೆ. ಅಂದರೆ ಉತ್ತರ ಸ್ಪಷ್ಟ. ಜಗನ್ನಿಯಾಮಕ ಶಕ್ತಿ ಪ್ರಾಣಿ–ಪಕ್ಷಿಗಳಿಗೆ ಆಹಾರವಾಗಿ ಹಣ್ಣುಕಾಯಿಗಳನ್ನು ಸೃಷ್ಟಿ ಮಾಡಿಲ್ಲ. ಎಳನೀರು, ತೆಂಗಿನ ಕಾಯಿ, ಬಾಳೇಹಣ್ಣು, ಮಾವು, ಸಪೋಟ, ಸೀತಾಫಲ ಎಲ್ಲವೂ ಆಕಸ್ಮಿಕ ಸೃಷ್ಟಿಗಳಷ್ಟೆ. ಎಳನೀರು, ಹಣ್ಣುಗಳು ಉದ್ದೇಶಪೂರ್ವಕ ಸೃಷ್ಟಿ ಎನ್ನುವುವವರು, ಪ್ರಾಣಿ ಪಕ್ಷಿಗಳಿಗೆ ಆಹಾರ ನೀಡದ ಸುಮಾರು 3.98 ಲಕ್ಷ ಜಾತಿಯ ಗಿಡಮರಗಳ ಫಲಗಳು ಯಾರಿಗಾಗಿ ಸೃಷ್ಟಿಯಾಗಿವೆ ಎಂಬ ಪ್ರಶ್ನೆಗೆ ಉತ್ತರ ಕೊಡಬೇಕಾಗುತ್ತದೆ.

ಬಾಳೆಹಣ್ಣಿನ 'ಸೃಷ್ಟಿ'

ಬಾಳೆಹಣ್ಣಿನಲ್ಲಿ 1,600 ಜಾತಿಗಳನ್ನು ನಾವು ಈಗ ನೋಡುತ್ತಿದ್ದೇವೆ. ಇವುಗಳಲ್ಲಿ ಮನುಷ್ಯ ತನ್ನ ಉಪಾಯಗಳಿಂದ ಜಾಣ್ಮೆ, ಅನುಭವಗಳಿಂದ ಸೃಷ್ಟಿಸಿದ ಜಾತಿಗಳೂ ಇವೆ.

ಕೇವಲ ಸು. 3,000 ವರ್ಷಗಳ ಹಿಂದೆ ಬಾಳೇಹಣ್ಣು ಈಗ ಇರುವಂತೆ ಬೀಜ ಇಲ್ಲದ ಸುಲಲಿತವಾಗಿ ತಿನ್ನುವ ಸರಳ ಹಣ್ಣಾಗಿರಲಿಲ್ಲ. ಬಾಳೆಹಣ್ಣಿನ ಮೈಯೊಳಗೆ ಈಗ ಸೀತಾಫಲ ಹಣ್ಣಿನಲ್ಲಿ ಇರುವಂತೆ ಅಥವಾ ಅದಕ್ಕಿಂತಲೂ ಹೆಚ್ಚಾಗಿ ಮೈತುಂಬಾ ಕಾಳುಮೆಣಸಿನಂತಹ ಬೀಜಗಳಿದ್ದವು. ಈ ಜಾತಿಯ ಕಾಡುಬಾಳೆ ತಳಿಯ ಗಿಡಗಳು ಅವುಗಳ ಹಣ್ಣುಗಳು ಈಗಲೂ ಇವೆ. ಮನುಷ್ಯ ಕೃಷಿಯನ್ನು ಕಲಿತು ಗಿಡಗಳನ್ನು ಬೆಳೆಸಲು ಅಂದರೆ ಕೃಷಿ ಮಾಡುವುದನ್ನು ಕಲಿತ ನಂತರ ಬಾಳೆ ತಳಿಯಲ್ಲಿ ಆಕಸ್ಮಿಕವಾಗಿ ಕಾಣಿಸಿಕೊಂಡ ಬೀಜರಹಿತ ಬಾಳೆಹಣ್ಣಿನ ಗುಣ ಅವನಿಗೆ ಇಷ್ಟವಾಗಿದೆ. ಪ್ರಯೋಜನಕರವಾಗಿ ಕಂಡಿದೆ. ಹೀಗಾಗಿ ಇದೇ ತಳಿಯನ್ನು ಹೆಚ್ಚು ಹೆಚ್ಚು ಪಳಗಿಸುತ್ತಾ



ಬಂದಿದ್ದಾನೆ. ಬಾಳೆಯ ಬುಡದಲ್ಲಿ ಹೊಸ ಚಿಗುರು ಟಿಸಿಲೊಡೆದು ಹೊಸ ಗಿಡ ಸೃಷ್ಟಿ ಆಗುವುದರಿಂದ ಬಾಳೆ ಹಣ್ಣಿನಲ್ಲಿ ಬೀಜ ಇಲ್ಲದಿದ್ದರೂ ಬಾಳೆ ಸಂತತಿ ಮುಂದುವರಿಯುತ್ತದೆ. ಆದ್ದರಿಂದ ತೊಂದರೆ ಇಲ್ಲ.

ಮತ್ತೆ ಗಿಡ ಬೆಳೆಯುವ ಸ್ಥಳದ ಬದಲಾವಣೆ, ಪರಿಸರದಲ್ಲಿನ ಬದಲಾವಣೆ, ಕಸಿ ಇತ್ಯಾದಿಗಳ ಕಾರಣದಿಂದ ನಾನಾ ಬಗೆಯ ತಳಿಗಳು ರೂಪುಗೊಳ್ಳುವಲ್ಲಿ ಪ್ರಕೃತಿಯ ಕೊಡುಗೆಯ ಜೊತೆಗೆ ಮನುಷ್ಯನ ಶ್ರಮ ಮತ್ತು ಜಾಣ್ಮೆಗಳು ಸಹ ಸೇರಿವೆ.

ಸೂರ್ಯ ಚಂದ್ರ ನಕ್ಷತ್ರಗಳ ಹುಟ್ಟು

ನಾವು ನೋಡುತ್ತಿರುವ ಈ ಜಗತ್ತಿನ ಹುಟ್ಟುಮೂಲಗಳ ಬಗೆಗೆ ವಿಜ್ಞಾನ ತನ್ನ ಸಂಶೋಧನೆಯನ್ನು ಮುಂದುವರೆಸಿದೆ. ಒಂದು



ಸಿದ್ಧಾಂತದ ಪ್ರಕಾರ ಒಂದಾನೊಂದು ಕಾಲದಲ್ಲಿ ಎಲ್ಲೆಲ್ಲೂ.. ಎಲ್ಲೆಲ್ಲೂ ಅಂದರೆ ಆಕಾಶದಲ್ಲಿ ಕಾಣುವ ನಕ್ಷತ್ರರಾಶಿಗಳಿರುವ ಅಂದರೆ ಕ್ಷೀರಪಥ ಇರುವ ಬ್ರಹ್ಮಾಂಡದಲ್ಲೆಲ್ಲೂ ಅಗಾಧ ಧೂಳು ಮತ್ತು ಅನಿಲ ಕಣಗಳ ರಾಶಿಯೇ ಹರಡಿಕೊಂಡಿತ್ತಂತೆ. ಕ್ರಮೇಣ ವಸ್ತುಕಣಗಳು ಅಲ್ಲಲ್ಲಿ ಒಗ್ಗೂಡತೊಡಗಿದವಂತೆ. ಹೀಗೆ ಕಣಗಳು ಸೇರಿಕೊಂಡ ಜಾಗದಲ್ಲಿ ಅನಿಲರಾಶಿಯಾಯಿತು. ಅಲ್ಲಿ ಒಗ್ಗೂಡಿದ್ದ ಧೂಳಿನ ಕಣದ ಮುದ್ದೆಗಳು ದೊಡ್ಡದಾಗುತ್ತ, ದೊಡ್ಡದಾಗುತ್ತಾ ಭಾರವಾಗಿ ಹಿಡಿದಿಟ್ಟಿದ್ದ ಅನಿಲದ ಉಂಡೆಯಿಂದ ಸಿಡಿದು ದೂರವಾದವು. ನಂತರ ಮುದ್ದೆಗಳೆಲ್ಲ ಸೇರಿ ಅನಿಲಗೋಳವನ್ನು ನಡುವೆ ಸೇರಿಸಿಕೊಂಡು ಅದರ ಸುತ್ತಲು ಎಲ್ಲ ದೂಳಿನ ಮುದ್ದೆಗಳು ಸುತ್ತಲಾರಂಭಿಸಿದವು. ಈ ತಾಕಲಾಟದಲ್ಲಿ ಅನಿಲಗೋಳ ಬಿಸಿಯಾಗತೊಡಗಿತು. ಈ ಬಿಸಿ ಆ ಧೂಳಿನ ಮುದ್ದೆಗಳನ್ನು ಮತ್ತಷ್ಟು ಮುಂದಕ್ಕೆ ತಳ್ಳಿತು ಎನ್ನುತ್ತಾರೆ ಈ ಸಿದ್ಧಾಂತದ ವಿಜ್ಞಾನಿಗಳು.


ಅನಿಲಗೋಳ ಬಿಸಿಯಾಗುತ್ತಾ ಆಗುತ್ತಾ ಬೆಂಕಿಯ ಗೋಳವಾಯಿತಂತೆ. 'ಅವ್ವನ ಸೀರೆ ಮಡಿಸೋಕಾಗಲ್ಲ, ಅಪ್ಪನ ದುಡ್ಡು ಎಣಿಸೋಕಾಗಲ್ಲ' ಎನ್ನಲಾಗುವ ಮಹಾ ರಾಶಿರಾಶಿ ನಕ್ಷತ್ರಗಳು ಎಂಬುದು ಸೃಷ್ಟಿಯಾದದ್ದು ಹೀಗೆ ಹೇಳಲಾಗುತ್ತದೆ. ಇದಕ್ಕೆ ಮಹಾಸ್ಫೋಟ ಸಿದ್ಧಾಂತ(ಬಿಗ್ ಬ್ಯಾಂಗ್ ಥಿಯರಿ) ಅಂತ ಹೆಸರು. ಈ ನಕ್ಷತ್ರಗಳ ಮಹಾರಾಶಿಯಲ್ಲಿ ಸುಮಾರು 200 ರಿಂದ 400 ಶತಕೋಟಿ ನಕ್ಷತ್ರಗಳು ಇರಬಹುದೆಂದು ವಿಜ್ಞಾನಿಗಳು ಅಂದಾಜು ಮಾಡಿದ್ದಾರೆ. ಈ ನಕ್ಷತ್ರಗಳಿಗೆ ಸುಮಾರು 100 ಕೋಟಿ ಗ್ರಹಗಳಿರಬಹುದು ಎಂದು ಅಂದಾಜು ಮಾಡಲಾಗಿದೆ. ಈ ದೈತ್ಯ ಕ್ಷೀರಪಥದ ನಕ್ಷತ್ರ ರಾಶಿಯಲ್ಲಿ ಸೂರ್ಯ ಸಹ ಒಂದು ಉರಿಯುತ್ತಿರುವ ಅನಿಲ ಗೋಳ, ಅಂದರೆ ನಕ್ಷತ್ರ. ಅದರ ಸುತ್ತ ಸುತ್ತುವ ಗ್ರಹಗಳು 8. ಅದರಲ್ಲಿ ಒಂದು ಭೂಮಿ. ಭೂಮಿಯ ಸುತ್ತ ಸುತ್ತುವ ಒಂದು ಉಪಗ್ರಹ ಚಂದ್ರ,

ಹಗಲು ರಾತ್ರಿಗಳು, ಮಳೆಗಾಲ, ಚಳಿಗಾಲ ಬೇಸಿಗೆಗಳೂ ಅಷ್ಟೆ. ಜಗನ್ನಿಯಾಮಕನ ಸೃಷ್ಟಿಯಲ್ಲ. ಸ್ವಂತ ಬೆಳಕಿಲ್ಲದ ಭೂಮಿಯು ಸೂರ್ಯನಿಂದ ಬೆಳಕನ್ನು ಪಡೆಯುತ್ತದೆ. ಭೂಮಿಯು ತನ್ನ ಸುತ್ತಲು ತಾನೇ ಬುಗುರಿಯಂತೆ ಸುತ್ತುತ್ತಿದೆ. ಜೊತೆಗೆ ಅದೇ ಸಮಯದಲ್ಲಿ ಸೂರ್ಯನ ಸುತ್ತಲೂ ಸುತ್ತುತ್ತಿದೆ. ಭೂಮಿಯು ತನ್ನ ಸುತ್ತ ಸುತ್ತುವುದರಿಂದ ಹಗಲು ಮತ್ತು ರಾತ್ರಿಗಳು ಉಂಟಾಗುತ್ತವೆ. ಭೂಮಿಯ ಮೇಲೆ ಸೂರ್ಯನಿಗೆ ಎದುರಾಗಿರುವ ಭಾಗದಲ್ಲಿ ಹಗಲು, ಸೂರ್ಯನಿಗೆ ಮರೆಯಾಗಿರುವ ಭಾಗದಲ್ಲಿ ರಾತ್ರಿ ಇರುತ್ತವೆ. ಭೂಮಿ ತನ್ನ ಸುತ್ತ ಒಂದು ಸುತ್ತ ಬರಲು 24 ಗಂಟೆಗಳ ಅವಧಿ ಬೇಕು.

ಅದೇ ರೀತಿ ಭೂಮಿಯು ಸೂರ್ಯನ ಸುತ್ತ ಒಂದು ಸುತ್ತು ಬರಲು 365 ದಿನಗಳು ಬೇಕು. ಭೂಮಿಯು ತನ್ನ ಕಕ್ಷೆಯಲ್ಲಿ ನೇರವಾಗಿ ತಿರುಗುವುದಿಲ್ಲ. 22.5 ಡಿಗ್ರಿಗಳಷ್ಟು ವಾಲಿಕೊಂಡು ಸುತ್ತುತ್ತದೆ. ಇದರಿಂದ ಸೂರ್ಯನ ಕಿರಣ ಭೂಮಿಯ ಮೇಲೆ ಎಲ್ಲ ಕಾಲಗಳಲ್ಲೂ ಒಂದೇ ರೀತಿಯಾಗಿ ಬೀಳುವುದಿಲ್ಲ. ಸೂರ್ಯನ ಕಿರಣಗಳು ನೇರವಾಗಿ ಭೂಮಿಯ ಮೇಲೆ ಬೀಳುವ ಭಾಗದಲ್ಲಿ ಬೇಸಿಗೆ ಇರುತ್ತದೆ. ಸೂರ್ಯನ ಕಿರಣಗಳು ಒರೆಯಾಗಿ ಬೀಳುವ ಭಾಗದಲ್ಲಿ ಚಳಿಗಾಲ ಇರುತ್ತದೆ. ಈ ನಡುವೆ ಮಳೆಗಾಲ ಬರುತ್ತದೆ. ಚಂದ್ರ ನಕ್ಷತ್ರಗಳು, ರಾತ್ರಿಯಲ್ಲಿ ಭೂಮಿಗೆ ಬೆಳಕು ನೀಡಲೆಂದು ಸೃಷ್ಟಿಯಾದವುಗಳಲ್ಲ. ಹಗಲು ಹೊತ್ತಿನಲ್ಲಿಯೂ ನಕ್ಷತ್ರಗಳು ಆಕಾಶದಲ್ಲಿ ಹೊಳೆಯುತ್ತಲೇ ಇರುತ್ತವೆ. ಆದರೆ ನಮಗೆ ಅತ್ಯಂತ ಸಮೀಪದ ನಕ್ಷತ್ರವಾದ ಸೂರ್ಯನ ಪ್ರಕಾಶಮಾನವಾದ ಬೆಳಕು ಆಕಾಶದಲ್ಲಿನ ಎಲ್ಲ ನಕ್ಷತ್ರಗಳ ಬೆಳಕನ್ನು ಮರೆಮಾಡುತ್ತದೆ. ಚಂದ್ರನಿಗೆ ಸ್ವಂತ ಬೆಳಕಿಲ್ಲ. ಸೂರ್ಯನ ಬೆಳಕನ್ನು ಚಂದ್ರ ಪ್ರತಿಫಲಿಸುತ್ತಾನೆ. ಹುಣ್ಣಿಮೆ ಅಮಾವಾಸೆಗಳು ಖಗೋಳ ವಿದ್ಯಮಾನಗಳಷ್ಟೆ.

ಮನುಷ್ಯನು ವ್ಯವಸಾಯ ಮಾಡಲಿ ಎಂಬ ಕಾರಣಕ್ಕಾಗಿ ಮಳೆ ಸುರಿಯುವುದಿಲ್ಲ. ಮಳೆಗಾಲದಲ್ಲಿ ಮಳೆ ಸುರಿಯುವಾಗ ಮನುಷ್ಯನು ನೆಲವನ್ನು ಹದಮಾಡಿ ತನಗೆ ಬೇಕಾದ ಬೀಜಗಳನ್ನು ಬಿತ್ತಿ ಬೆಳೆ ಬೆಳೆಯುವುದನ್ನು ಕಲಿತುಕೊಂಡಿದ್ದಾನೆ. ಲಕ್ಷಾಂತರ ವರ್ಷಗಳ ವಿಕಾಸದಲ್ಲಿ ಇಂತಹ ಋತುಮಾನಗಳಿಗೆ ತಕ್ಕಂತೆ ಬೆಳೆಗಳೂ ವಿಕಾಸಗೊಂಡಿವೆ. ಸುಮಾರು 4 ಕೋಟಿ ವರ್ಷಗಳ ಹಿಂದೆ ಭೂಮಿಯ ಒಳ ಒತ್ತಡದಿಂದ ಅಂದರೆ ಭೂಮಿಯ 'ಮೇಲೊಗೆತ'ದಿಂದ ಸುಮಾರು 1,600 ಕಿ.ಮೀ. ಉದ್ದದ ಪಶ್ಚಿಮಘಟ್ಟಗಳ ಪರ್ವತಶ್ರೇಣಿ ಸೃಷ್ಟಿಯಾಗಿದೆಯಂತೆ. ಇಂತಹ ಪ್ರಕ್ರಿಯೆಗಳ ಪ್ರತಿಫಲವಾಗಿ ಪರ್ವತಗಳ ಸೃಷ್ಟಿಯಾಗಿದೆ. ಮೋಡಗಳನ್ನು ತಡೆದು ಮಳೆ ಸುರಿಸಲಿ ಎನ್ನುವ ಕಾರಣಕ್ಕೆ ಪರ್ವತಗಳನ್ನು ಜಗನ್ನಿಯಾಮಕನು ಸೃಷ್ಟಿಸಿರುವುದಲ್ಲ.

ಭೂಮಿಯ ಮೇಲೆ ಸುಮಾರು 350 ಕೋಟಿ ವರ್ಷಗಳ ಹಿಂದೆ, ಸಮುದ್ರದಲ್ಲಿ ಆಕಸ್ಮಿಕವಾಗಿ ಹುಟ್ಟಿಕೊಂಡ ಜೀವವು ನಂತರ ಕೋಟ್ಯಾಂತರ ವರ್ಷಗಳ ಅವಧಿಯಲ್ಲಿ ನಾನಾ ಪ್ರಾಣಿಗಳಾಗಿ ವಿಕಾಸಗೊಳ್ಳುತ್ತಾ ಬರುತ್ತಿದೆ. ಮೊದಲಿಗೆ ಏಕಕೋಶ ಜೀವಿಗಳು, ನಂತರ ಬಹುಕೋಶ ಜೀವಿಗಳು, ಜಲಚರಗಳು, ಉಭಯವಾಸಿಗಳು, ಸರೀಸೃಪಗಳು.. ಮುಂತಾಗಿ. ಸಸ್ಯಗಳೂ ಸಹ ಅಷ್ಟೆ. ಅತಿ ಸೂಕ್ಷ್ಮವಾದ ರೂಪದಿಂದ ಸಂಕೀರ್ಣ ರೂಪಕದ ಕಡೆಗೆ ವಿಕಾಸವಾಗುತ್ತಾ ಬರುತ್ತಿವೆ. ಇಂತಹ ಸುದೀರ್ಘ ವಿಕಾಸದ ಹಾದಿಯಲ್ಲಿ ನಾನಾ ಪ್ರಾಣಿ, ಪಕ್ಷಿಗಳು ಜೀವಜಂತುಗಳು, ಸಸ್ಯಗಳಲ್ಲಿ ಹೂವು, ಕಾಯಿ, ಹಣ್ಣು ಬೀಜಗಳು ವಿಕಾಸಗೊಂಡಿವೆ. ಈ ವಿಕಾಸ, ಬದಲಾವಣೆ ಎಲ್ಲವೂ ಆಕಸ್ಮಿಕ. ಯಾವೂದೂ ಪೂರ್ವ ನಿರ್ಧಾರಿತ ಅಲ್ಲ. ಬದಲಾವಣೆಯೂ ಜೀವಿಯ ಉಳಿವಿಗೆ ಅನುಕೂಲಕರವಾಗಿದ್ದರೆ ಅಂತಹ ಆಕಸ್ಮಿಕ ಬದಲಾವಣೆಗಳು ವಂಶವಾಹಿಗಳ ಮೂಲಕ ಜೀವಿಗಳಲ್ಲಿ ಮುಂದುವರಿಯುತ್ತವೆ. ಇಲ್ಲವೆ ಆ ಜೀವಿ ಅಥವಾ ಸಸ್ಯಗಳು ನಾಶವಾಗುತ್ತವೆ. ಇಂತಹ ಪ್ರಕ್ರಿಯೆಯಲ್ಲಿಯೇ ಹೂವಿನಲ್ಲಿ ಮಕರಂದದ ವ್ಯವಸ್ಥೆ ರೂಪುಗೊಂಡಿದೆ. ದುಂಬಿಗಳು ಜೇನನ್ನು ಹೀರಿ ಬದುಕುವ ಜೀವನ ಕ್ರಮ ರೂಢಿಸಿಕೊಂಡದ್ದರಿಂದ ಸಸ್ಯಗಳ ವಂಶಾಭಿವೃದ್ಧಿಗೂ ಸಹಾಯವಾಗುವುದಿಂದ ಈ ಸಹಕಾರ, ಪರಸ್ಪರ ಅವಲಂಬನೆಯ ಜೀವನ ಕ್ರಮ ಮುಂದುವರೆದುಕೊಂಡು ಬಂದಿದೆ. ಬಣ್ಣ ಬಣ್ಣದ ಚಿಟ್ಟೆಗಳು, ಬಣ್ಣ ಬಣ್ಣದ ಪಕ್ಷಿಗಳು ಸಹ ಹೀಗೆ ವಿಕಾಸವಾಗಿವೆ. ಆಕರ್ಷಕ ಬಣ್ಣದ ಪಕ್ಷಿಗಳು ಪರಸ್ಪರ ಲೈಂಗಿಕವಾಗಿ ಬೇಗ ಆಕರ್ಷಿತವಾಗುತ್ತವೆ. ಇದರಿಂದ ಆ ಪಕ್ಷಿಗಳ ಮುಂದಿನ ಸಂತತಿ ಮತ್ತಷ್ಟು ವರ್ಣಮಯವಾಗುತ್ತದೆ. ಚಿಟ್ಟೆಗಳು ಸಹ ಹೀಗೆಯೆ. ಸಾಕಷ್ಟು ಎತ್ತರ ಇರುವ ತಂದೆ ತಾಯಿಗೆ ಹುಟ್ಟುವ ಮಗು ಮತ್ತೂ ಎತ್ತರ ಬೆಳೆಯುವಂತೆ ಪೀಳಿಗೆಯಿಂದ ಪೀಳಿಗೆಗೆ ಈ ವಿಶೇಷ ಗುಣಲಕ್ಷಣ ಬೆಳೆಯುತ್ತಾ ಹೋಗುತ್ತವೆ. ಇಂತಹದ್ದೇ ನಿಯಮವೇ ಪ್ರಕೃತಿಯಲ್ಲಿ ಎಲ್ಲ ವಿಸ್ಮಯಗಳ ಹಿಂದಿದೆ ಹೊರತು ಪ್ರಕೃತಿಯ ಹಿಂದೆ 'ಜಗನ್ನಿಯಾಮಕ ಶಕ್ತಿ' ಎಂಬುದು ಯಾವುದು ಇರುವುದಕ್ಕೆ ಸಾಕ್ಷ್ಯ ದೊರೆತಿಲ್ಲ. ●



'ಬೆಲ್ಟ್ ಮತ್ತು ರೋಡ್' ಯೋಜನೆಗೆ ಇಟಲಿ ಸೇರ್ಪಡೆ

ಜಗದ ಸುತ್ತ

ನಾಗರಾಜ ನಂಜುಂಡಯ್ಯ



ಚೀನಾವು 150 ದೇಶಗಳೊಂದಿಗೆ ತನ್ನ ಹೊಸ ಅಭಿವೃದ್ಧಿ ಮತ್ತು ಸಂಪರ್ಕ ರೂಪಿಸಲು ಉದ್ದೇಶಿಸಿರುವ ಬೆಲ್ಟ್ ಮತ್ತು ರೋಡ್ ಉಪಕ್ರಮದ (ಬಿ.ಆರ್.ಐ.) ಅಥವಾ ಹೊಸ ಸಿಲ್ಕ್ ರೋಡ್ ಎಂದು ಕರೆಯಲಾಗುವ ಯೋಜನೆಗೆ ಇದೀಗ ಇಟಲಿಯ ಸೇರ್ಪಡೆಯು, ಜಗತ್ತಿನ ದೊಡ್ಡಣ್ಣನೆಂದು ಕೊಂಡಿರುವ ಅಮೆರಿಕಾಕ್ಕೆ ಕಿರಿಕಿರಿ ಉಂಟು ಮಾಡಿದೆ.

ಜಗತ್ತಿನ ಶೇ.58 ರಷ್ಟು ಸಂಪತ್ತನ್ನು ಹೊಂದಿರುವ ಅತೀ ಶ್ರೀಮಂತ ಹಾಗೂ ಆರ್ಥಿಕ ಬಲಾಢ್ಯವಾದ ಅಭಿವೃದ್ದಿ ಹೊಂದಿರುವ ರಾಷ್ಟಗಳ ಕೂಟವಾದ ಜಿ–7 ರಾಷ್ಟ್ರಗಳಲ್ಲಿ ಒಂದಾದ ಇಟಲಿ ಬಿ.ಆರ್.ಐ ಯೋಜನೆಗೆ ಸೇರ್ಪಡೆಯಾಗುತ್ತಿರುವುದು, ಜಿ–7 ನ ಮತ್ತು ಯುರೋಪ್ ಒಕ್ಕೂಟ (ಇ.ಯು.) ದ ಇನ್ನಿತರ ರಾಷ್ಟಗಳ ಮೇಲೆ ಪರಿಣಾಮ ಬೀರಬಹುದು ಅಥವಾ ತೀವ್ರ ಪ್ರತಿಕ್ರಿಯೆಗೆ ಕಾರಣವಾಗಬಹುದು. ಇದು ಮುಂದಿನ ದಿನಗಳಲ್ಲಿ ಇಟಲಿಯ ಮೇಲೆ ಯಾವ ರೀತಿಯ ಪರಿಣಾಮ ಬೀರಬಲ್ಲದು ಎಂದು ಕಾದು ನೋಡಬೇಕಾಗಿದೆ.

ರೋಮ್ ನಲ್ಲಿ ಕ್ಸಿ ಜಿಂಪಿಂಗ್ ಗೆ ಅದ್ದೂರಿ ಸ್ವಾಗತ

ಇಟಲಿಯ ರಾಜಧಾನಿ ಜಗದ ಪ್ರಖ್ಯಾತ ನಗರ ರೋಮ್‌ನಲ್ಲಿ, ಅದರಲ್ಲೂ ಇಟಲಿಯ ಅದ್ಯಕ್ಷರ ಕ್ವಿರಿನಾಲ್ ಅರಮನೆಯಲ್ಲಿ ಚೀನಾ ದೇಶದ ಅದ್ಯಕ್ಷ ಕ್ಸಿ ಜಿಂಪಿಂಗ್ ರವರಿಗೆ ಕುದುರೆ ಸವಾರಿಗಳ ಗೌರವದ ಮೂಲಕ ಸ್ವಾಗತ ಏರ್ಪಡಿಸಲಾಗಿತ್ತು. ಈ ಹಿಂದೆ 2010 ರಲ್ಲಿ ಆಗಿನ ಪೋಪ್ ಬೆನೆಡಿಕ್ಸ್ ಘಿಗಿಬ ರವರಿಗೆ ನೀಡಿದ್ದ ಗೌರವದ ನೆನಪು ಮೂಡಿಸಿದಂತಿತ್ತು ಎಂದು ಇಟಲಿಯ ಅತ್ಯಧಿಕ ಪ್ರಸಾರದ ವೃತ್ತ ಪತ್ರಿಕೆ 'ಕೊರ್ರಿಯೆರೆ ಡೆಲಾ ಸೆರಾ' ಹೇಳಿದೆ.

ಹಾಗೆಯೇ, ಪ್ರಸಿದ್ದ ಇಟಲಿಯ ಗಾಯಕರಾದ 'ಗೈ ಆಂಡ್ರೀಯಾ ಬೊಸೆಲಿಯ' ರಿಂದ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು 'ಅಲ್ಲಿ ದೇವರಿಗೆ ಹಾಡುವ ಧ್ವನಿ'ಯಲ್ಲಿ, ಆಂಡ್ರಿಯಾ ಹಾಡಿದರು ಎಂದು ಈ ಪತ್ರಿಕೆ ವ್ಯಾಖ್ಯಾನಿಸಿದೆ. ಈ ರೀತಿಯಾಗಿ ಇಟಲಿಯ ಅಧ್ಯಕ್ಷರ ಅರಮನೆಯಲ್ಲಿ ಕ್ಸಿ ಜಿಂಪಿಂಗ್ ' ರಿಗೆ ಅದ್ದೂರಿಯ ಸಾಂಪ್ರದಾಯಿಕ ಸ್ವಾಗತ ಕೋರಿದ್ದಾರೆ. ಕ್ಸಿ ಜಿಂಪಿಂಗ್ ರ ಭೇಟಿಯನ್ನು 21 ನೇ ಶತಮಾನದ ವಿಶೇಷವಾದ ಕಾರ್ಯಕ್ರಮವೆಂದು ಬಣ್ಣಿಲಾಗಿದೆ. ಜೊತೆಗೆ ಚೀನಿಯರ ಪ್ರಭಾವದ ಯುಗ ಅಥವಾ ಚೀನಿ ಯುಗದ ಉದಯ, ಪಾಶ್ಚಿಮಾತ್ಯ ನಾಡಿನಲ್ಲಿ ಏಷಿಯಾದ ಹೊಸ ಪುನರುಜ್ಜೀವನ ದ ಸೂಚಕವಾಗಿದೆ ಎಂದು ರಾಜಕೀಯ ವಲಯಗಳು ಅಭಿಪ್ರಾಯ ವ್ಯಕ್ತಪಡಿಸಿವೆ.

"ವೆನ್ ಚೈನಾ ರೂಲ್ಸ್ ದಿ ವರ್ಲ್ಡ್"

ಇಟಲಿಯ ಪ್ರಸಿದ್ಧ ಲೇಖಕ ಮಾರ್ಟೀನ್ ಜಾಕ್ವ್ಯೂಸ್ ರ 'ವೆನ್ ಚೈನಾ ರೂಲ್ಸ್ ದಿ ವರ್ಲ್ಡ್' ಪುಸ್ತಕ ದಲ್ಲಿ ಚೀನಾ ಜಗತ್ತನ್ನು ಆಳುವುದಾದರೆ, ಅದು ಪಾಶ್ಚಿಮಾತ್ಯ ರ ಜಗತ್ತಿನ ಅಂತ್ಯ ಮತ್ತು ಹೊಸ ಜಗತ್ತಿನ ಯುಗದ ಉದಯಕ್ಕೆ ನಾಂದಿ ಎಂದಿರುವುದನ್ನು, ಇಲ್ಲಿನ ಪತ್ರಿಕೆಗಳು ಕ್ಸಿ ಜಿಂಪಿಂಗ್ ರ ಈ ಭೇಟಿಯ ಸಂದರ್ಭಧಲ್ಲಿ ನೆನಪಿಸಿದ್ದಾರೆ. ಮತ್ತೊಮ್ಮೆ ಯುರೋಪಿಯನ್ ರಾಷ್ಟಗಳಲ್ಲಿ ಆರ್ಥಿಕ ಮತ್ತು ರಾಜಕೀಯ ರೂಪಾಂತರಗಳ ಹೊಸ ಸಂಯೋಜನೆಯನ್ನು ಪ್ರಚೋದಿಸುವುದಕ್ಕೆ ಇಟಲಿ ಮುಂದಾಗಿದೆ. ಹಾಗೆಯೇ, ಸ್ವತಃ ಇಟಲಿ ಹೊಸ ಜಾಗತಿಕ ಕ್ರಮದ ಮೇಲುಸ್ತುವಾರಿ ಸ್ಥಾನದಲ್ಲಿ ನಿಲ್ಲುತ್ತದೆ. ಇದರಲ್ಲಿ ಚೀನಾ ದೇಶವು ಪ್ರಧಾನ ಪಾತ್ರ ನಿರ್ವಹಿಸುತ್ತದೆ ಎನ್ನಲಾಗಿದೆ.

ಭವ್ಯ ನಾಗರಿಕತೆಯ ರಾಷ್ಟವಾಗಿರುವ ಇಟಲಿಯು ಪಾಶ್ಚಿಮಾತ್ಯ ಮತ್ತು ಚೀನಾದ ನಡುವಿನ ಸೇತುವೆಯ ಪಾತ್ರವನ್ನು ನಿರ್ವಹಿಸುತ್ತದೆ. ಮಾರ್ಟಿನ್ ಜಾಕ್ವ್ಯೂಸ್ ತಮ್ಮ ಪುಸ್ತಕದಲ್ಲಿ ವ್ಯಾಖ್ಯಾನಿಸಿರುವಂತೆ, ಚೀನಾವು ವಿಶಿಷ್ಟವಾದ ರಾಷ್ಟವಾಗಿದ್ದು ಮತ್ತು ಇದರ ಒಟ್ಟಾರೆಯ ಉದ್ದೇಶ ಪಾಶ್ಚಿಮಾತ್ಯ–ಶೈಲಿಯ ಸಮಾಜದಂತಲ್ಲ, ಅದರ ಬಹುತ್ವ ಸ್ವರೂಪದ ಪ್ರಭಾವವು ಅದರ ಬೆಳೆಯುತ್ತಿರುವ ಆರ್ಥಿಕ ಪ್ರಾಬಲ್ಯ ವನ್ನು ಮೀರಿ ಹೋಗುತ್ತದೆ ಮತ್ತು ಅದರ ರಾಜಕೀಯ ಮತ್ತು ಸಾಂಸ್ಕøತಿಕ ಪ್ರಭಾವ ಮತ್ತು ಅದರ ಅಗತ್ಯಗಳು, ಆದ್ಯತೆಗಳು ಮತ್ತು ಮೌಲ್ಯಗಳು ಪಾಶ್ಚಿಮಾತ್ಯ ರಾಷ್ಟಗಳಿಗಿಂತ ವಿಭಿನ್ನವಾಗಿದೆ ಎನ್ನುತ್ತಾರೆ. ನಿಸ್ಸಂದೇಹವಾಗಿ, ಚೀನಾದ ಬೆಳೆಯುತ್ತಿರುವ ಶಕ್ತಿ ಪಾಶ್ಚಿಮಾತ್ಯ ಜಗತ್ತಿನ ಜಾಗತಿಕ ಪ್ರಾಬಲ್ಯಕ್ಕೆ ಅಂತ್ಯ ಹಾಡಬಲ್ಲ ಸಾಮರ್ಥ್ಯ ಹೊಂದಿದೆ. ಇದು ಪಾಶ್ಚಿಮಾತ್ಯ ರಾಷ್ಟಗಳಲ್ಲಿ ಆತಂಕವನ್ನು ತಂದೊಡ್ಡುತ್ತದೆ ಎಂದು ಜಾಕ್ವ್ಯೂಸ್ ತಮ್ಮ ಪುಸ್ತಕದಲ್ಲಿ ವಾದಿಸಿದ್ದಾರೆ.

ಬೆಲ್ಟ್ ಮತ್ತು ರೋಡ್ ಉಪಕ್ರಮಕ್ಕೆ, ಇಟಲಿಯ ಸೇರ್ಪಡೆಯನ್ನು ಉಗ್ರವಾಗಿ ಟೀಕಿಸುವ ಮೂಲಕ ಯುಎಸ್ ಪ್ರತಿಭಟಿಸಿದೆ. ಆದರೆ, ಈ ಟೀಕೆಯನ್ನು ಇಟಲಿಯು ಲೆಕ್ಕಿಸಿದೆ, ಬಿ ಆರ್ ಐ ಯೋಜನೆಗೆ ಸೇರ್ಪಡೆಯಾಗಿದೆ. ಇದು ಜಿ–7 ರಾಷ್ಟಗಳ ಆತಂಕಕ್ಕೆ ಕಾರಣವಾಗಿದೆ. ಇದು ಚೀನಾಕ್ಕೆ ಒದಗಿದ ಗೆಲುವು ಎಂದು ಪರಿಗಣಿಸಲಾಗಿದೆ. ಹಾಗೆಯೇ, ಚೀನಾದೊಂದಿಗೆ ಒಂದು ಒಡಂಬಡಿಕೆ ಗೆ (ಎಂ.ಒ.ಯು) ಬರಲು ಇಟಲಿ ದೃಢತೆಯಿಂದ ನಿರ್ಣಯಿಸಿ, ಜಿ–7 ಗುಂಪಿನ ಪ್ರತಿರೋಧವನ್ನು ಭೇದಿಸಲು ನಿರ್ಧರಿಸಿದೆ. ಏಕೆಂದರೆ, ಇಟಲಿಯ ಐತಿಹಾಸಿಕ ಬಂದರು ನಗರಗಳಾದ ಟ್ರಿಯೆಸ್ಟೆ, ಜಿನೋವಾ ಮತ್ತು ಪಲೆರ್ಮೋ ಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಹೆಚ್ಚು ಹಣದ ಹೂಡಿಕೆಯ ಅಗತ್ಯವಿರುವುದ್ದು, ಅದನ್ನು ಬಿ.ಆರ್.ಐ ಮೂಲಕ ಸಾಧಿಸಲು ಇಟಲಿ ಬಯಸಿದೆ. ಈ ಹಿನ್ನೆಲೆಯಲ್ಲಿ, ಕ್ಸಿ ಜಿಂಪಿಂಗ್ ರ ಭೇಟಿಯು ಪ್ರಮುಖವಾಗಿದೆ.

ಬಿ.ಆರ್.ಐ ಚೀನೀ ವಿದೇಶೀ ನೀತಿಯ ಒಂದು ಪ್ರಮುಖ ಯೋಜನೆಯಾಗಿದೆ. ಚೀನಾ ವು ಈ ಮೂಲಕ ಐರೋಪ್ಯ ಮಾರುಕಟ್ಟೆಗಳಿಗೆ ಸುಲಭ ಪ್ರವೇಶ ಪಡೆಯಲು, ಟ್ರೆಸ್ಟೆ, ಆಡ್ರಿಯಾಟಿಕ್ ಸಮುದ್ರದ ಕಡಲ ತಡಿಗಳ ಬಂದರುಗಳು ಅವಕಾಶವನ್ನು ಒದಗಿಸುತ್ತವೆ. ಇದು ಮೇಕ್ ಇನ್ ಇಟಲಿ ಉದ್ಯಮಗಳಲ್ಲಿ ಹೂಡಿಕೆ ಮಾಡಲು ಹಾಗೂ ಇದರಿಂದ ಇಟಲಿಯಲ್ಲಿ ಉದ್ಯೋಗ ಗಳನ್ನು ಸೃಷ್ಟಿಸಲು ಅವಕಾಶಗಳನ್ನು ಮುಕ್ತಗೊಳಿಸುತ್ತದೆ. ಚೀನಾ ಅಧ್ಯಕ್ಷರ ಭೇಟಿ ಸಂದರ್ಭಧಲ್ಲಿ 280 ಕೋಟಿ ಡಾಲರು ಮೌಲ್ಯದ 29 ಒಪ್ಪಂದಗಳಿಗೆ ಸಹಿ ಹಾಕಲಾಯಿತು.

ಗ್ರೀಸ್, ಇಟಲಿ ಮತ್ತು ಇತರೆ ಯುರೋಪಿಯನ್ ಒಕ್ಕೂಟ ರಾಷ್ಟಗಳಲ್ಲಿ ಹೆಚ್ಚು ಹೂಡಿಕೆ ಮಾಡುವುದರ ಮೂಲಕ ತನ್ನ ಬಿ.ಆರ್.ಐ ಯೋಜನೆಯನ್ನು ಚೀನಾವು ವಿಸ್ತರಿಸಿ, ಯೂರೋಪಿನಾದ್ಯಂತ ಹೆಚ್ಚು ಪ್ರಭಾವ ಬೀರುವಂತೆ ಮಾಡುವ ಮೂಲಕ ತನ್ನ ಈ ಯೋಜನೆಗೆ ವಿರೋಧ ಬಾರದಂತೆ ತಡೆಯುವಲ್ಲಿ ಚೀನಾವು ಹೆಚ್ಚು ಕಾರ್ಯ ಪ್ರವೃತ್ತವಾಗಿದೆ. ಈ ನಿಟ್ಟಿನಲ್ಲಿ, 2012 ರಲ್ಲಿಯೇ, ರಚನೆಯಾದ 16+1 ಗುಂಪು ಕೇಂದ್ರ ಮತ್ತು ಪೂರ್ವ ಯೂರೋಪ್ ನಲ್ಲಿನ ರಾಷ್ಟಗಳನ್ನು ಈಗಾಗಲೇ ಬಿ.ಆರ್.ಐ ತೆಕ್ಕೆಗೆ ಪಡೆದು ಈ ಯೋಜನೆಯ ಪ್ರಯೋಗ ನೆಲೆಗಳನ್ನು ಹೊಂದಿರುವುದರಿಂದ ಯೂರೋಪ್ ನಲ್ಲಿ ಬಿ.ಆರ್.ಐ ವಿರುದ್ಧದ ಪ್ರತಿರೋಧ ಆಗಲಾರದು ಎಂದು ಚೀನಾ ಭರವಸೆ ಹೊಂದಿದೆ.

ಈ ಹಿನ್ನೆಲೆಯಲ್ಲಿ, ಇಟಲಿಯು ಬಿ.ಆರ್.ಐ ನೊಂದಿಗಿನ ಒಡಂಬಡಿಕೆಯು ಪ್ರಮುಖ ಹೆಜ್ಜೆಯಾಗಿದೆ. ಜೊತೆಗೆ, ಈಗಾಗಲೇ ಸುಮಾರು ಅರ್ಧದಷ್ಟು ಇ.ಯು .ಸದಸ್ಯರು ಬಿ.ಆರ್.ಐ ಸೇರಲು ಒಪ್ಪಿದ್ದಾರೆ. ಯೂರೋಪಿನ ಹೃದಯ ಭಾಗಕ್ಕೆ ಪ್ರವೇಶ ಹೊಂದಲು, ಚೀನಾದ ಬಿ ಆರ್ ಐ ಯೋಜನೆಗೆ ಇಟಲಿ ಬಾಗಿಲು ತೆರೆದಿದೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ನಿಟ್ಟಿನಲ್ಲಿ ಜಿ–7 ನ ಮುಂದಿನ ಹೆಜ್ಜೆ ಏನಿರಬಹುದು ಕಾದು ನೋಡೋಣ. •



ಲೂಲಾ ಜೈಲುವಾಸದ ವಾರ್ಷಿಕದಂದು ಭಾರೀ ಪ್ರತಿಭಟನೆ

ಪ್ರಸಿದ್ಧ ವ್ಯಕ್ತಿಯ ಪ್ರಮುಖ ಘಟನೆಗಳ ಹುಟ್ಟು, ಸಾವುಗಳ ವಾರ್ಷಿಕ ಕೇಳಿದ್ದೇವೆ. ಆದರೆ ಯಾರದ್ದಾದರೂ ಜೈಲುವಾಸದ ವಾರ್ಷಿಕ ಆಚರಿಸಿದ್ದು ಕೇಳಿದ್ದೀರಾ? ಈ ವಿಶೇಷ ಕಳೆದ ವಾರ ಬ್ರೆಜಿಲಿನಲ್ಲಿ ನಡೆಯಿತು. ಬ್ರೆಜಿಲಿನ ಮಾಜಿ ಅಧ್ಯಕ್ಷ ಲೂಲಾ ಅವರನ್ನು ಕಳೆದ ವರ್ಷ ಜೈಲಿಗೆ ಹಾಕಿದ ಏಪ್ರಿಲ್ 7ರಂದು ಇಂತಹ ಮೊಲದ ವಾರ್ಷಿಕವನ್ನು ಭಾರೀ ಪ್ರತಿಭಟನಾ ಪ್ರದರ್ಶನಗಳೊಂದಿಗೆ ಆಚರಿಸಲಾಯಿತು. ಲೂಲಾ ಇರುವ ಕೇಂದ್ರೀಯ ಜೈಲಿನ ಎದುರು 10 ಸಾವಿರಕ್ಕೂ ಹೆಚ್ಚು ಜನ ಪ್ರತಿಭಟನೆ ನಡೆಸಿದರು. ಲೂಲಾ ಅವರ ವರ್ಕರ್ಸ್ ಪಾರ್ಟಿ ಸಂಘಟಿಸಿದ "ಲೂಲಾ ಬಿಡುಗಡೆ ಮಾಡಿ" ದೇಶದಾದ್ಯಂತ ಪ್ರವಾಸ ಮಾಡುತ್ತಾ ಅಂದು ರಾಜಧಾನಿಗೆ ಬಂದಿತ್ತು. ಅಂದು ಬ್ರೆಜಿಲಿನ 17 ಪ್ರಾಂತ್ಯಗಳ ರಾಜಧಾನಿಗಳಲ್ಲಿ ಮತ್ತು ಯು.ಎಸ್, ಬ್ರಿಟನ್ ಸೇರಿದಂತೆ 15 ದೇಶಗಳಲ್ಲಿ ಸಹ ಭಾರೀ ಪ್ರತಿಭಟನೆಗಳು ನಡೆದವು. ಕಳೆದ ಒಂದು ವರ್ಷದಲ್ಲಿ ಹೆಚ್ಚು ಕಡಿಮೆ ಪ್ರತಿ ದಿನ ಲೂಲಾ ಬಂಧಿತರಾಗಿರುವ ಜೈಲಿನ ಮುಂದೆ ಪ್ರತಿಭಟನೆಗಳು ನಡೆಯುತ್ತಿವೆ.

ಕಳೆದ ವರ್ಷದ ಬ್ರೆಜಿಲಿನ ಅಧ್ಯಕ್ಷೀಯ ಚುನಾವಣೆಗಳಲ್ಲಿ ಭಾಗವಹಿಸಿ ಮತ್ತೆ ಅಧ್ಯಕ್ಷರಾಗುವುದನ್ನು ತಪ್ಪಿಸಲು ಈ ಭ್ರಷ್ಟಾಚಾರದ ಸುಳ್ಳು ಕೇಸ್ ಹಾಕಲಾಗಿತ್ತು. ಅದೇ ರೀತಿ ಭ್ರಷ್ಟಾಚಾರದ ಸುಳ್ಳು ಕೇಸ್ ಹಾಕಿ ಹಿಂದಿನ ಅಧ್ಯಕ್ಷ ದಿಲ್ಮಾ ಅವರನ್ನು ಪದಚ್ಯುತಗೊಳಿಸಿ, ವಿಚಿತ್ರ ರೀತಿಯ 'ಸಾಂವಿಧಾನಿಕ ಕ್ಷಿಪ್ರಕ್ರಾಂತಿ'ಯ ಮೂಲಕ ಅಧಿಕಾರ ಕಸಿದುಕೊಂಡ ಬಲಪಂಥೀಯ ಸರಕಾರ ಇದನ್ನು ಮಾಡಿತ್ತು. ಲೂಲಾ ಅವರ ವಿರುದ್ಧ ಭ್ರಷ್ಟಾಚಾರದ ಸುಳ್ಳು ಆಪಾದನೆಯಲ್ಲಿ 12 ವರ್ಷಗಳ ಜೈಲುಶಿಕ್ಷೆ ವಿಧಿಸಿದ 'ನ್ಯಾಯಾಧೀಶ' ಈಗ ಈ ಬಲಪಂಥೀಯ ಸರಕಾರದಲ್ಲಿ 'ನ್ಯಾಯ ವ್ಯವಹಾರಗಳ' ಮಂತ್ರಿ! ಈ ಕೇಸಿನಲ್ಲಿ ಒಂದೇ ಒಂದು ಪುರಾವೆ ಮಂಡಿಸಿರಲಿಲ್ಲ. ಒಬ್ಬ 'ರಾಜಕೀಯ ಕೈದಿ' ಎಂದು ಅಂತರ‍್ರಾಷ್ಟ್ರೀಯವಾಗಿ ಲೂಲಾ ಅವರಿಗೆ ಮನ್ನಣೆ ದೊರಕಿದೆ.

ಲೂಲಾ ಅವರು ಜೈಲಿನಿಂದ ಬ್ರೆಜಿಲಿನ ಮತ್ತು ವಿಶ್ವದ ಜನತೆಗೆ ಬರೆದ ಪತ್ರದಲ್ಲಿ ಹೀಗೆ ಹೇಳಿದ್ದಾರೆ:

"ಇನ್ನೂ ಹೆಚ್ಚಿನ ನ್ಯಾಯಯುತ, ಅಭಿವೃದ್ಧ ಮತ್ತು ಸಾರ್ವಭೌಮ ಬ್ರೆಜಿಲ್ ಕಟ್ಟಲು ನನ್ನ ಜೀವನ ಮುಡಿಪಾಗಿಟ್ಟಿರುವ 'ಅಪರಾಧ'ಕ್ಕಾಗಿ ಒಂದು ವರ್ಷದ ಹಿಂದೆ ನನ್ನನ್ನು ಬಂಧಿಸಲಾಗಿದೆ.. ..ನನ್ನ ದೇಶದಲ್ಲೇ ಬಂದಿಸಲ್ಪಟ್ಟಿರುವ ನಾನೊಬ್ಬ ರಾಜಕೀಯ ಕೈದಿ.. .. ಸಂದರ್ಶನ ಕೊಡಲು, ಮಾತನಾಡಲು, ಇತರರ ಧ್ವನಿ ಕೇಳುವುದರ ಮೇಲೆ ನಿರ್ಬಂಧ ಹೇರಲಾಗಿದೆ. ನನ್ನ ಮೇಲೆ ಹೇರಲಾದ ಈ ದೀರ್ಘ ಮೌನ ನನ್ನ ದನಿಯನ್ನು ಹತ್ತಿಕ್ಕುವುದು ಎಂದು ಅವರು ಭಾವಿಸಿದ್ದರು. ಆದರೆ ಹಾಗಾಗಲಿಲ್ಲ. ಯಾಕೆಂದರೆ ನಮ್ಮದು ಲಕ್ಷಾಂತರ ದನಿಗಳಿವೆ.. ..ಅವರಿಗೆ ಲೂಲಾ ಬಗ್ಗೆ ಮಾತ್ರ ಹೆದರಿಕೆ ಅಲ್ಲ. ಲಕ್ಷಾಂತರ ಲೂಲಾಗಳ ಹೆದರಿಕೆ ಅವರಿಗೆ. ನಾವು ಒಟ್ಟಾದಾಗ ನಾವು ಹೇಗೆ ದೇಶವನ್ನು ಬದಲಿಸಬಲ್ಲೆವು ಎಂಬುದರ ಬಗ್ಗೆ ಅವರಿಗೆ ಭಯ." •

JANASHAKTHI KANNADA VARA PATRIKE APRIL 22-28, 2019 Price: Rs. 10/- Date of Publication: 19 APRIL 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಈ ಜಗತ್ತನ್ನು ಯಾರೋ ಸೃಷ್ಟಿಸಿ ನಡೆಸುತ್ತಿರುವಂತೆ ಕಾಣುತ್ತದಲ್ಲ.!! ಏನಿದು ??

ಜ್ಞಾನ ವಿಜ್ಞಾನ

ಒಬ್ಬ ಮನುಷ್ಯ ಬೆಳಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೆ ಹಲವಾರು ಪ್ರಾಕೃತಿಕ ವಿದ್ಯಮಾನಗಳನ್ನು ನೋಡುತ್ತಾನೆ. ಹಗಲು, ರಾತ್ರಿ, ಸೂರ್ಯ, ಚಂದ್ರ, ಬಿಸಿಲು, ನೆರಳು, ಗಾಳಿ, ಮಳೆ, ಹೂವು, ಹಣ್ಣು, ಪ್ರಾಣಿ, ಪಕ್ಷಿ, ಸಸ್ಯ, ಕೀಟ ಎಲ್ಲವನ್ನು ನೋಡುತ್ತಾನೆ. ಇವೆಲ್ಲವುಗಳನ್ನು ನೋಡುವ ಮನುಷ್ಯನಿಗೆ ಈ ಎಷ್ಟೋ ವಿಷಯಗಳು ವಿಸ್ಮಯಕಾರಕ ಅನಿಸುತ್ತವೆ. ಈ ಲೋಕದಲ್ಲಿ ಮನುಷ್ಯನಿಗಾಗಿ ಹಾಗೂ ಜೀವಜಂತುಗಳಿಗಾಗಿ ಯಾವುದೋ ಒಂದು ಶಕ್ತಿ ಈ ಎಲ್ಲವನ್ನೂ ಸೃಷ್ಟಿಸಿ ನಿಯಂತ್ರಣ ಮಾಡುತ್ತಿದೆ ಎಂಬ ಭಾವನೆ ಹಲವರಲ್ಲಿ ಮೂಡುವುದು ಸಹಜ. ಅಂತಹವರು ಈ ಶಕ್ತಿಯನ್ನು 'ಜಗನ್ನಿಯಾಮಕ ಶಕ್ತಿ' ಎಂದು ಕರೆಯುತ್ತಾರೆ. ನಿಜಕ್ಕೂ ಈ ಪ್ರಕೃತಿಯ ಎಲ್ಲವನ್ನೂ ಸೃಷಿಸಿ ನಿಯಂತ್ರಿಸಿ ಜಗತ್ತನ್ನು ನಡೆಸಿಕೊಂಡು ಹೋಗುತ್ತಿರುವ ಜಗನ್ನಿಯಾಮಕ ಶಕ್ತಿಯೊಂದು ಇದೆಯೇ ? ಅಥವಾ ಈ ಪ್ರಾಕೃತಿಕ ವಿದ್ಯಮಾನಕ್ಕೆ ಬೇರೆ ಏನಾದರೂ ಅರ್ಥವಿದೆಯೇ ?? ಪರಿಶೀಲಿಸೋಣ.

ಆರ್. ರಾಮಕೃಷ್ಣ



ಭಕ್ತ ಕನಕದಾಸರ ಗುರುಗಳು ತಮ್ಮ ಶಿಷ್ಯರೆಲ್ಲರಿಗೆ ಒಂದೊಂದು ಬಾಳೆಹಣ್ಣನ್ನು ಕೊಟ್ಟು ಯಾರೂ ಇಲ್ಲದ ಜಾಗದಲ್ಲಿ ತಿಂದು ಬನ್ನಿ ಎಂದರಂತೆ. ಎಲ್ಲರೂ ಬಾಳೇ ಹಣ್ಣನ್ನು ತಿಂದು ಬಂದಿದ್ದರು. ಆದರೆ ಕನಕದಾಸರು ಬಾಳೆಹಣ್ಣನ್ನು ತಿನ್ನಲು ಆಗಿರಲಿಲ್ಲ. ಅವರು ಹಾಗೇ ಬಂದಿದ್ದರು. ಏಕೆಂದು ಕೇಳಿದಾಗ "ದೇವರಿಲ್ಲದ ಜಾಗವೇ ಇಲ್ಲ. ಎಲ್ಲಡೆಯೂ ದೇವರಿದ್ದಾನೆ. ಆದ್ದರಿಂದ ನನಗೆ ಬಾಳೇಹಣ್ಣನ್ನು ತಿನ್ನಲು ಆಗಲಿಲ್ಲ" ಎಂದರಂತೆ ಅವರು. ಇರಲಿ. ಆ ವಿಷಯ ಅಲ್ಲಿಗೆ ಬಿಡೋಣ.

ಕೇವಲ ಬಾಳೇಹಣ್ಣಿನ ಸ್ವರೂಪವನ್ನು ನೋಡಿಯೇ 'ಜಗನ್ನಿಯಾಮಕ ಶಕ್ತಿ'ಯೊಂದು ಇದೆ ಎಂದು ಕೆಲವರಿಗೆ ಅನಿಸಿದರೆ ಆಶ್ಚರ್ಯವಿಲ್ಲ. 'ಸುಲಿದ ಬಾಳೇ ಹಣ್ಣಿನಂದದಿ' ಎಂಬ ಒಂದು ಮಾತೇ ಇದೆ. ಹಣ್ಣಾದ ಬಾಳೆಯ ಸಿಪ್ಪೆ ಸುಲಿದುಬಿಟ್ಟರೆ ಮುಗಿಯಿತು. ತಿನ್ನಲು ಸಹಿಯಾದ ರುಚಿಕರವಾದ ಹಣ್ಣು ದೊರೆಯುತ್ತದೆ. ತಿನ್ನುವುದಕ್ಕಾಗಿಯೇ ಯಾರೋ ಸಿದ್ದ ಮಾಡಿ ಇಟ್ಟಂತೆ ಇರುತ್ತದೆ ಹಣ್ಣು. ಬೀಜವೂ ಇಲ್ಲ. ಹಣ್ಣಿನ ಸುತ್ತ ಗಟ್ಟಿ ತೊಗಟೆ, ಹಣ್ಣಿನ ಒಳಗೆ ಓಟೆ, ಸೆಲೆ ಯಾವುದೂ ಇಲ್ಲ. ಯಾವ ಕಷ್ಟವೂ ಇಲ್ಲ. ಕೊನೆಗೆ ತಿಂದ ಮೇಲೆ ಕೈತೊಳೆಯಬೇಕಾದ ಕಷ್ಟವೂ ಇಲ್ಲ. ಇದೇ ಜಾಗದಲ್ಲಿ ಸೀತಾಫಲ, ಹಲಸಿನ ಹಣ್ಣು, ಅನಾನಸ್‌ಗಳನ್ನು ನೆನೆಸಿಕೊಳ್ಳಿ. ಬಾಳೆಹಣ್ಣುಗಳಲ್ಲೆವು ಒಂದೇ ಗೊನೆಯಲ್ಲಿ ಸುಲಭವಾಗಿ ಒಂದೆಡೆ ಸಿಗುತ್ತವೆ. ಅದೂ ಕೈ ಗೆಟಕುವ ಎತ್ತರದಲ್ಲಿ. ಮನುಷ್ಯನಿಗೆ, ಪ್ರಾಣಿಪಕ್ಷಿಗಳಿಗೆ ಆಹಾರವಾಗಿ ಸಿಗಲಿ ಎಂದಲ್ಲವೇ 'ಜಗನ್ ನಿಯಾಮಕ'ನ ಈ ಪರಿಯ ವಿಸ್ಮಯದ ಸೃಷ್ಟಿ ಎನಿಸುತ್ತದೆ.

ಎಳನೀರು ಎಂಬ ಅಮೃತ



ಇನ್ನು ಎಳನೀರಿನ ವಿಷಯ ಏನು ಹೇಳುವುದು. ಬಿಸಿಲಿನಲ್ಲಿ ಬಾಯಾರಿದವರಿಗೆ ಸಿಹಿಯಾದ ಎಳನೀರು ಕೊಟ್ಟರೆ ಆಗುವ ಆನಂದಕ್ಕೆ ಪಾರವುಂಟೇ ?? ಖಾಯಿಲೆಯಿಂದ ಬಸವಳಿದವರಿಗಂತೂ ಎಳನೀರು ಅಮೃತ ಸಮಾನ. ವೈದ್ಯರೂ ಎಳನೀರು ಕೊಡಲು ಸೂಚಿಸುತ್ತಾರೆ. ಮನುಷ್ಯನ ಮತ್ತು ಪ್ರಾಣಿಗಳ ಬಾಯಾರಿಕೆಯನ್ನೂ ನೀಗಲೆಂದೇ ಅಲ್ಲವೇ ಎಳನೀರಿನ ಬುರುಡೆಯಲ್ಲಿ ಸಿಹಿನೀರಿನ್ನು ತುಂಬಿರುವುದು. !!!

ಬೆರಗು–ಮೆರುಗು, ವಿಸ್ಮಯಗಳ ರಾಶಿ !!!

ಇನ್ನೂ ಪಕ್ಷಿಗಳ ವಿಷಯಕ್ಕೆ ಬರೋಣ. ಪಕ್ಷಿಗಳಲ್ಲಿ ಸಾವಿರಾರು ಜಾತಿ ಇವೆ. ಹೆಬ್ಬರಳ ಗಾತ್ರ ಪುಟ್ಟ ಗುಬ್ಬಿಗಳಿಂದ ಹಿಡಿದು ಹೆಗ್ಗಣ, ಸತ್ತ ಮೊಲಗಳನ್ನೇ ಹೊತ್ತೊಯ್ಯುವ ರಣಹದ್ದುಗಳವರೆಗೆ ಪಕ್ಷಿಗಳದು ನಾನಾ ಗಾತ್ರ ನಾನಾ ರೂಪ. ಕಾಮನ ಬಿಲ್ಲನ್ನೇ ಮೈವೆತ್ತು ಬಂದಂತಹ ಬಣ್ಣ ಬಣ್ಣದ ಪಕ್ಷಿಗಳಿವೆ. ಪಾರಿವಾಳಗಳದ್ದು ಎಷ್ಟು ಕೋಮಲ ಪುಕ್ಕಗಳು. ಮರಕುಟುಕ, ಕೊಕ್ಕರೆ, ಗೀಜಗ, ಮೈನಾ, ಆಹಾ ಗಿಳಿಗಳು– ಎಷ್ಟು ಜಾತಿ, ಎಷ್ಟು ಬಣ್ಣ. ಕಾಮನಬಿಲ್ಲು ನಾಚಿಕೊಳ್ಳಬೇಕು. ಅಷ್ಟು ಥರದ ಗಿಳಿಪಕ್ಷಿಗಳು. ಸತ್ತ ಪ್ರಾಣಿಗಳನ್ನು ಕುಕ್ಕಿ ತಿಂದು ವಾತಾವರಣವನ್ನು ಸ್ವಚ್ಛವಾಗಿಡಲೆಂದೇ ಅಲ್ಲವೇ ರಣಹದ್ದುಗಳಂತಹ ಪಕ್ಷಿಗಳ ಸೃಷ್ಟಿ ಆಗಿರುವುದು ಅನಿಸುತ್ತದೆ. ಹಾಗೇ ನೋಡುಗರ ಮನ ತಣಿಸಲೆಂದೇ ಅಲ್ಲವೇ ನವಿಲಿನ ರೆಕ್ಕೆಗಳು ನಾನಾ ಜಾತಿಯ ಪಕ್ಷಿಗಳ ರೆಕ್ಕೆ ಪುಕ್ಕಗಳು ಬಣ್ಣಬಣ್ಣದ್ದಾಗಿರುವುದು.?? ಎಂದೂ ಅನಿಸುವುದು.

ಹೂವು–ಹಣ್ಣು

ಮತ್ತೆ ಹಣ್ಣಿನ ವಿಷಯಕ್ಕೆ ಬರುವುದಾದರೆ ಸಪೋಟ, ನೇರಳೆ, ಕಿತ್ತಳೆ, ಮೂಸಂಬಿ, ಸೀಬೆ, ಮಾವು ಬಗೆಬಗೆಯ ಹಣ್ಣುಗಳು. ರುಚಿಯು ಸಹ ಹಲವು. ಮನೆ ಮುಂದಿನ ತೋಟದಲ್ಲಿ ನೋಡಿದರೆ ಅರಳಿ ನಿಂತ ಬಣ್ಣ ಬಣ್ಣದ ಹೂಗಳು. ಮಲ್ಲಿಗೆ, ಗುಲಾಬಿ, ಸೇವಂತಿ, ಡೇರೆ, ಒಂದಕ್ಕಿಂತ ಒಂದು ಚೆಲುವು. ಬಣ್ಣವೂ ಬೇರೆ ಬೇರೆ. ಈ ಹೂವು ಚೆಲುವು ಎಲ್ಲವು ನೋಡುವ ಕಣ್ಣುಗಳಿಗಾಗಿ. ಹಣ್ಣು, ಕಾಯಿ ಹಸಿದವರಿಗಾಗಿ.. ಜಗನ್ನಿಯಾಮಕ ಸೃಷ್ಟಿಸಿರುವುದು. ಹೂವಿನೊಳಗೆ ಬಣ್ಣ, ಹಣ್ಣಿನೊಳಗೆ ಜೇನು–ಸಕ್ಕರೆ. ಎಂತಹ ಆಶ್ಚರ್ಯ. ಪ್ರಾಣಿ ಪಕ್ಷಿಗಳು ಹಣ್ಣನ್ನು ತಿನ್ನಲು ಅವನ್ನು ದೂರ ಕೊಂಡೊಯ್ಯುತ್ತವೆ. ಹಣ್ಣು ತಿಂದು ಬೀಜವನ್ನು ಎಲ್ಲಿಯಾದರೂ ಬಿಡುತ್ತವೆ. ಈ ಬೀಜಗಳಿಂದ ಅಲ್ಲಿ ಹೊಸ ಹಣ್ಣಿನ ಗಿಡಮರಗಳು ಹುಟ್ಟಿಕೊಂಡು ಹಣ್ಣಿನ ಗಿಡದ ಸಂತತಿ ಹರಡಿಕೊಳ್ಳುತ್ತದೆ. ಹಣ್ಣುಗಳಲ್ಲಿ ಸಿಹಿಯನ್ನಿಟ್ಟಿರುವುದು ಅದೇ ಉದ್ದೇಶಕ್ಕಾಗಿಯೇ ಅಲ್ಲವೇ? ಎಂಬ ಪ್ರಶ್ನೆ ಏಳುತ್ತದೆ.



ಇದನ್ನು ನೀವು ಎಷ್ಟೋ ಸಾರಿ ನೋಡಿರಬಹುದು. ಹಸಿರು ಹಿನ್ನೆಲೆಯ ನೆಲದಲ್ಲಿ ಬಿದ್ದಿರುವ ಹಸಿರು ಎಲೆ ಚಲಿಸತೊಡಗುತ್ತದೆ, ಹಸಿರ ಎಲೆಗೆ ಜೀವ ಬಂತೋ ಎಂಬಂತೆ. ಉಹುಂ, ಅದು ಗಿಡಮರದಿಂದ ಬಿದ್ದ ಹಸಿರೆಲೆ ಅಲ್ಲ. ಹಸಿರು ಎಲೆಯ ಹಾಗೇ ಕಾಣುವ ನಡೆಯಲು ಕೈಕಾಲು, ಕಣ್ಣುಬಾಯಿ ಪುಟ್ಟತಲೆ ಇರುವ ಜೀವಂತ ಹುಳು. ಹೌದು, ಹಸಿರೆಲೆಯೇ ಎದ್ದು ನಡೆಯುತ್ತಿರುವಂತೆ ನಡೆಯುತ್ತಿದೆ. ಅಬ್ಬ, ಎಲೆಗೂ ಹುಳುವಿಗೂ ಏನು ವ್ಯತ್ಯಾಸವೇ ಇಲ್ಲ. ಯಾವ ಶತ್ರುವಿನ ಗಾಳಕ್ಕೂ ಸುಲಭಕ್ಕೆ ಸಿಲುಕದು ನೋಡಿ. ಇದಲ್ಲವೇ ಜಗನ್ನಿಯಾಮಕನ ಸೃಷ್ಟಿ. ಅಗೋ, ಒಣಗಿದ ಹುಲ್ಲುಕಡ್ಡಿಯ ನಡುವೆ ಹುಲ್ಲುಕಡ್ಡಿಯಂತೆಯೇ ಕಾಣುವ ಕಡ್ಡಿ ಹುಳು. ಹಸಿರು ಹುಲ್ಲಿನ ನಡುವೆ ಹಸಿರು ಬಣ್ಣದ ಹುಳು. ಒಣಹುಲ್ಲು ಕಡ್ಡಿಗಳ ನಡುವೆ ಅದೇ ಬಣ್ಣದ ಕಡ್ಡಿಹುಳು. !! ಯಾರಾದರೂ ಉದ್ದೇಶಪೂರ್ವಕವಾಗಿ ಇವನ್ನೆಲ್ಲಾ ಸೃಷ್ಟಿಸದೇ ಇವು ಹೇಗೆ ಈ ರೀತಿಯಾಗಿ ರೂಪುಗೊಂಡವು?? ಎಂಬ ಪ್ರಶ್ನೆ ಮನದಲ್ಲಿ ಮೂಡುತ್ತದೆ.

ಹೂವಿನೊಳು ಸಿಹಿಜೇನು 'ಮಕರಂದ'ವನು ತುಂಬಿದವರು ಯಾರು?



ನಾವು ಎಷ್ಟೋ ಸಾರಿ ನೋಡಿರುತ್ತೇವೆ. ಅರಳಿನಿಂತ ಕೆಂಪು 'ದಾಸವಾಳ'ದ ಹೂವಿನ ಮೇಲೆ ಹಾಗೂ ನಾನಾ ಹೂಗಳ ಮೇಲೆ ದುಂಬಿಗಳು ಹಾರಾಡುತ್ತವೆ. ಅಲ್ಲಿ ದುಂಬಿಗಳಿಗೇನು ಕೆಲಸ? ಅವು ಮಕರಂದ ಹೀರಲು ಬಂದಿವೆ. ಹೀಗೆ ಮಕರಂದ ಹೀರುವಾಗ ಹೂವಿನೊಳಗಿನ ಪರಾಗ ಎನ್ನುವ ಸಣ್ಣ ಧೂಳಿನ ಕಣಗಳು ಅವು ಹುಳುವಿನ ಮೂತಿಯಲ್ಲಿರುವ ಜೇನು ಹೀರುವ ಕೊಳವೆಗಳಿಗೆ ಅಂಟಿಕೊಳ್ಳುತ್ತವೆ. ಮುಂದೆ ಜೇನುಹುಳುವು ಮತ್ತೊಂದು ಹೂವಿನಲ್ಲಿ ಜೇನು ಹೀರಲು ಹೋದಾಗ ಈ ಪರಾಗದ ಧೂಳು ಆ ಹೂವಿನಲ್ಲಿ ಬಿದ್ದು ಹೂವು ಫಲಕಟ್ಟಿ ಕಾಯಾಗುತ್ತದೆ. ಇಲ್ಲ ಬೀಜವಾಗುತ್ತದೆ. ಹೂವಿನೊಳಗಿರುವ 'ಮಕರಂದ' ಅಂದರೆ ನಾನಾ ಬಗೆಯ ಗಿಡಮರಗಳ ಹೂಗಳ ನಡುವೆ ಪರಾಗದ ವಿನಿಮಯ ಏರ್ಪಡಿಸಿ ಸಸ್ಯಗಳ ಫಲ ಸಮೃದ್ಧಿ ಮಾಡುವುದಕ್ಕಾಗಿ, ಸಸ್ಯ ಸಂತಾನಾಭಿವೃದ್ಧಿ ಮಾಡುವುದಕ್ಕಾಗಿ ಹೂವಿನೊಳಗೆ ಇಟ್ಟಿರುವ 'ಲಂಚ'. ಸವಿಜೇನಿಗಾಗಿ ದುಂಬಿಗಳು ಹಾರುತ್ತಾ ಬಂದಿವೆ ಎಂಬುದು ಹೌದಾದರೆ, ಹೂವಿನೊಳಗೆ ಈ ಸಿಹಿಜೇನು–'ಮಕರಂದ'ವನು ತುಂಬಿಟ್ಟವರು ಯಾರು.?



ಸೂರ್ಯ ಚಂದ್ರರನು ನೇಮಿಸಿದವರು ಯಾರು?

ಅದು ನಟ್ಟ ನಡುರಾತ್ರಿ. ಇರುಳು ಜಾರಿ ಮೆಲ್ಲ ಮೆಲ್ಲಗೆ ಕತ್ತಲು ಕಳೆಯುತ್ತಿದೆ. ಮುಂಜಾನೆ ಮೂಡಣ ದಿಕ್ಕಿನಲ್ಲಿ ಏನೋ ಹೊಂಬಣ್ಣ.. ಕೊಂಚ ಕೊಂಚ ಮುಂಬೆಳಕು. ತಣ್ಣನೆಯ ಗಾಳಿ ಸದ್ದಿಲ್ಲದೆ ಹಾಯುತಿದೆ. ರೈತಾಪಿ ಜನರು ಹೊಲ, ಗದ್ದೆ, ಕೊಟ್ಟಿಗೆ, ಅಡುಗೆ ಮನೆಯ ಕೆಲಸಗಳಿಗೆ ಎದ್ದು ಹೋಗಬೇಕಲ್ಲ –ಅಗೋ, ಕೊಕ್ಕೋ$$$$ಕ್ಕೋ..ಕೋ$$$$$$ ಕೋಳಿ ಕೂಗುತ್ತಿದೆ. ಓಹೋ ಜಗದ ಜೋಂಪು ನಿದಿರೆಗೆ ಇನ್ನೂ ತೆರೆ ಬಿದ್ದಿಲ್ಲ. ಅಗೋ, ಈಗ ಸೂರ್ಯ ಹುಟ್ಟಿ ತನ್ನ ಬೆಳಕಿನಿಂದ ಜಗತ್ತನ್ನು ಬೆಳಗಿದ್ದಾನೆ. ಕತ್ತಲನ್ನು ಓಡಿಸಿ ಚರಾಚರ ಜೀವಿಗಳಿಗೆ ಬೆಳಕು ತೋರಲೆಂದೇ ಜಗನ್ನಿಯಾಮಕನ ನಿಯಮದಂತೆ ಸೂರ್ಯನು ಕರ್ತವ್ಯ ನಿರ್ವಹಿಸುತ್ತಾನೆ. ಸೂರ್ಯ ಸಕಲ ಜೀವ ರಾಶಿಗಳ ಚೈತನ್ಯದ ಹಿಂದಿನ ಶಕ್ತಿ. ಯಾವುದಾದರೂ ಕಾರಣಕ್ಕೆ ಎಂದಾದರೂ ಸೂರ್ಯ ತಡವಾಗಿ ಬಂದಿದ್ದು ನೋಡಿದ್ದೀರಾ?? ಕೇಳಿದ್ದೀರಾ!! ಅಬ್ಬಬ್ಬ!!! ಜಗವ ಬೆಳಗುವ ದೊಂದಿ.. ಲೋಕದ ಮೇಲೆ ಮಹಾತೇಜವೃಷ್ಠಿ. ಏನಿದೇನಿದು ಈ ಅಮೋಘ ಸೃಷ್ಠಿ. ??

ಲೋಕದ ಅಗಣಿತ ಜೀವರಾಶಿಗಳು ವಿಶ್ರಾಂತಿ ಪಡೆಯಲು, ನಿದ್ರಿಸಲು ಅನುಕೂಲಕರವಾಗಿ ಸೂರ್ಯನು ರಾತ್ರಿ ಮುಳುಗಿ ಹೋಗುತ್ತಾನೆ. ಸೂರ್ಯನಿಲ್ಲದ ರಾತ್ರಿಯಲ್ಲಿ ಜಗತ್ತಿಗೆ ಕೊಂಚ ಬೆಳಕನ್ನು ನೀಡುವ ಹೊಣೆಯನ್ನು ಚಂದ್ರ ಮತ್ತು ನಕ್ಷತ್ರಗಳು ಹೊತ್ತುಕೊಳ್ಳುತ್ತವೆ. ಹೀಗಾಗಿ ಸೂರ್ಯ ಚಂದ್ರ ನಕ್ಷತ್ರಗಳು ಸರದಿಯಂತೆ ಭೂಮಿಗೆ ಬೆಳಕನ್ನು ನೀಡುತ್ತವೆ. ಮಲಗಿರುವ ಜನರನ್ನು ಕೂಗಿ ಎಬ್ಬಿಸಲು ಜಗನ್ನಿಯಾಮಕನೇ ಕೋಳಿಗಳನ್ನು ನೇಮಿಸಿರುವುದು. ಅದಕ್ಕಾಗಿಯೇ ಅವು ಮುಂಜಾನೇ ಕೊಕ್ಕೋಕೋ ಎಂದು ಕೂಗುವುದು ಅಲ್ಲವೇ? ಎನಿಸಬಹುದು.

ಮಳೆ–ಗಾಳಿ ಋತುಮಾನ

ಒಂದು ವರ್ಷ ಕಾಲದಲ್ಲಿ ಮೂರು ಭಾಗಗಳಿವೆ. ಮಳೆಗಾಲ, ಚಳಿಗಾಲ, ಬೇಸಿಗೆ. ಮಳೆಗಾಲದಲ್ಲಿ ಮಳೆ ಸುರಿಯುತ್ತದೆ. ಇಳೆಯ ಮೇಲೆ ಬೆಳೆ ಹುಲುಸಾಗಿ ಬೆಳೆಯುವುದಕ್ಕಾಗಿಯೇ ಈ ಕಾಲದಲ್ಲಿ ಹೀಗೆ ಮಳೆ ಸುರಿಯುತ್ತದೆ. ಮೋಡಗಳನ್ನು ತರುಬಿ ಮಳೆ ಸುರಿಸುವುದಕಾಗಿಯೇ ಬೆಟ್ಟಗುಡ್ಡಗಳು, ಪರ್ವತಗಳು ತಲೆ ಎತ್ತಿ ನಿಂತಿವೆ. ಮಳೆಗಾಲ ಮುಗಿದ ಮೇಲೆ

ಪುಟ 14 ಕ್ಕೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**